

ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ


ಸಂಪುಟ 25 ಸಂಚಿಕೆ 5
ಫೆಬ್ರವರಿ 2, 2003 ಬೆಲೆ ರೂ. 3.00



ತ್ರಿಪುರಾ ಚುನಾವಣೆ : ರಾಷ್ಟ್ರದ ಸಮಗ್ರತೆ ರಕ್ಷಿಸುವ ಸಮರ




ಎತ್ತ ಸಾಗಿದೆ ಕಾಂಗ್ರೆಸ್?




ಅರಣ್ಯ ನೌಕರರು ಅತಂತ್ರದಲ್ಲಿ


ತೊಗರಿ ಮಂಡಳಿ ರಚನೆ ಮುಂದೇನು?



ಹಿರಿಯ ಸಂಗಾತಿ ಎಂ.ಎನ್.ಉಗ್ರಪ್ಪ ಇನ್ನಿಲ್ಲ



ಕಮ್ಯುನಿಸ್ಟರತ್ತ ಕಣ್ಣು..................



ವಿಮೋಚನಾ ಸಮರದಲ್ಲಿ....

ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 13



ಹಿಂದಿನ ಸಂಚಿಕೆಯಲ್ಲಿ ಭಾರತೀಯ ಸೈನಿಕರು ಕಷ್ಟಕರ ಸನ್ನಿವೇಶಧಲ್ಲಿ ಮರುಭೂಮಿಯಲ್ಲಿ ವಾಹನ ಚಲಾಯಿಸಿದ್ದು, ಬ್ರಿಟಿಷರ ಪಕ್ಷಪಾತದ ವಿರುದ್ಧ ತಿರುಗಿಬಿದ್ದದ್ದು, ಬ್ರಿಟಿಷ್ ಹಾಗೂ ಭಾರತೀಯ ಸೈನಿಕರ ನಡುವೆ ಗುಂಡಿನ ಚಕಮಕಿ, ಈ ವೀರಪುತ್ರರನ್ನು ಬ್ರಿಟಿಷ್ ಅಧಿಕಾರಿಗಳು ಗುಂಡಿಟ್ಟು ಕೊಂದದ್ದು, ಎಲ್ಲಾ ಸೈನಿಕರು ರೈಲ್ವೆ ನಿಲ್ದಾಣಕ್ಕೆ ಬರುವುದರ ಮೇಲೆ ನಿರ್ಬಂಧ, ಜೈಪಾಲ್ ಸಿಂಗರ ದಿಢೀರ್ ವರ್ಗಾವಣೆ ಮತ್ತು ಮುಂದೆ ಸಂಘಟನೆಯಲ್ಲಿ ವಹಿಸಬೇಕಾದ 'ಯಲ್ಲೋ' ಪಾತ್ರದ ಬಗ್ಗೆ ಓದಿರುವಿರಿ. ಮುಂದೆ...

ಕನ್ನಡಕ್ಕೆ: **ಬಿಶ್ವ ಕುಂದಾಪುರ**

ಸಾಮ್ರಾಜ್ಯಶಾಹಿಗಳ ವಿಧೇಯ ನಾಯಿಗಳಂತೆ ವರ್ತಿಸುತ್ತಿದ್ದ ಕೆಲವೇ ಭಾರತೀಯ ಅಧಿಕಾರಿಗಳನ್ನು ಸಂಕೇತಿಸಲು ನಾವು ಸಂಘಟನೆಯಲ್ಲಿ ಬಳಸುತ್ತಿದ್ದ ಪದ 'ಯಲ್ಲೋ'. ಈಗಿನ ಭಾರತೀಯ ಸೇನೆಯ ಜನರಲ್‌ಗಳಿಗೆ ಅವಮಾನಿಸುವುದು ನನ್ನ ಉದ್ದೇಶವಲ್ಲ. ನಾನು ಬಳಸಿದ ಭಾಷೆ ಕಠಿಣವಾಗಿರಬಹುದು. ಆದರೆ ಅದು ಇತಿಹಾಸದ ಕಟು ಸತ್ಯ.

ಕಮಾಂಡೆಂಟ್ ಜತೆಗಿನ ಘಟನೆಯ ಎರಡು ದಿನಗಳ ನಂತರ, ನನ್ನನ್ನು ಲಾಹೋರ್ ಸಪ್ಲೈ ಡಿಪೋಗೆ ನೇಮಿಸಿದ ಆದೇಶ ಬಂತು. ಈ ನೇಮಕದ ಹಿಂದಿನ ನಿಜವಾದ ಉದ್ದೇಶವನ್ನು ಮರೆಮಾಚುವ ಸಲುವಾಗಿ ಅಡ್ಜುಟಂಟ್ ಒಂದು ಗಾಳಿ ಮಾತನ್ನು ತೇಲಿಬಿಟ್ಟರು. ನಿಜವಾದ ಕಾರ್ಯಾಚರಣೆಯಲ್ಲಿ ಭಾಗವಹಿಸಲು ಹೆದರುತ್ತಿರುವುದರಿಂದ ನನ್ನನ್ನು ಲಾಹೋರ್‌ಗೆ ನೇಮಿಸಲಾಗಿದೆಯೆಂಬುದೇ ಈ ಗಾಳಿ ಮಾತು.

ನಿಜ ಹೇಳಬೇಕೆಂದರೆ ನೈಜ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳಲು ನನ್ನ ಮನಸ್ಸು ಹಾತೊರೆಯುತ್ತಿತ್ತು. ನನ್ನ ಸೈನಿಕರಿಲ್ಲದೆ ನನ್ನನ್ನು ಕಳಿಸಲು ಬ್ರಿಟಿಷ್ ಕಮಾಂಡೆಂಟ್ ಯೋಜಿಸಿದ್ದ. ವಿದೇಶದಲ್ಲಿ ಯಾವುದಾದರೂ ಮಾರ್ಗದಲ್ಲಿ ಹಾಳಾಗಿ ಹೋಗಲಿ ಅಥವಾ ಯಾವುದಾದರೂ ಕೊಳಕು ಡಿಪೋದಲ್ಲಿ ನಾನು ಬಿದ್ದಿರಬೇಕು ಎಂಬುದು ಆತನ ಯೋಜನೆಯಾಗಿತ್ತು. ನನಗೆ ನನ್ನ ಸೈನಿಕರ ಜತೆ ಒಂದು ವಿಭಾಗದಲ್ಲಿ ಇರಬೇಕೆಂಬ ಆಸೆಯಿತ್ತು. ಯುದ್ಧವನ್ನು ನೋಡಬೇಕು, ಅದರಲ್ಲಿ ಭಾಗವಹಿಸಬೇಕು ಎಂಬ ಬಯಕೆಯಿತ್ತು.

24 ಗಂಟೆಗಳೊಳಗೆ ನಾನು ಲಾಹೋರಿನಲ್ಲಿದ್ದೆ. ಸರಬರಾಜು(ಸಪ್ಲೈ) ಡಿಪೋದಲ್ಲಿ ಮೇಜರ್ ಕ್ಯಾನಿಂಗ್ ಪ್ರತಿಕೂಲ ಪ್ರತಿಕ್ರಿಯೆಯೊಂದಿಗೆ ನನ್ನನ್ನು ಬರಮಾಡಿಕೊಂಡ.

"ನಿನ್ನ ವಿರುದ್ಧ ಪ್ರತಿಕೂಲ ವರದಿಯಿದೆ. ನಾನು ನಿನ್ನನ್ನು ಗಮನಿಸುತ್ತೇನೆ. 60 ದಿನಗಳ ನಂತರ ಜಿ.ಎಚ್.ಕ್ಯೂಗೆ ವರದಿ ಕಳುಹಿಸುತ್ತೇನೆ. ಎಚ್ಚರದಿಂದಿರು, ತರುಣನೇ" ಎಂದಾತ ನುಡಿದ.

ನಾನು "ಆಗಬಹುದು ಸಾರ್' ಎಂದು ತಕ್ಷಣವೇ ಉತ್ತರಿಸಿದೆ. ನಾನು ಹತಾಶ ಮೂಡಿನಲ್ಲಿದ್ದೆ.

ಲಾಹೋರ್‌ನಲ್ಲಿ ಕಮ್ಯುನಿಸ್ಟ್‌ರತ್ತ ಕಣ್ಣು.....

ಲಾಹೋರ್‌ನಲ್ಲಿ ನಮ್ಮ ಬಲಿಷ್ಠ ಘಟಕ ಇತ್ತೆಂಬುದು ನನಗೆ ಗೊತ್ತಿತ್ತು. ಆದರೆ ನಾನು 'ಎಕ್ಸ್‌ಪೋಸ್'ಆಗಿದ್ದೆ. ಹೀಗಾಗಿ ಅವರನ್ನು ಸಂಪರ್ಕಿಸಬಾರದೆಂಬ ಸೂಚನೆ ನೀಡಲಾಗಿತ್ತು. ಅಲ್ಲದೆ ಆ ಘಟಕಕ್ಕೂ ನನ್ನ ಬಗ್ಗೆ ತಿಳಿಸಲಿಲ್ಲ. ಆದರೆ ನಮ್ಮ ಕಾರ್ಯನಿರ್ವಹಣೆಯ ವಿಧಾನ ಚೆನ್ನಾಗಿ ಬಲ್ಲವನಾದ್ದರಿಂದ ಘಟಕವನ್ನು ಪತ್ತೆ ಹಚ್ಚುವುದು ನನಗೆ ಕಷ್ಟವಾಗಲಿಲ್ಲ. ಅಲ್ಲಿನ ಘಟಕದ ಸಂಘಟನಾ ಸಮಿತಿಯ ಕ್ಯಾಪ್ಟನ್ ವೈ ನನ್ನನ್ನು ಆಸೆ ಕಂಗಳಿಂದ ನೋಡಿದ. ಆತನೊಬ್ಬ ಪಠಾಣ್ ತರುಣ. ಒಂದು ದಿನ ಮೆಟ್ರೋದಲ್ಲಿ ಊಟಕ್ಕೆ ಬರುವಂತೆ ಆತ ನನ್ನನ್ನು ಆಹ್ವಾನಿಸಿದ. ಮುಂದೇನಾಗಲಿದೆ ಎಂಬುದು ನನಗೆ ತಿಳಿದಿತ್ತು.

ನಾನು ರಾತ್ರಿ ಎಂಟು ಗಂಟೆಗೆ ಮೆಟ್ರೋ ತಲುಪಿದೆ. ಮೆಟ್ರೋದ ತಣ್ಣನೆ ಗಾರ್ಡನ್‌ನಲ್ಲಿ ಕ್ಯಾ.ವೈ ನನ್ನನ್ನು ಕಾಯುತ್ತಿದ್ದ. ಅಲ್ಲಿ ಬೆಳಕು ಮಂದವಾಗಿತ್ತು. ಒಬ್ಬಳು ಕಪ್ಪಗಿನ ಆಂಗ್ಲೋ ಇಂಡಿಯನ್ ಹುಡುಗಿ ವೇದಿಕೆ ಮೇಲೆ ಅಗ್ಗದ ಯುದ್ಧಗೀತೆಯನ್ನು ಹಾಡಿದಳು. ಅಲ್ಲಿ ನರ್ತನ ನಡೆದಿತ್ತು. ಭಾರತೀಯ ತರುಣಿಯರ ನಾಟ್ಯ, ಗೌರವಾನ್ವಿತ ಭಾರತೀಯ ತರುಣಿಯರು ಕುಣಿದಿದ್ದನ್ನು ನಾನು ಅದೇ ಮೊದಲ ಬಾರಿಗೆ ನೋಡಿದೆ. ಮಿರುಗುವ ಸಲ್ವಾರ್ ಕಮೀಜ್ ತೊಟ್ಟು, ಕಡುಕಪ್ಪು ಬಾಬ್‌ಕಟ್ ಕೂದಲಿನ ಆ ತರುಣಿಯರು ಅಪ್ಸರೆಯರ ಮಾಯಾಲೋಕವನ್ನೇ ಸೃಷ್ಟಿಸಿದ್ದರು. ನಮ್ಮ ದೇಶವನ್ನು ಆಧುನೀಕರಣಗೊಳಿಸಬೇಕು, ಬ್ರಿಟೀಷರಿಗೆ ಸಮನಾಗಿ ನಮ್ಮ ಜನರನ್ನು ಸಾಂಸ್ಕೃತಿಕ ಪ್ರಗತಿಯ ಹಾದಿಯಲ್ಲಿಡಬೇಕು ಎಂದು ನಾನು ಆಗಾಗ ಹಗಲುಗನಸು ಕಾಣುತ್ತಿದ್ದೆ. ನಮ್ಮ ಹುಡುಗಿಯರು ಕುಣಿಯುವುದು, ವಿಮಾನ ಚಾಲನೆ ಮಾಡುವುದು ಹಾಗೂ ಯುರೋಪಿಯನ್ ಹುಡುಗಿಯಂತೆ ನಮ್ಮ ಹುಡುಗಿಯರು ಕೂಡ ಪುರುಷರ ಜತೆ ಮುಕ್ತವಾಗಿ ಬೆರೆಯುವುದು ಇವೇ ಮೊದಲಾದವುಗಳ ಕನಸು ಕಂಡಿದ್ದೆ.

ನನ್ನ ಜೀವನದಲ್ಲಿ ಅದೇ ಮೊದಲ ಬಾರಿಗೆ ಮೆಟ್ರೋದಲ್ಲಿ ಆ ಕನಸು ನನಸಾಗಿದ್ದನ್ನು ಕಂಡೆ. ವಿದೇಶಿ ಆಡಳಿತವೊಂದರಡಿ ನಮ್ಮ ಸಾಮಾಜಿಕ ಅಭಿವೃದ್ಧಿಯ ಮೂಲಶಕ್ತಿಗಳು ನಮಗೆ ಸಮಸ್ಥಾಯಿತ್ವ ನೀಡುತ್ತಿದ್ದವು, ಆ ರೀತಿ ಜೀವಿಸುವುದು ಹಾಗೂ ಚಿಂತಿಸುವುದು ಪ್ರಾಥಮಿಕ ಸಾಮಾಜಿಕ ಅಗತ್ಯವಾದರೂ, ಸಾಮ್ರಾಜ್ಯಶಾಹಿಗಳಿಗೆ ನಮ್ಮ ರಾಷ್ಟ್ರೀಯ ಪ್ರತಿರೋಧಕ ಕುರುಹು ಆಗಿತ್ತು.

ಸೇನೆಯಲ್ಲಿನ ನಮ್ಮ ಹುಡುಗರು, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿನ ನಮ್ಮ ಹುಡುಗಿಯರು ಬ್ರಿಟೀಷರಿಗೆ ಸವಾಲು ಹಾಕುತ್ತಿದ್ದರು. "ನಮ್ಮನ್ನು ಆಳಿಕೊಳ್ಳಲು ನಾವು ಅಸಮರ್ಥರು ಎಂದು ನೀವು ಹೇಳುತ್ತೀರಿ. ವರ್ಷಗಟ್ಟಲೆ ಉಳುಮೆ ಮಾಡಿದ ಕ್ಷೇತ್ರಗಳಲ್ಲಿ ನಾವು ಅದನ್ನು ಉತ್ತಮವಾಗಿ ಮಾಡುತ್ತಿದ್ದೇವೆ". ಇಂಥ ಮುನ್ನಡೆ ಸಮಾಜದ ಮೇಲ್ವರ್ಗಕ್ಕೆ ಮಾತ್ರ ಸೀಮಿತ ಎಂಬುದು ನನಗೆ ಅರಿವಿತ್ತು. ಲಕ್ಷಾಂತರ ಜನರು ಹಸಿವಿನಿಂದ ಕಂಗಾಲಾಗಿದ್ದು ನೊಣಗಳಂತೆ ಸಾಯುತ್ತಿದ್ದಾರೆ.

ಆದರೆ ಒಂದು ರಾಷ್ಟ್ರೀಯ ವಿಮೋಚನೆ ಹೋರಾಟದಲ್ಲಿ, ಬ್ರಿಟೀಷರಂತೆಯೇ ಕರುಣೆಯಿಲ್ಲದೆ ಈಗ ನನ್ನ ದೇಶದ ಆಡಳಿತ ನಡೆಸುತ್ತಿರುವ, ಈ ವರ್ಗದ ಸಾಧನೆ ಕೂಡ ನನಗೆ ಹೆಮ್ಮೆ ತರಿಸುತ್ತಿದೆ.

ಮೋಜು ಮಜಾದ ನಾಡಿನಲ್ಲಿ......

"ಪಂಜಾಬ್ ರಾಜಧಾನಿಯಲ್ಲಿ ಹಾಯಾಗಿರಿ, ಜೈಪಾಲ್!" ಕ್ಯಾ.ವೈ ನನ್ನನ್ನು ಆಹ್ವಾನಿಸಿದ. ಅಂಬಾಲಾ ಕಂಟೋನ್ಮೆಂಟ್‌ನ ಮಂಕು ಕವಿದ ವಾತಾವರಣ, ನನ್ನ ಜನರು, ಸಹೋದ್ಯೋಗಿಗಳು ಮತ್ತು ಕೆಲಸದ ಅಗಲುವಿಕೆಯಿಂದ ಉದ್ಭವಿಸಿದ ವಿರಹ ವೇದನೆ ಇವೆಲ್ಲದರಿಂದ ಫ್ಯಾಶನ್, ಶಾಂಪೇನ್ ಮತ್ತು ಮೋಜು ಮಜಾದ ಉಲ್ಲಾಸದ ಸ್ಥಳಕ್ಕೆ ನಾನು ಬಂದಿದ್ದೆ. ಅಮೇರಿಕನ್ ಹೂಗಿಬುಗಿ ಮತ್ತು ಜಾರ್ಝ್ ಕೇಳುತ್ತಾ ಕುಳಿತೆವು. ಮಧುರ ಸಂಗೀತದ ಅಲೆಯಲ್ಲಿ ನಾನು ತೇಲಿಹೋದೆ.

"ಸ್ವಲ್ಪ ಕಲ್ಪನೆ ಮಾಡಿಕೊಳ್ಳಿ ಜೈಪಾಲ್! ಇಲ್ಲಿ ಕುಳಿತುಕೊಂಡರೆ ಯುದ್ಧ ಒಂದು ದೊಡ್ಡ ಉತ್ಸವದಂತೆ ಕಾಣುತ್ತದೆ. ಈ ಜನರು ಅದನ್ನು ಇಷ್ಟಪಡುವುದನ್ನು ಕಂಡು ನನಗೆ ಆಶ್ಚರ್ಯ ಆಗುತ್ತದೆ. ಮನುಷ್ಯರ ಮಾಂಸವನ್ನು ತಿಂದು ತೇಗುವ ಈ ಅಮಾನುಷ ಪ್ರವೃತ್ತಿ ಕಂಡು ಆಘಾತವಾಗುತ್ತದೆ. ನಮ್ಮ ಗಡಿಯುದ್ದಕ್ಕೂ ಬರ್ಮಾದ ಕಾಡುಗಳ ಮೂಲಕ ಒಂದು ದೊಡ್ಡ ಸೇನೆ ಈಗ ತಾನೇ ಹಿನ್ನಡೆದಿದೆ. ಸಾಮ್ರಾಜ್ಯಶಾಹಿಯ ಕೆಟ್ಟ ಗುಣವೊಂದು ಬಯಲಾಗಿದೆ. ಬ್ರಿಟೀಷ್ ಅಧಿಕಾರಿಗಳು 60 ಸಾವಿರ ಭಾರತೀಯ ಸೈನಿಕರನ್ನು ಸಿಂಗಾಪುರದಲ್ಲಿ ಕೈಬಿಟ್ಟಿದ್ದಾರೆ. ಬರ್ಮಾದಲ್ಲಿ ಬಿಳಿಯ ಅಧಿಕಾರಿಗಳು ತಮ್ಮ ಜವಾನರನ್ನು ನಡುನೀರಿನಲ್ಲಿ ಕೈಬಿಟ್ಟು ತಮ್ಮ ಸುರಕ್ಷತೆಗಾಗಿ ಪಲಾಯನ ಮಾಡಿದ್ದಾರೆ. ಸಾವಿರಾರು ಭಾರತೀಯರು ದಾಟಲು ಕಾಯುತ್ತಿದ್ದಾಗ ಬಿಳಿಯ ಪಡೆಗಳನ್ನು ರಕ್ಷಿಸಲಿಕ್ಕಾಗಿ ಸೇತುವೆಗಳನ್ನು ಸ್ಫೋಟಿಸಲಾಯಿತು. ನಾನು ಅಲ್ಲಿದ್ದೆ. ಅನಾಹುತವನ್ನು ನಾನು ನೋಡಿದೆ. ಭಾರ ಹೊರಲಾರದೆ ತಾಯಂದಿರಲಿ ತಮ್ಮ ಮಕ್ಕಳನ್ನು ಇಳಿಸಿ ಅಲ್ಲಲ್ಲೇ ಬಿಟ್ಟು ಮುಂದೆ ಸಾಗಿದರು. ಗಂಡಸರು ನೆಲಕ್ಕೆ ಒರಗಿದವರು ಮತ್ತೆ ಮೇಲೇಳಲೇ ಇಲ್ಲ. ಬಂಡೆದ್ದ ಬರ್ಮಾದ ಹಳ್ಳಿಗಾಡುಗಳಲ್ಲಿ ಭಾರತೀಯ ಸೈನಿಕರು ಅಲೆದರು. ಬರ್ಮಾ ಗೆರಿಲ್ಲಾಗಳು ಸಾವಿರಾರು ಭಾರತೀಯ ಸೈನಿಕರಿಗೆ ವಿಷ ಹಾಕಿದರು. ಅದಕ್ಕಾಗಿ ನೀನು ಬರ್ಮಾವನ್ನು ದೂಷಿಸುವಂತಿಲ್ಲ. ಅವರು ನಮ್ಮನ್ನು ದ್ವೇಷಿಸುವುದಿಲ್ಲ. ಅವರ ಶತೃತ್ವ ಬ್ರಿಟೀಷರೊಂದಿಗೆ ಬ್ರಿಟಿಷರಿಗಾಗಿ ಬರ್ಮಾವನ್ನು ದಾಸ್ಯಕ್ಕೊಳಪಡಿಸಿದ ಬಾಡಿಗೆ ಸೈನಿಕರು ನಾವು. ನಮಗೆ ಸರಿಯಾಗಿಯೇ ಏಟು ಕೊಟ್ಟಿದ್ದಾರೆ, ಒದ್ದೋಡಿಸುವುದಕ್ಕೆ ನಾವು ಅರ್ಹರು".

ಬರ್ಮಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಈ ಸೇನಾನಿ ಹೇಳಿದ್ದನ್ನು ನಾನು ಗೌರವಪೂರ್ವಕವಾಗಿ ಆಲಿಸಿದೆ. ಇನ್ನಷ್ಟು ವಿವರಗಳನ್ನು ಕೋರಿದೆ.

ಬರ್ಮಾದಲ್ಲಿ ಬವಣೆ....

"ಇಲ್ಲಿ ಲಾಹೋರಿನಲ್ಲಿ ನಮ್ಮ ಕಣ್ಣೆದುರೇ ಏನು ನಡೆಯುತ್ತಿದೆಯೆಂಬುದನ್ನು ನೋಡಿ. ಯುದ್ಧಕ್ಕಾಗಿ ಲಕ್ಷಾಂತರ ಜನರು ಜಮಾಯಿಸಿದ್ದಾರೆ. ಲಕ್ಷಾಂತರ ಜನರು ಹಸಿವಿನಿಂದ ಕಂಗೆಡುತ್ತಿರುವಾಗ ಕೆಲವೇ ಜನರು ಟೊಣಪರಾಗುತ್ತಿದ್ದಾರೆ. ಸಾಮಾಜಿಕ ವ್ಯವಸ್ಥೆ ಕುಸಿದು ಬೀಳುತ್ತಿದೆ. ಏನೋ ಹೊಸತೊಂದು ಉದ್ಭವಿಸಲಿದೆ. ಯುದ್ಧದ ಪಳೆಯುಳಿಕೆಗಳ ನಡುವಿನಿಂದ ಹೊಸ ಕಟ್ಟಡಗಳು, ಹೊಸ ಬೇಲಿಗಳು, ಹೊಸ ದಿಗಂತ ಹಾಗೂ ಹೊಸ ಭಾರತ ಮೇಲೇಳಲಿದೆ, ಹೀಗಾಗುತ್ತದೆಂಬ ಅಚಲ ನಂಬಿಕೆ ನನ್ನಲ್ಲಿದೆ".

ನಾನು 'ಯೆಲ್ಲೋ' ಪಾತ್ರ ನಿರ್ವಹಿಸುತ್ತಿದ್ದೆ. (ಯೆಲ್ಲೋಗೆ ಈ ಹಿಂದೆಯೇ ವಿವರಣೆ ನೀಡಲಾಗಿದೆ) ಹಾಗೆ ಮಾಡಬೇಕೆಂದು ಸಂಘಟನಾ ಸಮಿತಿಯ ಸೂಚನೆಯಿದೆ. ಕ್ಯಾಪ್ಟನ್ ವೈ ಹೇಳಿದ್ದನ್ನು ನಾನು ಕೇಳಿದೆ.

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಜನವರಿ 28 ರಿಂದ ಫೆಬ್ರವರಿ 02, 2003
- ರಾಷ್ಟ್ರೀಯ ನಾಟಕೋತ್ಸವ
  ಸ್ಥಳ: ರಂಗಾಯಣ, ಮೈಸೂರು.
  ಉದ್ಘಾಟನೆ : ಹಬೀಬ್ ತನ್ವೀರ್

ಜನವರಿ 30 ರಿಂದ ಫೆಬ್ರವರಿ 02, 2003
- ಕಟ್ಟಡ ಕಾರ್ಮಿಕರ ಅಖಿಲ ಭಾರತ ಸಮ್ಮೇಳನ
  ನಾಗರಕೋಯಿಲ್, ತಮಿಳುನಾಡು

ಫೆಬ್ರವರಿ 3 ಮತ್ತು 4 2003
- ಶೈಕ್ಷಣಿಕ ಸಮಾವೇಶ - ಶಿಕ್ಷಣದ ಕೋಮುವಾದೀಕರಣದ ಕುರಿತು.
  ಸೆನೆಟ್ ಹಾಲ್, ಬೆಂಗಳೂರು.
  ಉದ್ಘಾಟನೆ - ಎನ್.ರಾಮ್, ಸಂಪಾದಕರು, ಫ್ರಂಟ್‌ಲೈನ್
  ಸಂಘಟಕರು - ಎಸ್‌ಎಫ್‌ಐ, ಕರ್ನಾಟಕ ರಾಜ್ಯ ಸಮಿತಿ


ಫೆಬ್ರವರಿ 6, 2003 (ಗುರುವಾರ)
- ಬೆಂಗಾಲಿ ಅಸೋಸಿಯೇಷನ್
  'ಆಕಾಶ ನೋಡೋಣ' ಸ್ಲೈಡ್ ಶೋ
  ರಾತ್ರಿ 8 ಗಂಟೆಗೆ

ಫೆಬ್ರವರಿ 6, 7 ಮತ್ತು 8, 2003
- ಅಖಿಲ ಭಾರತ ಶಾಲಾ ಶಿಕ್ಷಕರ ಒಕ್ಕೂಟ - (STFI)
  ಅಖಿಲ ಭಾರತ ಸಮ್ಮೇಳನ,
  ಪಾಲಕ್ಕಾಡ್, ಕೇರಳ

ಫೆಬ್ರವರಿ 3, 2003, ಸೋಮವಾರ
- ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಸಮಿತಿ ಕರೆ
  ಬರಗಾಲ ಕಾಮಗಾರಿಗಾಗಿ ಮತ್ತು ಕೂಲಿಗಾಗಿ ಕಾಳು ಯೋಜನೆ ಜಾರಿಗಾಗಿ ಒತ್ತಾಯಿಸಿ
  ಶಾಸಕರ ಮನೆ ಮತ್ತು ತಹಶೀಲ್ದಾರರ ಕಛೇರಿ ಮುಂದೆ ಧರಣಿ

(ನಿಮ್ಮ ಪ್ರದೇಶಗಳಲ್ಲಿ ನಡೆಯಲಿರುವ ಪ್ರಮುಖ ಕಾರ್ಯಕ್ರಮ/ ಚಳುವಳಿಗಳ ಬಗ್ಗೆ ಮುಂಚಿತವಾಗಿ ತಿಳಿಸಿರಿ)

ಹಿರಿಯ ಕಾಮ್ರೆಡ್ ಎಂ.ಎನ್.ಉಗ್ರಪ್ಪ ಇನ್ನಿಲ್ಲ



ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿರಿಯ ಮುಖಂಡರಲ್ಲಿ ಒಬ್ಬರಾದ ಕಾಮ್ರೆಡ್ ಎಂ.ಎನ್. ಉಗ್ರಪ್ಪನವರು ನಿದನರಾದ ಬಗ್ಗೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿಯು ಅತೀವ ಸಂತಾಪವನ್ನು ವ್ಯಕ್ತಪಡಿಸಿದೆ. ಅಲ್ಪಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು 19.1.2003ರಂದು ಮೈಸೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ನಿಧನರಾದರು. ಅವರಿಗೆ 82 ವರ್ಷ ವಯಸ್ಸಾಗಿತ್ತು.

ಕಾಮ್ರೆಡ್ ಎಂ.ಎನ್. ಉಗ್ರಪ್ಪನವರು 1920ರಲ್ಲಿ ಮೇ 3 ಮೈಸೂರಿನಲ್ಲಿ ಒಂದು ಸಣ್ಣ ವ್ಯಾಪಾರಸ್ಥ ಕುಟುಂಬದಲ್ಲಿ ಜನಿಸಿದ್ದರು. ಕಾನೂನು ಪದವಿ ಪಡೆದಿದ್ದ ಅವರು ವಿದ್ಯಾರ್ಥಿ ದೆಸೆಯಲ್ಲಿಯೇ ಸ್ವಾತಂತ್ರ್ಯ ಚಳುವಳಿಗೆ ಆಕರ್ಷಿಸಲ್ಪಟ್ಟಿದ್ದರು. 1933ರಲ್ಲಿ ಗಾಂಧೀಜಿಯವರು ಮೈಸೂರಿಗೆ ಭೇಟಿ ನೀಡಿದಾಗ ಅದರಿಂದ ಪ್ರಭಾವಿತರಾಗಿದ್ದರು. ವಿಧುರಾಶ್ವಥದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅವರು ವಿದ್ಯಾರ್ಥಿ ಸ್ವಯಂ ಸೇವಕರಾಗಿ ಭಾಗವಹಿಸಿದ್ದರು. 1939ರಲ್ಲಿ ಮೆಟ್ರಿಕ್ ಪಾಸಾಗಿ ಕಾಲೇಜ್ ಸೇರಿದ ಬಳಿಕ ಎ.ಐ.ಎಸ್.ಎಫ್. ವಿದ್ಯಾರ್ಥಿ ಸಂಘಟನೆಯ ಸಕ್ರಿಯ ಕಾರ್ಯಕರ್ತರಾದರು. ಅಲ್ಲಿಂದ ಅವರು ರಾಜಕೀಯವಾಗಿ ಪ್ರಬುದ್ಧರಾಗಿ ಬೆಳೆಯುತ್ತಾ 1942 ರಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು.

ಚಳುವಳಿಗೆ ಸಮರ್ಪಣೆ

ಕಮ್ಯುನಿಸ್ಟ್ ಚಳುವಳಿಗೆ ತಮ್ಮನ್ನು ಅರ್ಪಿಸಿಕೊಂಡ ಕಾಮ್ರೆಡ್ ಉಗ್ರಪ್ಪನವರು ಕಾರ್ಮಿಕರನ್ನು ಸಂಘಟಿಸಲು ಹಗಲಿರುಳು ಶ್ರಮಿಸಿದರು. ಮೈಸೂರಿನ ಬೀಡಿ ಕಾರ್ಮಿಕರ, ಅರಮನೆ ನೌಕರರ, ಪುರಸಭಾ ನೌಕರರ, ಸಾರಿಗೆ ನೌಕರರ, ಹೋಟೆಲ್ ಕಾರ್ಮಿಕರ, ಕೆ.ಆರ್. ಮಿಲ್ ಕಾರ್ಮಿಕರ ನೆಚ್ಚಿನ ನಾಯಕರಾದರು. ಎ.ಐ.ಟಿ.ಯು.ಸಿ ಸ್ಥಾಪನೆಯಾದ ಬಳಿಕ ಅದರ ರಾಜ್ಯ ಸಮಿತಿ ಸದಸ್ಯರಾಗಿ ಕೆಲಸ ನಿರ್ವಹಿಸಿದರು.

1986ರಲ್ಲಿ ಸೋವಿಯತ್ ಯೂನಿಯನ್‌ಗೆ ಭೇಟಿ ನೀಡಿದ ಸಿಐಟಿಯು ನಿಯೋಗದ ಸದಸ್ಯರಲ್ಲಿ ಅವರೂ ಒಬ್ಬರಾಗಿದ್ದರು. ಮೈಸೂರ್ ಸಂಸ್ಥಾನದ ವಿಲೀನೀಕರಣ ಚಳುವಳಿಯಲ್ಲಿಯೂ ಕಾಮ್ರೆಡ್ ಉಗ್ರಪ್ಪನವರು ಭಾಗವಹಿಸಿದ್ದರು. ಮೈಸೂರು, ಮಂಡ್ಯ ಜಿಲ್ಲೆಗಳ ಗ್ರಾಮಗಳಲ್ಲಿ ಸಂಚರಿಸುತ್ತಾ ರೈತ ಸಂಘಟನೆಯನ್ನು ಕಟ್ಟಿ ಬೆಳೆಸಿದರು. ಟೆನೆನ್ಸಿ ಕಾಯ್ದೆಗಾಗಿ ಮಂಡ್ಯ ಜಿಲ್ಲೆಯಲ್ಲಿ ನಡೆದ ಗೇಣಿದಾರ ರೈತರ ಹೋರಾಟದಲ್ಲಿ ಅವರು ಭಾಗವಹಿಸಿದ್ದರು. 1957ರಲ್ಲಿ ಬೆಂಗಳೂರಿನಲ್ಲಿ ನಡೆದ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಥಮ ಸಮ್ಮೇಳನದಲ್ಲಿ ಕಾಮ್ರೆಡ್ ಉಗ್ರಪ್ಪನವರು ರೈತ ಸಂಘದ ರಾಜ್ಯ ಸಮಿತಿಯ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಮುಂದೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಖಜಾಂಚಿಯಾಗಿಯೂ, ಅಧ್ಯಕ್ಷರಾಗಿಯೂ ಜವಾಬ್ದಾರಿ ನಿರ್ವಹಿಸಿದ್ದರು.

ಪರಿಷ್ಕರಣವಾದದ ವಿರುದ್ಧ ಹೋರಾಟದಲ್ಲಿ 1964ರಲ್ಲಿ ಸಿಪಿಐ(ಎಂ) ಸ್ಥಾಪನೆಯಾದಾಗ ಕಾಮ್ರೆಡ್ ಉಗ್ರಪ್ಪ ಸಿಪಿಐ(ಎಂ) ಸೇರಿದರು ಮತ್ತು

ಅಗಲಿದ ಸಂಗಾತಿಗೆ ಸಿಪಿಐ(ಎಂ) ಶ್ರದ್ಧಾಂಜಲಿ

ನಂತರ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದರು. 1998ರಲ್ಲಿ ಕೋಲಾರದಲ್ಲಿ ಜರುಗಿದ ಪಕ್ಷದ 16ನೇ ರಾಜ್ಯ ಸಮ್ಮೇಳನದವರೆಗೆ ಅವರು ಪಕ್ಷದ ರಾಜ್ಯ ಸಮಿತಿ ಸದಸ್ಯರಾಗಿದ್ದರು. 2002ರಲ್ಲಿ ಬಳ್ಳಾರಿಯಲ್ಲಿ ಜರುಗಿದ ಪಕ್ಷದ 17ನೇ ರಾಜ್ಯ ಸಮ್ಮೇಳನದಲ್ಲಿ ಕಾಮ್ರೆಡ್ ಉಗ್ರಪ್ಪನವರು ವಿಶೇಷ ಆಮಂತ್ರಿತರಾಗಿ ಭಾಗವಹಿಸಿ, ಪಕ್ಷದ ಧ್ವಜಾರೋಹಣ ಮಾಡಿ ಮಾತನಾಡುವ ಮೂಲಕ ಸಮ್ಮೇಳನದ ಕಲಾಪಗಳಿಗೆ ಚಾಲನೆ ನೀಡಿದ್ದರು. ಪಕ್ಷದ ಮೈಸೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿಯೂ ಅವರು ಸೇವೆ ಸಲ್ಲಿಸಿದ್ದರು.

ಕರ್ನಾಟಕದ ಕಮ್ಯೂನಿಸ್ಟ್ ಹೋರಾಟಗಾರರಲ್ಲಿ ಅತಿ ಹೆಚ್ಚು ಕಾಲ ಜೈಲುವಾಸ ಅನುಭವಿಸಿದವರಲ್ಲಿ ಕಾಮ್ರೆಡ್ ಉಗ್ರಪ್ಪ ಒಬ್ಬರಾಗಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯನ್ನು ವಿರೋಧಿಸಿದಕ್ಕಾಗಿ, ಸ್ವಾತಂತ್ರ್ಯ ನಂತರ ಕಾರ್ಮಿಕರ, ರೈತರ ಪ್ರಶ್ನೆಗಳಿಗಾಗಿ ಹೋರಾಟನಡೆಸಿದಾಗ ಕಾಮ್ರೆಡ್ ಉಗ್ರಪ್ಪನವರು ಅನೇಕ ಸಲ ಬಂಧಿಸಲ್ಪಟ್ಟಿದ್ದರು. ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ಅವರ ಹೋರಾಟದ ಬದುಕಿನಲ್ಲಿ ಅವರು ಒಟ್ಟು 4 ವರ್ಷ 6 ತಿಂಗಳುಗಳ ಕಾಲ ಜೈಲುವಾಸ ಅನುಭವಿಸಿದ್ದರಲ್ಲದೆ 1 ವರ್ಷ 6 ತಿಂಗಳುಗಳ ಕಾಲ ಭೂಗತ ಜೀವನ ನಡೆಸಿದ್ದರು.

ಕೊನೆ ಉಸಿರಿನವರೆಗೂ ಕಮ್ಯುನಿಸ್ಟ್ ಸಿದ್ಧಾಂತವನ್ನು ಅಪ್ಪಿಕೊಂಡಿದ್ದ ಕಾಮ್ರೆಡ್ ಉಗ್ರಪ್ಪ ಅತ್ಯಂತ ಸರಳ ಹಾಗೂ ಶಿಸ್ತಿನ ಜೀವನ ನಡೆಸಿದ್ದರು. ಅವರ ನಿಧನದಿಂದ ರಾಜ್ಯದಲ್ಲಿ ಹಾಗೂ ದುಡಿಯುವ ವರ್ಗದ ಚಳುವಳಿಗೆ ದೊಡ್ಡ ನಷ್ಟವಾಗಿದೆ. ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿಯು ರಾಜ್ಯದಲ್ಲಿ ಉಳಿದಿರುವ ಕೆಲವೇ ಕೆಲವು ಅತ್ಯಂತ ಹಿರಿಯ ಕಮ್ಯುನಿಸ್ಟ್‌ರಲ್ಲಿ ಒಬ್ಬರಾಗಿದ್ದು ನಿಧನರಾದ ಕಾಮ್ರೆಡ್ ಉಗ್ರಪ್ಪನವರಿಗೆ ಗೌರವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಹೃತ್ಪೂರ್ವಕ ಸಾಂತ್ವನ ಕೋರಿದೆ.

ಕಾಮ್ರೇಡ್ ಉಗ್ರಪ್ಪನವರಿಗೆ ಲಾಲ್‌ಸಲಾಮ್

ಕಮ್ಯುನಿಸ್ಟ್ ಚಳುವಳಿಯಲ್ಲಿ ಮಾಗಿದ್ದ ಚೇತನವಾಗಿ, ಯುವ ಸಂಗಾತಿಗಳಿಗೆ ಅದಮ್ಯ ಸ್ಫೂರ್ತಿಯ ಸೆಲೆಯಾಗಿ, ಪ್ರತಿಯೊಂದರಲ್ಲೂ ಅಚ್ಚುಕಟ್ಟುತನವೇ ಮೈವೆತ್ತಂತಿದ್ದ ಕಾಮ್ರೇಡ್ ಉಗ್ರಪ್ಪನವರ ಅಗಲಿಕೆ ತಿಳಿಯುತ್ತಿದ್ದಂತೆ ಎಲ್ಲರಲ್ಲೂ ದುಃಖ ಉಮ್ಮಳಿಸಿತು.

ಕಾ। ಉಗ್ರಪ್ಪವನರ ಪಾರ್ಥಿವ ಶರೀರವನ್ನು ಅವರ ನಿವಾಸಕ್ಕೆ ತೆಗೆದುಕೊಂಡು ಬಂದಾಗ ಸುದ್ದಿತಿಳಿದ ಜನ ದಾವಿಸಿ ಬಂದು ತಮ್ಮ ಅಶ್ರುತರ್ಪಣ ಸಲ್ಲಿಸಿದರು. ಮರುದಿನ ದಿ. 20 ರಂದು ಸಿಪಿಐ(ಎಂ) ಪಕ್ಷದ ಕಛೇರಿಗೆ ಪಾರ್ಥಿವ ಶರೀರವನ್ನು ಸಾರ್ವಜನಿಕರ ಸಂದರ್ಶನಕ್ಕೆ ತಂದು ಇಡಲಾಯಿತು. ಪಕ್ಷದ ಸದಸ್ಯರು, ಹಿತೈಷಿಗಳು, ಕಾರ್ಮಿಕರು, ಮಹಿಳೆಯರು, ರಾಜಕೀಯ ಪಕ್ಷಗಳ ಮುಖಂಡರು ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಬಂದು ತಮ್ಮ ಅಂತಿಮ ನಮನ ಸಲ್ಲಿಸಿದರು. ಕೇಂದ್ರ ಸಚಿವ ಶ್ರೀನಿವಾಸ ಪ್ರಸಾದ, ಜಾ. ದಳದ ಮುಖಂಡರಾದ ಮಾಜಿ ಮೇಯರ್‌ಗಳಾದ ಅನಂತು ಮತ್ತು ನಾರಾಯಣ ಬಸವೇಗೌಡ, ಸಂ. ಜನತಾದಳದ ಮುಖಂಡರಾದ ವೇದಾಂತ ಹೆಮ್ಮಿಗೆ, ಚಂದ್ರಶೇಖರ್ ಮತ್ತು ರಾಮಕೃಷ್ಣ, ಸಿಪಿಐ ಮುಖಂಡರಾದ ವೆಂಕಟ ರಾಮಯ್ಯ ನವರು, ಖ್ಯಾತ ನಾಟಕ ನಿರ್ದೇಶಕ ಪ್ರಸನ್ನ, ಬರಹಗಾರ ಲಿಂಗದೇವರು ಹಳೇಮನೆ ಮುಂತಾದವರು ಕಾಂ। ಉಗ್ರಪ್ಪನವರ ಜೀವನಾ ದರ್ಶಗಳನ್ನು ನೆನೆಸುತ್ತಾ ತಮ್ಮ ಅಂತಿಮ ನಮನ ಸಲ್ಲಿಸಿದರು.

ಪಕ್ಷದ ಕಛೇರಿಯಿಂದ ಗೋಕುಲಂ ಚಿತಾಗಾರದತ್ತ ಪಾರ್ಥೀವ ಶರೀರವನ್ನು ಹೊತ್ತವಾಹನ ನಗರದ ಮುಖ್ಯ ರಸ್ತೆಗಳನ್ನು ಹಾದು ಹೋಗುತ್ತಿದ್ದಾಗ ನೂರಾರು ಸಂಗಾತಿಗಳು ಕಾಂ। ಉಗ್ರಪ್ಪ ಅಮರರಾಗಲಿ, ಕಾಂ। ಉಗ್ರಪ್ಪನವರಿಗೆ ಕೆಂಪು ನಮನಗಳು, ನೀವು ಹಾಕಿಕೊಟ್ಟ ಸಮಾಜವಾದದ ಹಾದಿ ನಾವು ಮುನ್ನಡೆಯುವ ಹಾದಿ', ಎನ್ನುವ ಘೋಷಣೆಗಳನ್ನು ಕೂಗುತ್ತಿದ್ದರು. ರಸ್ತೆಯ ಇಕ್ಕೆಲದಲ್ಲಿ ಸೇರಿದ್ದ ಜನ ಕಾ। ಉಗ್ರಪ್ಪನವರ ಹೆಸರು ಕೇಳಿ ದುಃಖ ವ್ಯಕ್ತಪಡಿಸುತ್ತ ಅವರನ್ನು ಸ್ಮರಿಸುತ್ತಿದ್ದುದು ಆ ಹಿರಿಯ ಸಂಗಾತಿಗೆ ಸಲ್ಲಲೇ ಬೇಕಾಗಿದ್ದ ಜನಸಮೂಹದ ಅಂತಿಮ ನಮನದ ನಿಜವಾದ ಅರ್ಥವಾಗಿತ್ತು.

ನಂತರ ಚಿತಾಗಾರದಲ್ಲಿ ಶ್ರದ್ಧಾಂಜಲಿ ಸಭೆ ನಡೆಯಿತು. ರಾಜ್ಯ ಕಾರ್ಯದರ್ಶಿ ಕಾಂ। ಜಿ.ಎನ್.ನಾಗರಾಜ್‌ರವರು ಸಂಕ್ಷಿಪ್ತವಾಗಿ ಕಾಂ। ಉಗ್ರಪ್ಪನವರು ಆರು ದಶಕಗಳಿಂದ ನಿಸ್ಪೃಹತೆಯಿಂದ ದುಡಿಯುವ ಜನರಿಗಾಗಿ ದುಡಿಯುವುದನ್ನು ಸ್ಮರಿಸಿಕೊಂಡರು. "ಮಾರ್ಕ್ಸ್‌ವಾದದಿಂದ ಪ್ರಭಾವಿತರಾಗಿ, ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ ಕಟ್ಟಿದ ಮೊದಲಿಗರಲ್ಲೊಬ್ಬರಾಗಿದ್ದರು. ಅಂದಿನ ಕಮ್ಯುನಿಸ್ಟ್ ಚಳುವಳಿ ಬಲಿಷ್ಟವಾಗಿದ್ದು ವ್ಯಾಪಕ ಪ್ರಭಾವ ಹೊಂದಿತ್ತು. ಚದುರಂಗರಂತಹ ಅನೇಕ ಬುದ್ಧಿಜೀವಿಗಳನ್ನು ಪ್ರಭಾವಿಸಿತ್ತು. ತಮ್ಮ ಸರ್ವಸ್ವವನ್ನು ಪಕ್ಷಕ್ಕಾಗಿ ಕಾಂ। ಉಗ್ರಪ್ಪನವರು ತ್ಯಾಗಮಾಡಿದರು. ಕಾರ್ಮಿಕರನ್ನು ರೈತರನ್ನು ಆ ಕಷ್ಟದ ದಿನಗಳಲ್ಲಿ ಸಂಘಟಿಸಿ. ಅವರ ಹೋರಾಟಗಳಿಗೆ ನೇತೃತ್ವ ನೀಡಿದರು. ಅನೇಕ ಬಾರಿ ಜೈಲುವಾಸ ಅನುಭವಿಸಿದರು. ಭೂಗತರಾಗಿಯೂ ಇರಬೇಕಾಯಿತು. ನಿರಂತರವಾಗಿ ಈ ಎಲ್ಲ ಚಟುವಟಿಕೆಗಳು, ಹೋರಾಟಗಳಲ್ಲಿ ಕಾಂ। ಉಗ್ರಪ್ಪನವರು ತೊಡಗಿದಾಗ, ಅವರ ಮಡದಿ ಮತ್ತು ಮಕ್ಕಳು ಎಷ್ಟೆಲ್ಲಾ ಕಷ್ಟ ಕಾರ್ಪಣ್ಯಗಳನ್ನೆದುರಿಸಿದರೋ, ಎಷ್ಟೊಂದು ತ್ಯಾಗ ಮಾಡಿದ್ದಾರೆ ಎನ್ನುವುದನ್ನು ಕಾಂ। ಜಿ.ಎನ್. ಸ್ಮರಿಸಿಕೊಂಡರು, ಕಾಂ। ಉಗ್ರಪ್ಪನವರ ತ್ಯಾಗಮಯ ಹೋರಾಟದ ಜೀವನದಿಂದ ಸ್ಫೂರ್ತಿ ಪಡೆದು, ಅವರು ನಡೆದ ಮಾರ್ಗದಲ್ಲಿ ಮುಂದೆ ನಡೆದು ಬಲಿಷ್ಠ ಕಮ್ಯುನಿಸ್ಟ ಚಳುವಳಿ ಸಂಘಟನೆ ಕಟ್ಟುವುದೇ ಅವರಿಗೆ ನಿಜವಾದ ಶ್ರದ್ಧಾಂಜಲಿ ಎಂದರು.

ಕಾಂ। ಗುರುಶಾಂತರವರು ಮಾತನಾಡಿ, ಕಾಂ। ಉಗ್ರಪ್ಪನವರು ಬದ್ಧತೆ, ಸಮಯ ಪ್ರಜ್ಞೆ, ಸರಳ ಜೀವನ ಎಲ್ಲ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದ ರೀತಿ ಯುವ ಸಂಗಾತಿಗಳಿಗೆ ಸ್ಫೂರ್ತಿ ನೀಡುತ್ತಿದ್ದುದನ್ನು ಐಕ್ಯರಂಗ ಪತ್ರಿಕೆ ಪ್ರಸಾರ ಬಾಕಿ ನೀಡುವಲ್ಲಿ ಮುತುವರ್ಜಿ ಹಾಗೂ ಪಕ್ಷದ ಪತ್ರಿಕೆಯು ಅರಿವನ್ನು ವಿಸ್ತರಿಸುವುದರಿಂದ ಎಲ್ಲರೂ ಓದಲೇಬೇಕೆಂಬ ಅವರ ಮಾತುಗಳನ್ನು ಸ್ಮರಿಸಿಕೊಂಡರು.

ಸಿಐಟಿಯು ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಇ.ಕೆ.ಎನ್. ರಾಜನ್, ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ। ಕೆ. ಪ್ರಕಾಶ್, ಮಂಡ್ಯ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ। ಪುಟ್ಟಮಾದು, ಡಿ.ವೈ.ಎಫ್.ಐ ಮುಖಂಡ ಕಾಂ। ಭರತರಾಜ್, ದೇಶಾಭಿಮಾನಿ ಓದುಗರ ವೇದಿಕೆ, ಕಾಂ। ಸುರೇಂದ್ರ ವಿಮಾ ನೌಕರರ ಮುಖಂಡ ಕಾಂ। ನಾಗೇಶ್, ಎಸ್.ಎಫ್.ಐ. ಮುಖಂಡ ಕಾಂ। ಯಶವಂತ್‌ರವರುಗಳು ಮಾತನಾಡಿ ಕಾಂ। ಉಗ್ರಪ್ಪನವರೊಂದಿಗೆ ಕೆಲಸ ಮಾಡಿದ ಸಂದರ್ಭಗಳನ್ನು ನೆನಪು ಮಾಡಿಕೊಂಡು ಶ್ರದ್ಧಾಂಜಲಿ ಅರ್ಪಿಸಿದರು.

ಎಸ್. ವಿಜಯಕುಮಾರ್-
ಎನ್.ಎಸ್. ಪ್ರಭಾಕರ್.



ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ದೇಶದಾದ್ಯಂತ ಕಾರ್ಮಿಕ ಸಂಘಟನೆಗಳ ಬೃಹತ್ ಪ್ರತಿಭಟನೆ

ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಪ್ರತಿಭಟಿಸಿ ಜನವರಿ 8 ರಂದು ದೇಶದಾದ್ಯಂತ ಎಲ್ಲಾ ಪ್ರಮುಖ ಪಟ್ಟಣಗಳಲ್ಲಿ ಕಾರ್ಮಿಕರು ಮತ್ತು ನೌಕರರು ಬೃಹತ್ ಪ್ರತಿಭಟನೆ



ಬೆಂಗಳೂರಿನಲ್ಲಿ ನಡೆದ ರಸ್ತೆತಡೆ

ನಡೆಸಿದರು. ಜುಲೈ 15 ರಂದು ದೆಹಲಿಯಲ್ಲಿ ಸೇರಿದ ಕಾರ್ಮಿಕ ನೌಕರ ಸಂಘಟನೆಗಳ ಪ್ರತಿನಿಧಿಗಳ ಅಸೆಂಬ್ಲಿಯು ಅಖಿಲ ಭಾರತದಲ್ಲಿ ಜನವರಿ 8 ರಂದು ಪ್ರತಿಭಟನಾ ಪ್ರದರ್ಶನ ಮತ್ತು ಜೈಲ್ ಭರೋ ಕಾರ್ಯಕ್ರಮ ನಡೆಸಬೇಕೆಂದು ಕರೆ ನೀಡಿತ್ತು.

ಚಳುವಳಿಯ ವರದಿಗಳು

2ನೇ ಕಾರ್ಮಿಕ ಆಯೋಗವು ಕಾರ್ಮಿಕರ ಪರವಾಗಿ ಶಿಫಾರಸ್ಸುಗಳನ್ನು ನೀಡುವ ಬದಲಿಗೆ ಮಾಲಿಕರ ಪರವಾಗಿ, ಬಹುರಾಷ್ಟ್ರೀಯ ಕಂಪನಿಗಳ ಪರವಾಗಿ ಶಿಫಾರಸ್ಸುಗಳನ್ನು ನೀಡಿತ್ತು. ಇದರ ಜತೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅತ್ಯಂತ ಲಾಭದಾಯಕವಾದ ಕಂಪೆನಿಗಳನ್ನು ಖಾಸಗೀಕರಣಕ್ಕೆ ಒಳಪಡಿಸಿದೆ. ಕಾರ್ಮಿಕರ ಹಕ್ಕುಗಳು ತೀವ್ರ ದಾಳಿಗೆ ಒಳಗಾಗಿವೆ. ಉದಾರೀಕರಣ ಮತ್ತು ಜಾಗತೀಕರಣ ನೀತಿಯ ಭಾಗವಾಗಿ ಈ ಕಾನೂನುಗಳು ಬಂದಿದ್ದವು. ಇದನ್ನು ಹಿಮ್ಮೆಟ್ಟಿಸಬೇಕು ಎಂಬ ಉದ್ದೇಶದಿಂದ ಜುಲೈನಲ್ಲಿ ನಡೆದ ಕಾರ್ಮಿಕರ ಅಸ್ಲೆಂಬ್ಲಿಯು ಈ ನಿರ್ಣಯ ಕೈಗೊಂಡಿತ್ತು.

ದೇಶದಾದ್ಯಂತ

ದೇಶದ ರಾಜಧಾನಿ ದೆಹಲಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಹಲವಾರು ಸಾವಿರ ಕಾರ್ಮಿಕರು ಭಾಗವಹಿಸಿದ್ದು ಸಿಐಟಿಯು ಪ್ರಧಾನಕಾರ್ಯದರ್ಶಿ ಡಾ. ಎಂ.ಕೆ. ಪಂಧೆ, ಐ.ಐ.ಟಿಯುಸಿ ಪ್ರಧಾನ ಕಾರ್ಯದರ್ಶಿ ಗುರುದಾಸ್ ದಾಸ್‌ಗುಪ್ತಾ, ಹೆಚ್.ಎಂ.ಎಸ್.ನ ಆರ್.ಎ ಮಿತ್ತಲ್ ಮೊದಲಾದ ಮುಖಂಡರು ಮಾತನಾಡಿ, ಮುಂಬರುವದಿನಗಳಲ್ಲಿ ಇನ್ನು ತೀವ್ರವಾದ ಹೋರಾಟಗಳನ್ನು ನಡೆಸಬೇಕೆಂದು ಕರೆ ನೀಡಿದರು.

ಕಾರ್ಮಿಕರ ಈ ಐಕ್ಯ ಹೋರಾಟದಲ್ಲಿ ಬಿ.ಎಂ.ಎಸ್. ಭಾಗವಹಿಸಿರಲಿಲ್ಲ. ಆದರೂ ಅದರ ಮುಖಂಡರಲ್ಲೊಬ್ಬರಾದ ಆರ್.ಕೆ. ಭಕ್ತ ಮಾತನಾಡಿ ಸರಕಾರದ ನೀತಿಗಳನ್ನು ಖಂಡಿಸಿದರು.

30 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಸೇರಿದ್ದ ರ್‍ಯಾಲಿ ಕಲ್ಕತ್ತಾ ನಗರದಲ್ಲಿ ನಡೆಯಿತು. ಅಲ್ಲದೆ ಪಶ್ಚಿಮ ಬಂಗಾಳದ ಜಿಲ್ಲಾ ಕೇಂದ್ರ ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ರ್‍ಯಾಲಿಗಳು ನಡೆದಿದ್ದು ಮಾತ್ರವಲ್ಲದೆ ಜೈಲ್ ಭರೋ ಚಳುವಳಿಯಲ್ಲಿ ಭಾಗವಹಿಸಿದರು.

ಚೆನ್ನೈ, ಮುಂಬೈ, ತಿರುವನಂತಪುರಂ, ಕೊಚ್ಚಿ, ಕಾನ್ಪುರ, ಜೈಪುರ, ಭೂಪಾಲ್, ಗುವಾಹಟಿ, ಪಾಟ್ನಾ, ಚಂಡಿಗಡ್ ಮುಂತಾದ ಕಡೆಗಳಲ್ಲಿ ಸಾವಿರಾರು ಕಾರ್ಮಿಕರು ಪ್ರತಿಭಟನೆ ನಡೆಸಿ ಬಂಧನಕ್ಕೊಳಗಾದರು.

ಕರ್ನಾಟಕದ 20 ಕ್ಕೂ ಹೆಚ್ಚು ಕಡೆಗಳಲ್ಲಿ ಪ್ರತಿಭಟನೆ

ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಕರ್ನಾಟಕ ರಾಜ್ಯದ ವಿವಿಧ ಭಾಗಗಳಲ್ಲಿ ತೀವ್ರ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ.

ರಾಜಧಾನಿ ಬೆಂಗಳೂರಿನಲ್ಲಿ ಪ್ರತಿಭಟನಾ ಪ್ರದರ್ಶನದ ನೇತೃತ್ವವನ್ನು ಸಿಐಟಿಯುನ ಹೆಚ್.ಎನ್.ಗೋಪಾಲಗೌಡ, ಕೆ.ಎಸ್.ಸುಬ್ರಮಣ್ಯ, ಹೆಚ್‌ಎಂಕೆಪಿಯ ಮೈಕೆಲ್ ಫರ್ನಾಂಡಿಸ್, ಎಐಟಿಯುಸಿ ಅನಂತ ಸುಬ್ಬರಾವ್ ಮೊದಲಾದವರು ವಹಿಸಿದ್ದರು. 500 ಕೂ ಹೆಚ್ಚು ಜನರು ಪ್ರದರ್ಶನ ನಡೆಸಿದ ಈ ಪ್ರತಿಭಟನೆಯಲ್ಲಿ ಬಿಇಎಲ್ ಮೊದಲಾದ ಸಾರ್ವಜನಿಕ ಉದ್ದಿಮೆಗಳ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ನೂರಾರು ಜನರು ಬಂಧನಕ್ಕೆ ಒಳಗಾದರು. ಪೋಲೀಸರು ಬಂಧಿಸುವ ಮೊದಲು ರಸ್ತೆ ತಡೆ ನಡೆಸಿದ ಕಾರ್ಮಿಕರು ಕೇಂದ್ರ ಸರ್ಕಾರದ ವಿರುದ್ಧ, ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಘೋಷಣೆ ಕೂಗಿದರು. ಅನಿರೀಕ್ಷಿತ ರಸ್ತೆ ತಡೆಯಿಂದ ಕಂಗಾಲಾದ ಪೋಲೀಸರು ಚಳುವಳಿಗಾರರನ್ನು ಕರೆದೊಯ್ಯಲು ಪರದಾಡಬೇಕಾಯ್ತು.

ಕೋಲಾರದ ಚಿನ್ನದ ಗಣಿ ಕಾರ್ಮಿಕರು 'ಬೆಂಗಳೂರು ಚಲೋ' ಕಾರ್ಯಕ್ರಮ ನಡೆಸಿದ್ದು, ಸಿಐಟಿಯುನ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಹಾಗೂ ಬಿಜಿಎಂಎಲ್ ಕಾರ್ಮಿಕ ಮುಖಂಡ ಟಿ.ಎಸ್.ಮಣಿ ನೇತೃತ್ವ ವಹಿಸಿದ್ದರು.

ಮೈಸೂರಿನಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ 300 ಕ್ಕೂ ಹೆಚ್ಚು ಮಹಿಳಾ ಕಾರ್ಮಿಕರು ಭಾಗವಹಿಸಿದ್ದರು. ಸಿಐಟಿಯು ಮುಖಂಡ ಜಗದೀಶ, ವಿಕ್ರಾಂತ್ ನೌಕರ ಸಂಘಟನೆಯ ಅಧ್ಯಕ್ಷ ಜಯರಾಂ ಮೊದಲಾದ ಮುಖಂಡರು ಮತ್ತು ಹಲವಾರು ಕಾರ್ಯಕರ್ತರು ಬಂಧನಕ್ಕೊಳಗಾದರು. ಮೈಸೂರು ಜಿಲ್ಲೆಯ ನಂಜನಗೂಡಿನಲ್ಲಿ ರಸ್ತೆ ತಡೆ ನಡೆಸಿದ ಕಾರ್ಮಿಕರು ಹೋರಾಟವನ್ನು ಮುಂದುವರಿಸುವುದಾಗಿ ಪ್ರತಿಜ್ಞೆಗೈದರು.

ತುಮಕೂರಿನಲ್ಲಿ 600 ಕ್ಕೂ ಹೆಚ್ಚು ಕಾರ್ಮಿಕರು, ಬಿಎಸ್‌ಎನ್‌ಎಲ್ ಕಛೇರಿಯ ಮುಂಭಾಗ ರಸ್ತೆ ತಡೆ ನಡೆಸಿ ಬಂಧನಕ್ಕೊಳಗಾದರು. ಸಿಐಟಿಯು ಮುಖಂಡರಾದ ಮೀನಾಕ್ಷಿ ಸುಂದರಂ, ಸಯ್ಯದ್ ಮುಜೀಬ್ ಹಾಗೂ ಎಐಟಿಯುಸಿ, ಡಿವೈಎಫ್‌ಐನ ಮುಖಂಡರು ನೇತೃತ್ವ ವಹಿಸಿದ್ದರು.

ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್, ಇಂಟಕ್ ಮೊದಲಾದ ಸಂಘಟನೆಗಳಿಗೆ ಸೇರಿದ 500ಕ್ಕೂ ಹೆಚ್ಚು ಕಾರ್ಮಿಕರು ಮಂಗಳೂರಿನಲ್ಲಿ ಪ್ರತಿಭಟನೆ ನಡೆಸಿದರು. ಸಿಐಟಿಯು ಅಧ್ಯಕ್ಷ ಬಿ.ಮಾಧವ ಮೊದಲಾದ ಮುಖಂಡರು ಉಡುಪಿಯಲ್ಲಿ ಮಾತನಾಡಿದರು. 200 ಕ್ಕೂ ಹೆಚ್ಚು ಕಾರ್ಮಿಕರು (ಬ್ಯಾಂಕ್, ವಿಮೆಯ ನೌಕರರು ಸೇರಿದಂತೆ) ಪ್ರತಿಭಟನೆ ನಡೆಸಿದರು.

ಸಿಐಟಿಯು ಮುಖಂಡರಾದ ವಿ.ಸುಕುಮಾರ್ ನೇತೃತ್ವದಲ್ಲಿ 500 ಕ್ಕೂ ಹೆಚ್ಚು ತೋಟಕಾರ್ಮಿಕರು ಸಕಲೇಶಪುರದಲ್ಲಿ ಪ್ರತಿಭಟನೆ ನಡೆಸಿದರು.

ಚಿಕ್ಕಮಗಳೂರು, ಬೆಳಗಾಂ, ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಕೊಡಗು ಜಿಲ್ಲೆಯ ಸಿದ್ದಾಪುರ ಮೊದಲಾದ ಕಡೆಗಳಲ್ಲೂ ಪ್ರತಿಭಟನೆ, ಜೈಲ್‌ಭರೋ ಚಳುವಳಿ ನಡೆದ ವರದಿಗಳು ಬಂದಿವೆ.

ದಾವಣಗೆರೆ ಜಿಲ್ಲೆಯ ಕೈಗಾರಿಕಾ ಕೇಂದ್ರ ಹರಿಹರದಲ್ಲಿ 300 ಕ್ಕೂ ಹೆಚ್ಚು ಕಾರ್ಮಿಕರು ಪ್ರತಿಭಟನೆ ನಡೆಸಿ ಬಂಧನಕ್ಕೊಳಗಾದರು. ಇಲ್ಲಿ ಸಿಐಟಿಯು ಕಾರ್ಯದರ್ಶಿಗಳಲ್ಲೊಬ್ಬರಾದ ವರಲಕ್ಷ್ಮಿಯವರು ಭಾಗವಹಿಸಿದ್ದರು.

ಜನವರಿ 8 ರ ಚರಿತ್ರಾರ್ಹ ಹೋರಾಟದಲ್ಲಿ ಭಾಗವಹಿಸಿದ ಕಾರ್ಮಿಕ ಮತ್ತು ನೌಕರರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಗಳ ವಿರುದ್ಧ ಐಕ್ಯ ಹೋರಾಟವನ್ನು ಮುಂದುವರಿಸಲು ನಿರ್ಧರಿಸಿದ್ದು ಫೆಬ್ರವರಿ 26 ರ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮಕ್ಕೆ ಸಜ್ಜುಗೊಳಿಸಲು ಕಾರ್ಮಿಕ ಸಮುದಾಯಕ್ಕೆ ಕರೆ ನೀಡಿದರು.



ಬಿ.ಇ.ಎಲ್ ಕಾರ್ಮಿಕ ಮುಖಂಡ

ಮುನಿರಾಜು ನಿಧನ

ಬೆಂಗಳೂರಿನ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಉದ್ಯೋಗಿ, ಸಿಐಟಿಯು ಸಂಯೋಜಿತ ಭಾರತ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್‌ನ್ನ ಕಾರ್ಯದರ್ಶಿ ಕಾಮ್ರೇಡ್ ಮುನಿರಾಜು ತಮ್ಮ ಅಲ್ಪಕಾಲದ ಅಸ್ವಸ್ಥೆ ಯಿಂದ ಜನವರಿ 22 ರ 5 ಘಂಟೆಗೆ ನಿಧನರಾಗಿದ್ದಾರೆ. ಜನವರಿ 19 ರಂದು ಬೆಳಿಗ್ಗೆ ಬ್ಯಾಡ್ಮಿಂಟನ್ ಆಟವಾಡುತ್ತಿದ್ದಾಗ ಕುಸಿದು ಬಿದ್ದ ಮುನಿರಾಜು ಮೆದಳಿನ ರಕ್ತ ಸ್ರಾವದಿಂದ ಆಸ್ಪತ್ರೆಯಲ್ಲಿ ನಿಧನ ಹೊಂದಿದರು.

ಕೇವಲ 43 ವಯಸ್ಸಿನ ಕಾಮ್ರೇಡ್ ಮುನಿರಾಜು 17 ವರ್ಷಗಳ ಹಿಂದೆ ಬಿಇಎಲ್ ನಲ್ಲಿ ಉದ್ಯೋಗಕ್ಕೆ ಸೇರಿದರು. ಅದಕ್ಕೂ ಮೊದಲು ಅವರು ಕೆಲವು ಕಾಲ ಭಾರತೀಯ ಸೇನೆಯಲ್ಲೂ ಸೇವೆ ಸಲ್ಲಿಸಿದ್ದರು. ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯವರಾದ ಇವರು, ಕಾರ್ಮಿಕರ, ನೌಕರರ ಹೋರಾಟದ ಮುಂಚೂಣಿಯಲ್ಲಿರುತ್ತಿದ್ದರು.

ಸಿಐಟಿಯು ಮತ್ತು ಬಿಇಎಲ್ ಕಾರ್ಮಿಕ ಸಂಘಗಳ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಮುನಿರಾಜು ನೌಕರರ ಪ್ರೀತಿಗೆ ಪಾತ್ರರಾಗಿದ್ದರು. ಅದರಂತೆಯೇ ಇತೀಚಿಗೆ ನಡೆದ ಸಂಘದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದರು.

ಎಡಚಳುವಳಿಯ ಬೆಂಬಲಿಗರಾಗಿದ್ದ ಮುನಿರಾಜು ಐಕ್ಯರಂಗ ಪತ್ರಿಕೆಯನ್ನು ಕಾರ್ಮಿಕರ ಮಧ್ಯೆ ಪ್ರಚಾರಪಡಿಸುವುದರಲ್ಲಿ ಸಹಾಯ ಮಾಡುತ್ತಿದ್ದರು. ಹೆಂಡತಿ, ತಂದೆ, ತಾಯಿ, ಮೂವರು ಮಕ್ಕಳು ಹಾಗೂ ಅಪಾರ ಅಭಿಮಾನಿಗಳನ್ನು ಅಗಲಿದ ಕಾಮ್ರೇಡ್ ಮುನಿರಾಜು ಪರಿಚಿತ ಮನದಲ್ಲಿ ಅಚ್ಚಳಿಯದೆ ಉಳಿಯುತ್ತಾರೆ. ಅಗಲಿದ ಕಾರ್ಮಿಕ ಮುಖಂಡನಿಗೆ ಐಕ್ಯರಂಗ ತನ್ನ ಶ್ರದ್ಧಾಂಜಲಿ ಸಲ್ಲಿಸುತ್ತದೆ.

ಕಾಮ್ರೇಡ್ ಮುನಿರಾಜರವರು ಅಗಲಿದ ಸುದ್ದಿ ತಿಳಿಯುತ್ತಲೇ ಸಿಐಟಿಯು ಪ್ರಧಾನ ಕಾರ್ಯದರ್ಶಿ ಹಾಗೂ ಬಿಇಡಬ್ಲ್ಯುಯುನ ಅಧ್ಯಕ್ಷ ವಿಜೆಕೆ ನಾಯರ್ ಬೆಂಗಳೂರಿಗೆ ಧಾವಿಸಿ ಬಂದು ಅಗಲಿತ ಸಂಗಾತಿಯನ್ನು ನೆನೆದರು. ದುಃಖತಪ್ತ ಕುಟುಂಬಕ್ಕೆ ಸಾಂತ್ವನ ಹೇಳಿದರು. ಸಿಐಟಿಯು ಮುಖಂಡ ಮೀನಾಕ್ಷಿಸುಂದರಂ, ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ರಾಜ್ಯ ಸಮಿತಿ ಸದಸ್ಯ ಬಾಲಕೃಷ್ಣ ಶೆಟ್ಟಿ ಮತ್ತಿತರ ಮುಖಂಡರು ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವನ್ನು ಅರ್ಪಿಸಿ ಶ್ರದ್ಧಾಂಜಲಿ ಸಲ್ಲಿಸಿದರು.

ಗ್ರಾಮ ಪಂಚಾಯತ್ ನೌಕರರ ಅಧ್ಯಯನ ಶಿಬಿರ

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಆಡಳಿತ ವನ್ನು ಜನಸಾಮಾನ್ಯರ ಬಳಿ ಕೊಂಡೊಯ್ಯು ವವರು ಗ್ರಾಮ ಪಂಚಾಯತ್‌ನ ನೌಕರರು. ಸರ್ಕಾರಡ ಕಾರ್ಮಿಕ ವಿರೋಧಿ ನೀತಿಗಳಿಂದ ಅತ್ಯಂತ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದು, ಸರ್ಕಾರದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ. ಇಂತಹ ನೌಕರರ ಕನಿಷ್ಟ ಬೇಡಿಕೆಗಳ ಈಡೇರಿಕೆಗಾಗಿ ಮತ್ತು ಅವರ ಜೀವನ ಮಟ್ಟ ಸುಧಾರಿಸಲು ನಿರಂತರವಾಗಿ ಶ್ರಮಿಸುತ್ತಿರುವ 'ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘ' ಡಿಸೆಂಬರ್ 22 ರಿಂದ 24 ರವರೆಗೆ ರಾಜ್ಯ ಮಟ್ಟದ ಅಧ್ಯಯನ ಶಿಬಿರವೊಂದನ್ನು ಉತ್ತರ ಕನ್ನಡದ ಮುರ್ಡೇಶ್ವರದಲ್ಲಿ ಸಂಘಟಿಸಿತ್ತು.

ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಶಿಬಿರ ಉದ್ಘಾಟಿಸಿದರು. ಅಧ್ಯಯನ ಶಿಬಿರದಲ್ಲಿ, 'ಮಾನವ ಸಮಾಜದ ಅಭಿವೃದ್ಧಿ', 'ಪ್ರಜಾಪ್ರಭುತ್ವದ ಉಗಮ', 'ಸಮಾನಾಂತರ ಸಂಘಟನೆಗಳೊಂದಿಗೆ ಸಂಘಟನಾ ಸಂಬಂಧ' ಕುರಿತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ಜಿ.ಎನ್.ನಾಗರಾಜ್, ಉಪಾಧ್ಯಕ್ಷರಾದ ನಿತ್ಯಾನಂದ ಸ್ವಾಮಿ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಸಿಐಟಿಯು ಸಂಘಟನೆಯ ಬಗ್ಗೆ ರಾಜ್ಯ ಕಾರ್ಯದರ್ಶಿ ಪ್ರಸನ್ನ ಕುಮಾರ್ ಉಪನ್ಯಾಸ ನೀಡಿದರು.

ಪಂಚಾಯತ್ ನೌಕರರ ಸಂಘದ ಹುಟ್ಟು, ಬೆಳವಣಿಗೆ ಹಾಗೂ ಮುಂದಿನ ದಾರಿ ಬಗ್ಗೆ ಸಂಘದ ರಾಜ್ಯ ಕಾರ್ಯದರ್ಶಿ ವಿ.ಪಿ.ಕುಲಕರ್ಣಿ ವಿವರಿಸಿದರು. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನೌಕರರ ಸಮಸ್ಯೆ, ಬೇಡಿಕೆ ಮತ್ತು ಮುಂದಿನ ಹೋರಾಟಗಳ ಬಗ್ಗೆ ಮಾರುತಿ ಮಾನ್ಪಡೆ ವಿವರಿಸಿದರು. ಶಿಬಿರದ ಮುಖ್ಯ ಅತಿಥಿಗಳಾಗಿ ಸ್ಥಳೀಯ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಮೋಹನ ನಾಯ್ಕ, ಸ್ವಾಗತ ಸಮಿತಿ ಪ್ರ.ಕಾರ್ಯದರ್ಶಿ, ಹಾಗೂ ಶಿರಾಲಿ ಪಂಚಾಯತ್ ಸದಸ್ಯರಾದ ಸುಭಾಷ ಕೊಪ್ಪಿಕರ್, ಭಟ್ಕಳ ತಾಲ್ಲೂಕು ಗ್ರಾಮ ಪಂಚಾಯತ್ ನೌಕರರ ಸಂಘದ ಅಧ್ಯಕ್ಷರಾದ ಮಾರುತಿ ದೇವಾಡಿಗ ಭಾಗವಹಿಸಿದ್ದರು. 20 ಜಿಲ್ಲೆಗಳ 300 ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿದ್ದರು.

ವಿಧಾನಸೌಧ ಮುತ್ತಿಗೆಗೆ ತೀರ್ಮಾನ

ಕೊನೆಯ ದಿನ ನಡೆದ 'ಸಂಘಟನಾ ಸಮಾವೇಶ'ದಲ್ಲಿ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರದ ಮೇಲೆ ಒತ್ತಡ ತರಲು ಮುಂದಿನ ಹೋರಾಟಗಳನ್ನು ಸರ್ವಾನುಮತದಿಂದ ಅಂಗೀಕರಿಸಿ, ಮುಂದಿನ ಬಜೆಟ್ ಅಧಿವೇಶನದ ವೇಳೆ ವಿಧಾನಸೌಧ ಮುತ್ತಿಗೆ, ಫೆಬ್ರವರಿ 17 ರಂದು ಬಿಲ್ ಕಲೆಕ್ಟರ್‌ಗಳ ರಾಜ್ಯ ಸಮಾವೇಶ, ಪಂಚಾಯ್ತಿಗಳು ನಡೆಸುವ ಬಾಲವಾಡಿ ಶಿಕ್ಷಕಿಯರು ಅತಂತ್ರಸ್ಥಿತಿಯಲ್ಲಿದ್ದು ಅವರ ಸಮಸ್ಯೆ ಹಾಗೂ ಹೋರಾಟ ರೂಪಿಸುವ ನಿಟ್ಟಿನಲ್ಲಿ ಫೆಬ್ರವರಿಯಲ್ಲಿ ರಾಜ್ಯ ಸಮಾವೇಶ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಂಘಟನೆ ವಿಸ್ತರಿಸುವ ಮತ್ತು ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆ ನಡೆಯುವ ಸಂದರ್ಭದಲ್ಲಿ 'ಜಿಲ್ಲಾ ಪಂಚಾಯತ್ ಮುತ್ತಿಗೆ' ಕಾರ್ಯಕ್ರಮ ನಡೆಸಲು ನಿರ್ಣಯ ಕೈಗೊಳ್ಳಲಾಯಿತು

ಗುಲ್ಬರ್ಗಾ ಜಿಲ್ಲೆಯ 7 ಲಕ್ಷ ಎಕರೆಯಲ್ಲಿ 3 ಲಕ್ಷ ರೈತರು ತೊಗರಿ ಬೆಳೆಯುತ್ತಾರೆ. ಜಿಲ್ಲೆಯ ಪ್ರಮುಖ ಆರ್ಥಿಕ ಬೆಳೆ ತೊಗರಿ. ಈ ಬೆಳೆಯನ್ನಾಧರಿಸಿ ಜಿಲ್ಲೆಯಾದ್ಯಂತ 120 ಕ್ಕೂ ಹೆಚ್ಚು ತೊಗರಿ ಬೇಳೆ ಕಾರ್ಖಾನೆಗಳು ಇವೆ. ಬೇಳೆಗಳಲ್ಲಿ ಅತೀ ಹೆಚ್ಚು ಪ್ರೋಟೀನ್ ಇರುವ ಬೇಳೆಯಾಗಿದೆ ತೊಗರಿ. ತೊಗರಿ ಬೆಳೆ ಕಣಜ ಎಂದೆನಿಸಿಕೊಳ್ಳುವ ಗುಲ್ಬರ್ಗಾ 12 ರಾಜ್ಯಗಳಿಗೆ ತೊಗರಿ ಬೇಳೆ ಮಾರಾಟ ಕೇಂದ್ರವು ಕೂಡ ಆಗಿದೆ. ರೈತರ ಜೀವನದಲ್ಲಿ ಯಾವುದೇ ಬದಲಾವಣೆ ತರದ ತೊಗರಿ ಬೆಳೆಯಿಂದ ವ್ಯಾಪಾರ ವರ್ಗ ಮಾತ್ರ ಕೋಟ್ಯಾಧಿ ಪತಿಗಳಾಗಿದ್ದು ಎದ್ದುಕಾಣುತ್ತದೆ.

ಕರ್ನಾಟಕ ಪ್ರಾಂತ ರೈತ ಸಂಘವು ತೊಗರಿ ಬೇಳೆಗಾರರನ್ನು ಸಂಘಟಿಸಿ ತೊಗರಿಗೆ ಬೆಂಬಲ

ತೊಗರಿ ಮಂಡಳಿಯನ್ನು ಕೊನೆಗೂ ಸರ್ಕಾರ ರಚಿಸಿದೆ. ಇದು ಸಾಧ್ಯವಾದದ್ದು ಎಂಟ್ಹತ್ತು ವರುಷಗಳ ದೀರ್ಘ ಹೋರಾಟದ ದಾಳಿ - ದಬ್ಬಾಳಿಕೆ ಎದುರಿಸಿಯೂ ದೃಢವಾಗಿ ನಿಂತದ್ದರ ಫಲ. ಆದರೆ ತೊಗರಿ ಕಣಜವಾದ ಹೈದ್ರಾಬಾದ್ ಕರ್ನಾಟಕ ಪ್ರದೇಶಗಳ ರೈತರ ಸಮಸ್ಯೆಗಳನ್ನು ಇದು ಪರಿಹರಿಸೀತೆ? ಕನಿಷ್ಟ ನ್ಯಾಯವಾದ ಬೆಲೆಯನ್ನಾದರೂ ನಿಗದಿಪಡಿಸೀತೆ? ತೊಗರಿ ಬೆಲೆ ಧಾರುಣವಾಗಿ ಕುಸಿದಿದ್ದರೂ ಸ್ಪಂದಿಸದೇ ಇದ್ದಾಗ ಮಂಡಳಿ ವಿರುದ್ಧ ಹೋರಾಡಬೇಕಾಗಿ ಬಂದದ್ದು ಭವಿಷ್ಯದ ಸೂಚಕ. ಕೇಂದ್ರ-ರಾಜ್ಯ ಸರ್ಕಾರಗಳು ಈ ಮಂಡಳಿ ಅರ್ಥಪೂರ್ಣವಾಗಿ ಕಾರ್ಯನಿರ್ವಹಿಸಲು ಅಗತ್ಯವಾದ ನೆರವು ನೀಡಬೇಕು. ಈ ಮಂಡಳಿಯನ್ನು ರೈತರ ಪರವಾಗಿಸುವ ನಿಟ್ಟಿನಲ್ಲಿ ಇಡಬೇಕಾದ ಹೆಜ್ಜೆಗಳನ್ನು ಮಾರುತಿ ಮಾನ್ಪಡೆಯವರು ಗುರುತಿಸಿದ್ದಾರೆ. ಹಾಗೆಯೇ ತೊಗರಿ ಬೆಳೆಗಾರರ ಸಮಸ್ಯೆಗಳ ವಿರುದ್ಧದ ಚಳುವಳಿಯನ್ನು ಪರಿಚಯಿಸುವ ಇನ್ನೊಂದು ಬರಹ ಕೆ. ನೀಲಾರವರ 'ಬದುಕು ಬಂಧಿಖಾನೆ' ಪುಸ್ತಕದಿಂದ..

ತೊಗರಿ ಮಂಡಳಿ ರಚನೆ ಮುಂದೇನು?

ಬೆಲೆ ಸಿಗಬೇಕೆಂದು, ತೊಗರಿ ಖರೀದಿಗಾಗಿ ಸರ್ಕಾರ ಮದ್ಯ ಪ್ರವೇಶಿಸಬೇಕೆಂದು ಹೆಚ್ಚು ಇಳುವರಿ ಬರುವ ತಳಿಗಳನ್ನು ಸಂಶೋಧನೆ ಮಾಡಬೇಕೆಂದು ತೊಗರಿ ಬೆಳೆಗಾರರಿಗೆ ಸಾಲ ಒದಗಿಸಬೇಕೆಂದು ವ್ಯಾಪಕವಾಗಿರುವ ಕಳಪೆ ಕ್ರಿಮಿನಾಶಕ ತಡೆಯಬೇಕೆಂದು ಬೇಡಿಕೆಗಳನ್ನು ಇಟ್ಟುಕೊಂಡು ರಾಜ್ಯಮಟ್ಟದ ಸಮಾವೇಶವನ್ನು ಅಕ್ಟೋಬರ್- 1988 ರಲ್ಲಿ ಗುಲ್ಬರ್ಗಾದಲ್ಲಿ ನಡೆಸಿತು. 1998ರ ವರೆಗೂ ಒಂದು ದಶಕಗಳ ಕಾಲ ಧರಣಿ ಸತ್ಯಾಗ್ರಹ ರಸ್ತಾರೋಕೋ ಗುಲ್ಬರ್ಗಾ ಜಿಲ್ಲಾ ಬಂದ್ ಇತ್ಯಾದಿಗಳನ್ನು ಸತತವಾಗಿ ಹೋರಾಟ ನಡೆಸುತ್ತಾ ಬರಲಾಗಿದೆ. ಈ ಹೋರಾಟದ ಫಲವಾಗಿ ತೊಗರಿ ಬಗ್ಗೆ ನಾಲ್ಕಾರು ಜಿಲ್ಲೆಗಳಲ್ಲಿ ಪ್ರಮುಖ ಚರ್ಚೆಯ ವಿಷಯವಾಗಿ ಬಂದಿದೆ. 1992-93 ರಲ್ಲಿ ಇಡೀ ಬೆಳೆ ವಿಫಲವಾಗಿ ಭೀದರ್-ಗುಲ್ಬರ್ಗಾದಲ್ಲಿ 25ಕ್ಕೂ ಹೆಚ್ಚು ತೊಗರಿ ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡರು. ರೈತ ಸಂಘ ಮಧ್ಯಪ್ರವೇಶ ಮಾಡಿ ಬೆಳೆಗಾರರಿಗೆ, 1



ಕೋಟಿ ರೂಗಳಷ್ಟು ಪರಿಹಾರ ಕೊಡಿಸುವಲ್ಲಿ ಯಶಸ್ವಿಯಾಯಿತು.

2000 ನೇ ಇಸ್ವಿಯಲ್ಲಿ ಕೇಂದ್ರ ಸರ್ಕಾರದ ಆಮದು ನೀತಿಯಿಂದ ತೀವ್ರ ಬೆಲೆ ಕುಸಿದಾಗ ಹೈದ್ರಾಬಾದ್ ಕರ್ನಾಟಕ ಛೇಂಬರ್ ಆಫ್ ಕಾಮರ್ಸ್ ಜೊತೆಗೆ ಸೇರಿ ವಿಚಾರ ಸಂಕಿರಣ ನಡೆಸಲಾಯಿತು. ಆಮದು ನೀತಿ ವಿರೋಧಿಸಿ ರಸ್ತಾ ರೋಖೋ ನಡೆಸಲಾಯಿತು. ಈ ರಸ್ತಾರೋಕೋದಲ್ಲಿ ಲಾಠಿ ಛಾರ್ಜ್ ನಡೆದು ಸುಮಾರು 50ಕ್ಕೂ ಹೆಚ್ಚು ಡಿ.ವೈ.ಎಫ್.ಐ ಮುಖಂಡರು ಸಹ ಜೈಲಿಗೆ ತಳ್ಳಲ್ಪಟ್ಟರು. ಇದನ್ನು ಪ್ರತಿಭಟಿಸಿದ ರೈತ ಸಂಘದ ಮುಖಂಡರು, ಜನವಾದಿ ಮಹಿಳಾ ಸಂಘಟನೆಯ ಮುಖಂಡರನ್ನು ಸರ್ಕಾರ ಜೈಲಿಗೆ ತಳ್ಳಿತು. ಇದನ್ನು ಪ್ರತಿಭಟಿಸಿ 13 ಫೆಬ್ರವರಿ 2001 ರಂದು ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳೆಲ್ಲಾ ಬಂದ್ ಆಚರಿಸಲಾಯಿತು. ಅನಿವಾರ್ಯತೆಗೆ ಒಳಪಟ್ಟ ಸರ್ಕಾರವು ಮಾರ್ಚ್ 2002 ರಂದು ತೊಗರಿ ಮಂಡಳಿ ರಚಿಸಿತು.


ಮುಕ್ತ ಮಾರುಕಟ್ಟೆ, ಆಮದು ನೀತಿ, ಉಚ್ಛ್ರಾಯ ಸ್ಥಿತಿಯಲ್ಲಿರುವ ಸಂದರ್ಭದಲ್ಲಿ ರಾಜ್ಯ ಸರ್ಕಾರ ತೊಗರಿ ಮಂಡಳಿ ರಚಿಸಿರುವುದು ಕೆಪಿಆರ್‌ಎಸ್ ಹೋರಾಟಕ್ಕೆ ಸಂದ ಜಯವಾಗಿದೆ.

ತೊಗರಿ ಮಂಡಳಿ ರಚಿಸಿದ ಮೇಲೆ ತೊಗರಿ ಮಂಡಳಿ ತೊಗರಿ ಬೆಳೆಗಾರರ ಎಲ್ಲಾ ಸಮಸ್ಯೆಗಳು ಬಗೆಹರಿಯಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ. ಆದರೆ ವಾಸ್ತವ ಚಿತ್ರವೇ ಬೇರೆ ಇದೆ. ತಳಿ ಸಂಶೋಧನೆ, ಕೀಟ ನಿಯಂತ್ರಣದ ಸಂಶೋಧನೆ ಇತ್ಯಾದಿ ವಿಷಯಗಳು ಕೃಷಿ ವಿಶ್ವ ವಿದ್ಯಾಲಯಕ್ಕೆ ಸಂಬಂಧಪಟ್ಟದೆಂದು ಹೇಳಿ ಸಂಶೋಧನೆಯ ವಿಷಯವನ್ನು ಮಂಡಳಿಯಿಂದ ಹೊರಗಿಡಲಾಯಿತು. ಕಳಪೆ ಔಷಧಿ ಮತ್ತು ಕ್ರಿಮಿನಾಶಕ ನಿಯಂತ್ರಣ ಕೇಂದ್ರ ಸರ್ಕಾರಕ್ಕೆ ಸೇರಿದ್ದೆಂದು ರಾಜ್ಯ ಸರ್ಕಾರ ಹೇಳುತ್ತಾ ಗುಲ್ಬರ್ಗಾದಲ್ಲಿ ಜೈವಿಕ ನಿಯಂತ್ರಣದ ಒಂದು ಪ್ರಯೋಗಾಲಯ ತೆರೆದು ಕಳಪೆ ಕ್ರಿಮಿನಾಶಕ ಪರೀಕ್ಷೆಗಾಗಿ ದೂರದ ಬೆಂಗಳೂರು ಮತ್ತು ಬಳ್ಳಾರಿ ಪ್ರಯೋಗಾಲಯವನ್ನೇ ಅವಲಂಬಿಸುವಂತೆ ಮಾಡಿ ಕೃಷಿ ಇಲಾಖೆ ಕಳಪೆ ಕ್ರಿಮಿನಾಶಕ ನಿಯಂತ್ರಣಕ್ಕಾಗಿ ಕೃಷಿ ಇಲಾಖೆಯನ್ನು ಜವಾಬ್ದಾರಿಯನ್ನಾಗಿ ಮಾಡಲಾಗಿದೆ. ಶಕ್ತಿಹೀನ ಕಳಪೆ ಕ್ರಿಮಿನಾಶಕವನ್ನು ಕೇಂದ್ರ ಸರ್ಕಾರದ ಕಾನೂನಿನಿಂದ ರೈತರನ್ನು ರಕ್ಷಿಸಲು ಸಾಧ್ಯವಾಗುತ್ತಿಲ್ಲ. ಆಮದು ನೀತಿ ಮುಕ್ತವಾಗಿ ಜಾರಿಯಾಗಿರುವುದರಿಂದ ತಾಜನಿ ಬರ್ಮನ್, ತೈಲ್ಯಾಂಡ್, ಕೀನ್ಯಾ ದೇಶಗಳಿಂದ ಅಗ್ಗದ ಬೆಲೆಗೆ ಬೇಳೆ ಆಮದು ಮಡಿಕೊಳ್ಳುತ್ತಿರುವುದು ಕರ್ನಾಟಕದ ತೊಗರಿ ಬೆಳೆಗಾರರಿಗೆ ಕಷ್ಟವಾಗಿದೆ.

ತೊಗರಿ ಬೆಳೆಗಾರರ ಮಂಡಳಿ ಕೇವಲ ಮಾರುಕಟ್ಟೆಯಲ್ಲಿ ಮದ್ಯ ಪ್ರವೇಶಿಸಿ ತೊಗರಿ ಖರೀದಿ ಮಾಡಬೇಕೆಂದು ರಾಜ್ಯ ಸರ್ಕಾರ ಹೇಳಿದೆ. ತೊಗರಿ ಮಂಡಳಿಗೆ 300 ಕೋಟಿ ರೂ. ಹಣ ಅವಶ್ಯಕತೆ ಇದೆ. ಸರ್ಕಾರ ಕೇವಲ 5 ಕೋಟಿ ರೂ ಮಂಜೂರಾತಿ ಮಾಡಿ ಕೆಲಸ ನಿರ್ವಹಿಸಲು ಹೇಳಿದೆ. ಇಂತಹ ಪರಿಸ್ಥಿತಿಯಲ್ಲಿ ತೊಗರಿ ಮಂಡಳಿಯ ಮುಂದೆ KPRS ಹೋರಾಟ ನಡೆಸಿದ ಫಲವಾಗಿ 1650 ರೂ ಬೆಂಬಲ ಬೆಲೆ ನಿಗಧಿಪಡಿಸಿತ್ತು. ಮಂಡಳಿಯಿಂದ ಮಾರುಕಟ್ಟೆ ಮದ್ಯ ಪ್ರವೇಶ ಮಾಡಲು ಹೇಳಿದೆ. 1320 ರೂ. ಕೇಂದ್ರ ಸರ್ಕಾರ ನಿಗಧಿಪಡಿಸಿದಾಗ ರಾಜ್ಯ ಸರ್ಕಾರವು ಮುಂದಾಗಲಿಲ್ಲ. ತೊಗರಿ ಮಂಡಳಿ ಮುಂದೆ ನಡೆಸಿದ ಹೋರಾಟವು ಫಲ ನೀಡಿದೆ.

ತೊಗರಿ ಮಂಡಳಿ ವ್ಯಾಪ್ತಿ ವಿಸ್ತರಿಸಿ ಅವಶ್ಯಕ ಹಣ ಒದಗಿಸಿದಾಗ ಮಾತ್ರ ತೊಗರಿ ಬೆಳೆಗಾರರಿಗೆ ಸಹಾಯಕವಾಗಲಿದೆ. ಅದಕ್ಕಾಗಿ ಚಳುವಳಿಯ ವಿಸ್ತರಣೆ-ಹೋರಾಟ ನಡೆಯಬೇಕು.

- ಮಾರುತಿ ಮಾನ್ಪಡೆ



ಪೋಲೀಸು ರಾಜ್ಯವಲ್ಲೋ...

ಕೆ.ನೀಲಾ

ಅಂದು ಸಂಜೆ ಸೂರ್ಯ ಬಹಳ ಬೇಗ ಸರಿದು ಹೋಗಿದ್ದ ಗುಲಬರ್ಗಾ ಸರಕಾರಿ ಆಸ್ಪತ್ರೆಯ ತುಂಬ ಕತ್ತಲೆ ತನ್ನ ಕೈ-ಕಾಲುಗಳನ್ನು ಚಾಚಿತ್ತು. ಕ್ಯಾಜುವಾಲಿಟಿ ಕೋಣೆಯಲ್ಲಿ ಆರು ಜನ ರೈತ ಯುವಕರ ಕೈಗೆ ಬೇಡಿಗಳನ್ನು ಹಾಕಿ ಸಾಲಾಗಿ ಕೂಡಿಸಲಾಗಿದೆ. ಹೊಸಬರು ಯಾರಾದರೂ ಅವರನ್ನು ನೋಡಿದರೆ, ಇವರು ಉಗ್ರಗಾಮಿಗಳೇನೋ, ಓಡಿಹೋಗಬಾರದೆಂದು ಹೀಗೆ ಕೈಗೆ ಕೋಳ ಹಾಕಿರುವರು ಅಂದುಕೊಳ್ಳಬಹುದು. ಯುವಕರ ಮೈಮೇಲೆ ಬಾಸುಂಡೆಗಳು ಬಂದಿದ್ದವು. ನಾನು ಓಡಿಸುವ ಟಿ.ವಿ.ಎಸ್.ಗೆ ಲೈಟು ಸರಿಯಿರಲಿಲ್ಲ. ಆದರೂ ಗಾಡಿ ಓಡಿಸಿಕೊಂಡು ಆಸ್ಪತ್ರೆಗೆ ಬಂದೆ.

ನನಗಿಂತಲೂ ಮೊದಲೇ ರೈತ ಸಂಘದ ಮುಖಂಡರಾದ ಮಾರುತಿ ಮಾನಪಡೆ, ವಿರುಪಾಕ್ಷಪ್ಪ ತಡಕಲ್ ಬಂದಿದ್ದರು. ಅವರಿಗಾಗಲೇ ಯುವಕರ ಕೈಗೆ ಹಾಕಿದ ಬೇಡಿ ನೋಡಿ ಸಿಟ್ಟು ಬಂದಿತ್ತು. ಅವರು ಪೊಲೀಸ್ ಕಾನ್‌ಸ್ಟೇಬಲ್‌ಗೆ ಹೇಳುತ್ತಿದ್ದರು, ಸಂಬಂಧಪಟ್ಟ ಪೋಲೀಸ್ ಅಧಿಕಾರಿಗೆ ಬರಲು ಹೇಳಿ, ಚಳುವಳಿ ಮಾಡಿದವರ ಕೈಗೆ ಬೇಡಿ ಹಾಕಿದ್ದೇಕೆಂದು ನಾವು ಕೇಳುತ್ತೇವೆ' ಎಂದು.

ನಾನು ದವಾಖಾನೆಯ ಒಳಗೆ ಕಾಲಿಟ್ಟ ಮೇಲೆ ಎಲ್ಲವೂ ತಿಳಿಯಿತು. ಸಮೀಪದ ಬ್ರಹ್ಮಪುರ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ಗೆ ನಾನು ಕೇಳಿದೆ. ನೀವು ಹೋರಾಟಗಾರರ ಕೈಗೆ ಬೇಡಿ ಹಾಕಿದ್ದು ಯಾಕೆ? ಅವರೇನು ಓಡಿ ಹೋಗುವವರೇ...?' ಅವರುಹೇಳಿದ್ದು ಇಷ್ಟೇ 'ನನಗೆ ಗೊತ್ತಿಲ್ಲ ಮತ್ತು ಇದು ನನಗೆ ಸಂಬಂಧಿಸಿಲ್ಲ...'

ನಿಮಗೆ ಸಂಬಂಧಿಸಿಲ್ಲದಿದ್ದರೆ ಸಂಬಂಧ ಇರುವವರನ್ನು ಕರೆಸಿ ಅವರೊಂದಿಗೆ ಮಾತನಾಡುತ್ತೇವೆ... ನಮಗೆ ಸಿಟ್ಟು ಬಂದಿತ್ತು. ಜನರ ಸಮಸ್ಯೆಗಳ ಪರಿಹಾರಕ್ಕೆ ಚಳುವಳಿ ಮಾಡಿದವರನ್ನು ಜೈಲಿಗೆ ಕಳಿಸಿದ್ದಾರೆ. ಆದರೆ ಹೀಗೆ ಬೇಡಿ ಹಾಕಿ ಕರೆ ತರುವುದು ಅಂದ್ರೆ ಏನರ್ಥ? ನಾವಿನ್ನೂ ಮಾತನಾಡುತ್ತಿದ್ದೆವು. ನಾನು ಅಕ್ಷರಶಃ ನಡೆದ ಘಟನೆಯ ಬಗ್ಗೆ ಹೇಳತೊಡಗಿದೆ. ನೆರೆದ ಜನಕ್ಕೆ ಸತ್ಯದ ಅರಿವಾಗತೊಡಗಿತು. ಅನೇಕರು ಸರಕಾರಕ್ಕೂ ಪೊಲೀಸರಿಗೂ ಬಯ್ಯುತ್ತಿದ್ದರು.

ನೋಡು ನೋಡುತ್ತಿದ್ದಂತೆಯೇ ಅಲ್ಲಿಗೆ ಒಬ್ಬ ಪೊಲೀಸ್ ಅಧಿಕಾರಿ ಬಂದರು. ಅವರು ಬರುವ ರೀತಿ, ಹೆಜ್ಜೆ ಇಡುವಗತ್ತು ನೋಡಿದರೆ ಅವರು ಯಾರ ಮೇಲಾದರೂ ಧಾಳಿ ಮಾಡಲೆಂದು ನಿರ್ಣಯ ಮಾಡಿಕೊಂಡೇ ಬಂದ ಹಾಗಿತ್ತು. ಅಧಿಕಾರಿ ಯಾರಿರಬಹುದು? ತಲೆ ಎತ್ತಿ ನೋಡಿದೆ ಎ.ಎಸ್.ಪಿ. (ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ) ಅವರು ಕವಿಗಳೂ ಅನ್ನುವುದು ನನಗೆ ಗೊತ್ತಿತ್ತು. "ಪರವಾಯಿಲ್ಲ. ಸಾಹಿತಿಗಳು ಸ್ವಲ್ಪ ಸೂಕ್ಷ್ಮವಾಗಿ ಹ್ಯಾಂಡಲ್ ಮಾಡಬಹುದು. ಉದ್ಭವಿಸಿದ ಸಮಸ್ಯೆ ತಿಳಿಯಾಗಬಹುದು." ಸಬ್ ಇನ್ಸ್‌ಪೆಕ್ಟರ್ ಅಲ್ಲೆಲ್ಲೂ ಕಾಣಿಸಲಿಲ್ಲ.

ಅಧಿಕಾರಿ ಕಾಲಿನ ಬೂಟ್ಸ್‌ಗಳ ಕಟ್‌ಕಟ್ ಶಬ್ದದೊಂದಿಗೆ ಬಂದ "ಏಯ್ ಏನ್ರೀ?" ಕೇಳಿದ ನನಗೆ ಅನುಮಾನ ಶುರುವಾಯಿತು. ಮಾತಿನ ಧಾಟಿಯೊಳಗೆ ಪೊಲೀಸ್ ವ್ಯಾಕರಣವಿದೆ. ಈಗ ಬಂದಿದ್ದು ಕವಿಯಲ್ಲ. ಪೊಲೀಸ್ ಅಧಿಕಾರಿ, ಮಾನಪಡೆ, ರೈತ ಮುಖಂಡರ ಕೈಗೆ ಬೇಡಿ ಹಾಕಲು ಕಾರಣವೇನು ಕೇಳಲು ಪ್ರಯತ್ನಿಸುತ್ತಿದ್ದರು. ಆದರೆ ಪೊಲೀಸ್ ಅಧಿಕಾರಿ ತಾಳ್ಮೆ ಬಿಟ್ಟು ಬಂದಿದ್ದರೆನಿಸುತ್ತದೆ. 'ಏಯ್ ನೀನ್ ಯಾವ್ನೋ ಕೇಳಲಿಕ್ಕೆ..?' ಜನರ ಸಿಟ್ಟನ್ನು ತಣ್ಣಗೆ ಮಾಡಿ ಯಾವುದೇ ಅಹಿತಕರ ಘಟನೆ ಘಟಿಸದಂತೆ ಶಾಂತಿ ಕಾಪಾಡಬೇಕಿರುವುದು ಪೊಲೀಸರ ಕೆಲಸ. ಆದರೆ ಈ ಅಧಿಕಾರಿ ಈ ನೀತಿಗೆ ತದ್ವಿರುದ್ಧದ ಕೆಲಸಕ್ಕೆ ಬಂದಿದ್ದರು.

ಮಾನಪಡೆ ಮತ್ತು ಅವರನ್ನು ಮೊದಲು ಮಾತಾಡಲ ಬಿಟ್ಟು ಸುಮ್ಮನೆ ನಿಲ್ಲುವುದೆಂದು ನಾನು ನೋಡುತ್ತ ನಿಂತುಕೊಂಡೆ. ನನ್ನಂತೆಯೇ ರೈತ ಸಂಗಾತಿ ವಿರುಪಾಕ್ಷಪ್ಪ ಸಹ ನೋಡುತ್ತ ನಿಂತಿದ್ದ ಎರಡೇ ಎರಡು ನಿಮಿಷ ಮುಗಿದಿರಬೇಕು. ಅಷ್ಟರಲ್ಲಿ ನಾಪತ್ತೆಯಾಗಿದ್ದ ಸಬ್ ಇನ್‌ಸ್ಪೆಕ್ಟರ್ ದಿಢೀರೆಂದು ನೂರಾರು ಜನ ಪೊಲೀಸ್ ಪಡೆಯೊಂದಿಗೆ ನುಗ್ಗಿದ. ಕ್ಷಣಾರ್ಧದಲ್ಲಿಯೇ ವಿರುಪಾಕ್ಷಪ್ಪನ ಮೇಲೆ ಧಾಳಿ. ಇದ್ಯಾವುದರ ನಿರೀಕ್ಷೆ ಇರದ ವಿರುಪಾಕ್ಷನನ್ನು ನೆಲಕ್ಕೆ ಕೆಡವಿದರು. ಲಾಠಿ ತುರುವಲಿಕ್ಕೆ ಗೋಡೆಗಳು ಅಡ್ಡವಾಗಿದ್ದವು. ನಾಲ್ಕು ಹೆಜ್ಜೆ ಎಳೆದುಕೊಂದು ಮುಂದೆ ಒಯ್ದರು. ಪೊಲೀಸರ ರಾಶಿ. ಗೋಲಾಕಾರದ ರಾಶಿ. ನನ್ನ ಕಣ್ಣಿಗೆ ಪೊಲೀಸರು ಕಾಣಿಸುತ್ತಿಲ್ಲ. ಎಲ್ಲರೂ ಕ್ರಮಬದ್ಧವಾಗಿ ಲಾಠಿಗಳನ್ನು ಮೇಲೆತ್ತಿ ವಿರುಪಾಕ್ಷಪ್ಪನ ಮೇಲೆ ಆಡಿಸತ್ತಿರುವುದು ಕಾಣುತ್ತಿತ್ತು. ಆತನ ಚೀತ್ಕಾರ ಕರುಳು ಚುರ್ರೆನಿಸುವಂತಿತ್ತು. ಇತ್ತ ಪೊಲೀಸ್ ಅಧಿಕಾರಿ ಮಾನಪಡೆಯವರ ಕಾಲರ್‌ಗೆ ಕೈ ಹಾಕಿದ್ದ ಈ ಎರಡು ಘಟನೆಗಳು ಏಕಕಾಲದಲ್ಲಿ ಶುರುವಾದಂತೆ ಕಾಣುತ್ತಿತ್ತು. ನಾನು ಏನು ಮಾಡಬೇಕೆಂದು ಲೆಕ್ಕ ಹಾಕುತ್ತಿರುವಷ್ಟರಲ್ಲಿಯೇ ಗಂಗಮ್ಮ ಓಡೋಡಿ ಹೋದರು. ವಿರುಪಾಕ್ಷಪ್ಪನಿಗೆ ರಕ್ಷಣೆಯಾಗಿ ನಿಂತುಕೊಂಡರು. ಅಲ್ಲಿ ಒಬ್ಬರೂ ಮಹಿಳಾ ಕಾನ್‌ಸ್ಟೇಬಲ್ ಇರಲಿಲ್ಲ. ಪುರುಷ ಪೊಲೀಸರೇ ಮುಂದಾಗಿ ಗಂಗಮ್ಮನನ್ನು ಕೈ ಹಿಡಿದು ತಳ್ಳಿದರು. ತಳ್ಳುತ್ತ ತಳ್ಳುತ್ತ ಬಾಗಿಲ ಹತ್ತಿರ ತಂದರು. ನನಗೆ ತಡೆದುಕೊಳ್ಳಲಾಗಲಿಲ್ಲ. ನಾನು ನೆಲಕ್ಕೆ ಬಿದ್ದ ವಿರುಪಾಕ್ಷಪ್ಪನಿಗೆ ಕೈ ಅಡ್ಡ ಚಾಚಿ ನಿಂತೆ. ಅಷ್ಟೊತ್ತಿಗಾಗಲೇ ವಿರುಪಾಕ್ಷಪ್ಪ ಸಾಕಷ್ಟು ಹೊಡೆತ

ಪುಟ 10 ಕ್ಕೆ

ತ್ರಿಪುರಾ ಚುನಾವಣೆ : ರಾಷ್ಟ್ರೀಯ ಏಕತೆ ...



ಈಶಾನ್ಯ ಭಾರತದ ಪುಟ್ಟರಾಜ್ಯ ತ್ರಿಪುರಾದಲ್ಲಿ ವಿಧಾನ ಸಭೆಗೆ ಚುನಾವಣೆಗಳು ನಡೆಯಲಿವೆ. ಇದೊಂದು ಸಾಮಾನ್ಯ ಚುನಾವಣೆಯಲ್ಲ. ದೇಶದ ಐಕ್ಯತೆ ಮತ್ತು ಸಮಗ್ರತೆಯ ರಕ್ಷಣೆಯ ಹಣಾಹಣಿ ಹೋರಾಟ. ಹಲವಾರು ದಶಕಗಳಿಂದ ಕಾಪಾಡಿಕೊಂಡು ಬಂದ ಬುಡಕಟ್ಟು - ಬುಡಕಟ್ಟೇತರ ಜನಾಂಗಗಳ ಒಗ್ಗಟ್ಟು ಸಾಮರಸ್ಯದ ಉಳಿವಿನ ಪ್ರಶ್ನೆ-ಸಾಧಿಸಲಾದ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಯ ಪ್ರಶ್ನೆಯಾಗಿದೆ. ಹಲವಾರು ದಶಗಳ ಆಡಳಿತದ ಎಡರಂಗದ ಅಗಾಧ ಸಾಧನೆಗಳನ್ನು ಜನತೆ ಬೆಂಬಲಿಸುತ್ತಿರುವಾಗ ಚುನಾವಣೆಯಲ್ಲಿ ಗೆಲ್ಲುವುದನ್ನೇ ದೃಷ್ಟಿ ಇರಿಸಿರುವ ಕಾಂಗ್ರೆಸ್ ಪ್ರತ್ಯೇಕತಾವಾದಿ, ಭಯೋತ್ಪಾದಕ ಶಕ್ತಿಗಳೊಂದಿಗೆ ಕೈಜೋಡಿಸಿದೆ. ಬಹಿರಂಗವಾಗಿ ಸಿಪಿಐ(ಎಂ) ನೇತೃತ್ವದ ರಂಗದ ವಿರುದ್ಧ ಮೈತ್ರಿ ಮಾಡಿಕೊಂಡಿದೆ. ಈ ಭಯೋತ್ಪಾದ ಶಕ್ತಿಗಳು ಅಮಾನುಷ, ಮಾರಣಹೋಮ ಮುಂದುವರಿಸಿವೆ. ಸಾಮ್ರಾಜ್ಯಶಾಹಿಗಳ ಬೆಂಬಲವೂ ಇದೆ. ಇಡೀ ರಾಜ್ಯವೇ ತ್ವೇಷಮಯ ಸನ್ನಿವೇಶ ಅನುಭವಿಸುತ್ತಿದೆ. ಇಂತಹ ಸಂದರ್ಭದಲ್ಲಿ ಇಡೀ ದೇಶವೇ ತ್ರಿಪುರಾದ ಎಡರಂಗದೊಂದಿಗೆ ನಿಲ್ಲಬೇಕು. ಚುನಾವಣಾ ಆಯೋಗ ಜಮ್ಮು-ಕಾಶ್ಮೀರದಲ್ಲಿ ಕ್ರಮವಹಿಸದಂತೆ, ಇಲ್ಲಿಯೂ ದೃಢ ಹೆಜ್ಜೆ ಇರಿಸಿ ಮುಕ್ತ ನ್ಯಾಯಯುತ ಚುನಾವಣೆ ನಡೆಸಲು ಎಲ್ಲಾ ಕ್ರಮ ವಹಿಸಬೇಕು. ಈ ಚುನಾವಣಾ ಸವಾಲಿನತ್ತ ಗಮನ ಸೆಳೆವ ಲೇಖನವಿಲ್ಲಿ.


ನಿತ್ಯಾನಂದ ಸ್ವಾಮಿ

ತ್ರಿಪುರಾ ರಾಜ್ಯದ ವಿಧಾನಸಭೆಗೆ ಫೆಬ್ರವರಿ 26 ರಂದು ನಡೆಯಲಿರುವ ಚುನಾವಣೆ ಒಂದು ಸಾಮಾನ್ಯ ಚುನಾವಣೆಯಲ್ಲ. ದೇಶದ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾದ ದೇಶದ ಏಕತೆ ಮತ್ತು ಸಮಗ್ರತೆಗೆ ಅಪಾಯ ಬಂದೊದಗಿದೆ. 'ತ್ರಿಪುರಾ ರಾಷ್ಟ್ರೀಯ ವಿಮೋಚನಾರಂಗ' (ಎನ್‌ಎಲ್‌ಎಫ್‌ಟಿ) ಎಂಬ ನಿಷೇಧಿತ ಭಯೋತ್ಪಾದಕ ಸಂಘಟನೆಯು ದೇಶದಿಂದ ಪ್ರತ್ಯೇಕಗೊಳ್ಳುವುದನ್ನು ಬಹಿರಂಗವಾಗಿಯೇ ಪ್ರತಿಪಾದಿಸುತ್ತದೆ. ಐಎನ್‌ಪಿಟಿ ಎಂಬ ಅದರ ರಾಜಕೀಯ ಅಂಗದ ಮುಖ್ಯಸ್ಥ ಬಿಜೊಯ್ ಹ್ರಂಗಖಾವ್ಲ್ ಕಳೆದ ವರ್ಷ ಜಿನೇವಾದಲ್ಲಿ ಮಾಡಿದ ಭಾಷಣದಲ್ಲಿ ಬಹಿರಂಗವಾಗಿ ತ್ರಿಪುರಾದಲ್ಲಿ ನಡೆಸಲಾಗುತ್ತಿರುವ ಪ್ರತ್ಯೇಕತಾವಾದಿ ಚಟುವಟಿಕೆಗಳು 'ವಿಮೋಚನಾ ಹೋರಾಟ' ಎಂದು ಬಣ್ಣಿಸಿದ್ದಾನೆ.

ತ್ರಿಪುರಾ ರಾಜ್ಯವು 856 ಕಿ.ಮಿ. ಉದ್ದದ ಅಂತರ್‌ರಾಷ್ಟ್ರೀಯ ಗಡಿಯನ್ನು ಹೊಂದಿದೆ. ಗಡಿಯಾಚೆ ಬಾಂಗ್ಲಾದೇಶದ ನೆಲದಲ್ಲಿ ಈ ಎರಡು ಪ್ರಮುಖ ಪ್ರತ್ಯೇಕತಾವಾದಿ ಸಂಘಟನೆಗಳು ತಮ್ಮ ಶಿಬಿರಗಳನ್ನು ಕಟ್ಟಿಕೊಂಡಿದ್ದು ಅಲ್ಲಿಂದ ಅವುಗಳು ಕಾರ್ಯನಿರ್ವಹಿಸುತ್ತವೆ. ಜನರ ನಡುವೆ ಭಯ ಭೀತಿ ಹುಟ್ಟಿಸಿ ಅವರು ತಮಗೆ ಶರಣಾಗುವಂತೆ ಮಾಡಲು ಅತ್ಯಂತ ಹೇಯ ಕೃತ್ಯಗಳನ್ನು ಎಸಗುತ್ತವೆ. ಸಿಪಿಐ(ಎಂ) ಮತ್ತು ಅದರ ಬೆಂಬಲಿಗರು ನಡೆಸಿರುವ ಧೀರ ಹೋರಾಟಗಳು ಹಾಗೂ ಅಪಾರ ತ್ಯಾಗ ಬಲಿದಾನಗಳಿಂದ ಮಾತ್ರ ತ್ರಿಪುರಾವನ್ನು ದೇಶದ ಅವಿಭಾಜ್ಯ ಅಂಗವಾಗಿ ಉಳಿಸಿಕೊಳ್ಳಲು ಸಾಧ್ಯವಾಗಿದೆ.

ತ್ಯಾಗ ಬಲಿದಾನಗಳ ಸಿಪಿಐ(ಎಂ) ಪರಂಪರೆ :

ಚುನಾವಣೆಗಳು ಸಮೀಪಿಸುತ್ತಿದ್ದಂತೆ ಸಿಪಿಐ(ಎಂ) ಕಾರ್ಯಕರ್ತರ, ಬೆಂಬಲಿಗರ ಮತ್ತು ಹಿತೈಷಿಗಳ ಮೇಲೆ ನಿಷೇಧಿತ 'ತ್ರಿಪುರಾ ರಾಷ್ಟ್ರೀಯ ವಿಮೋಚನಾ ರಂಗ'ದ ಮರಣಾಂತಿಕ ದಾಳಿಗಳು ತೀವ್ರವಾಗಿವೆ. ಇದೇ ಜನವರಿ 14 ರಂದು ಖೊವ್ಯಾ ಉಪವಿಭಾಗದ ಚಂಪ್ಲಾಯಿ ಗ್ರಾಮದಿಂದ ಚಂದ್ರಮಣಿ ದೇವವರ್ಮಾ ಮತ್ತು ರಮೇಶ್ ದೇವವರ್ಮಾ ಎಂಬ ಇಬ್ಬರು ಸಿಪಿಐ(ಎಂ) ಕಾರ್ಯಕರ್ತರನ್ನು ಅಪಹರಿಸಲಾಯಿತು. ಇವರಿಬ್ಬರ ಮೃತ ದೇಹಗಳನ್ನು ಮರುದಿನ ಪೋಲೀಸರು ಪತ್ತೆ ಹಚ್ಚಿದರು. ಎಷ್ಟೊಂದು ಅಮಾನುಷ ಹಿಂಸೆಗೆ ಇವರಿಬ್ಬರನ್ನು ಗುರಿಪಡಿಸಲಾಗಿತ್ತು ಎಂಬುದನ್ನು ಆ ಎರಡು ಶವಗಳೇ ಸಾಕ್ಷಿ ಹೇಳುವಂತಿದ್ದವು. ಇಬ್ಬರ ಕಣ್ಣುಗಳನ್ನು ಕಿತ್ತುಹಾಕಲಾಗಿತ್ತು. ಕಿವಿಗಳನ್ನು ಕತ್ತರಿಸಲಾಗಿತ್ತು. ಬುಲೆಟ್ ಗುರುತುಗಳಲ್ಲದೆ ಹರಿತವಾದ ಆಯುಧಗಳಿಂದ ಅನೇಕ ಬಾರಿ ತಿವಿದ ಗಾಯಗಳು ಆ ದೇಹಗಳ ಮೇಲಿದ್ದವು. ಎರಡೂ ತಲೆಗಳನ್ನು ಬೋಳಿಸಿ ಹರಿತವಾದ ಆಯುಧದಿಂದ ತಲೆಗಳ ಮೇಲೆ ಪ್ರತ್ಯೇಕತಾವಾದಿ ಸಂಘಟನೆಯ ಹೆಸರನ್ನು ಕೊರೆಯಲಾಗಿತ್ತು.



ಕಾಂಗ್ರೆಸ್ ಮತ್ತು ಭಯೋತ್ಪಾದಕರ ನಡುವಿನ ಮೈತ್ರಿ ಬಯಲಿಗಿಟ್ಟ ಗೋಡೆಬರಹದ ವ್ಯಂಗ್ಯಚಿತ್ರ

ಇದೇ ಜನವರಿ 21 ರ ರಾತ್ರಿ ಇದೇ ಎನ್‌ಎಲ್‌ಎಫ್‌ಟಿ ವಿಚ್ಛಿದ್ರಕಾರಿಗಳು ಇನ್ನೊಬ್ಬ ಸಿಪಿಐ(ಎಂ) ಮುಖಂಡನನ್ನು ಅಮಾನುಷವಾಗಿ ಕೊಂದುಹಾಕಿದ್ದಾರೆ. ನರೇಶ್ ದೇವ್ ಅವರು ಧೊಲ್ಯಾ ಉಪವಿಭಾಗದ ಕರಮಚೀರಾ ಸ್ಥಳೀಯ ಸಮಿತಿಯ ಸದಸ್ಯರಾಗಿದ್ದರು. ಜನವರಿ 21 ರ ರಾತ್ರಿ ಅಪಹರಿಸಲ್ಪಟ್ಟ ಅವರು ಹೆಣವಾಗಿ ದೊರಕಿದ್ದು 22 ರ ಬೆಳಿಗ್ಗೆ. ಹೀಗೆ ಪ್ರತಿದಿನ ಎಂಬಂತೆ ಸಿಪಿಐ(ಎಂ) ಮುಖಂಡರು ಮತ್ತು ಕಾರ್ಯಕರ್ತರು ಹತ್ಯೆಗೊಳಗಾಗುತ್ತಲೇ ಇದ್ದಾರೆ. ಜನವರಿ 11 ರಂದು ಚುನಾವಣೆ ಘೋಷಣೆಯಾದಗಿನಿಂದ ಕನಿಷ್ಠ ಹನ್ನೊಂದು ಜನ ಸಿಪಿಐ(ಎಂ) ಕಾರ್ಯಕರ್ತರು ಇವರಿಂದ ಹತ್ಯೆಯಾಗಿದ್ದಾರೆ. ಈ ವಿಚ್ಛಿದ್ರಕಾರಿ ಭಯೋತ್ಪಾದಕರ ವಿರುದ್ಧ ಸಿಪಿಐ(ಎಂ) ನಡೆಸುತ್ತಿರುವ ಹೋರಾಟವು ದೇಶದ ಏಕತೆ ಮತ್ತು ಸಮಗ್ರತೆಯ ರಕ್ಷಣೆಯಲ್ಲಿ ಅದರ ಮಹೋನ್ನತ ದೇಶಪ್ರೇಮದ ದ್ಯೋತಕವಾಗಿದೆ.

ಅಂದು ಮೌಂಟ್‌ಬ್ಯಾಟನ್ ಒಪ್ಪಂದವು ಒದಗಿಸಿದ ಅವಕಾಶವನ್ನು ಬಳಸಿಕೊಂಡು ತನ್ನ ಸಂಸ್ಥಾನವನ್ನು ಸ್ವತಂತ್ರವಾಗಿ ಉಳಿಸಿಕೊಳ್ಳಲು ಆಲೋಚಿಸುತ್ತಿದ್ದ ತ್ರಿಪುರಾದ ಮಹಾರಾಜನ ವಿರುದ್ಧ ಕಮ್ಯುನಿಸ್ಟ್ ನಾಯಕ ಕಾಮ್ರೇಡ್ ದಶರಥ್ ದೇವ್ ಅಂತವರ ನೇತೃತ್ವದಲ್ಲಿ ರಾಜ್ಯದ ಬುಡಕಟ್ಟು ಜನತೆ ನಡೆಸಿದ ಧೀರೋದಾತ್ತ ಹೋರಾಟದಿಂದಾಗಿ ತ್ರಿಪುರಾ ರಾಜ್ಯವು ಭಾರತದೊಳಗೆ ಉಳಿಯುವಂತಾಯಿತು. ಆದರೆ ಇದೇ ರಾಜ ಮನೆತನದ ಪ್ರಮುಖರು ಮುಂದೆ ತ್ರಿಪುರಾದಲ್ಲಿ ಕಾಂಗ್ರೆಸ್ ಪಕ್ಷದ ಅಗ್ರಗಣ್ಯ ನಾಯಕರಾದರು

ನೀತಿಗೆಟ್ಟ ಕಾಂಗ್ರೆಸ್:

ದೇಶದ ಸ್ವಾತಂತ್ರ್ಯಹೋರಾಟದ ವಾರಸುದಾರರು ತಾವೆಂದು ಹೇಳುವ ಕಾಂಗ್ರೆಸ್ ಪಕ್ಷವು ತ್ರಿಪುರಾದಲ್ಲಿ ಐಎನ್‌ಪಿಟಿ ಎಂಬ ಪ್ರತ್ಯೇಕತಾವಾದಿ ಪಕ್ಷದೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಂಡಿದೆ. ಕಾಂಗ್ರೆಸ್ ಪಕ್ಷದ ಈ ಬೇಜವಾಬ್ದಾರಿಯುತ ತೀರ್ಮಾನದಿಂದಾಗಿ ದೇಶದ್ರೋಹಿ ಶಕ್ತಿಗಳಿಗೆ ಪುರಸ್ಕಾರ ನೀಡಿದಂತಾಗಿದೆಯಲ್ಲದೇ ಅವುಗಳ ದೇಶ-ವಿರೋಧಿ ಚಟುವಟಿಕೆಗಳಿಗೆ ಕುಮ್ಮಕ್ಕು ಸಿಕ್ಕಂತಾಗಿದೆ. ರಾಜಕೀಯ ಹಾಗೂ ಚುನಾವಣಾ ಲಾಭದಾಸೆಯಿಂದ ಕಾಂಗ್ರೆಸ್ ಪಕ್ಷವು ಮತ್ತೊಮ್ಮೆ ದೇಶದ ಹಿತ್ತಕಿಂತ ಪಕ್ಷದ ಹಿತಕ್ಕೆ ಆದ್ಯತೆ ನೀಡಲು ಹೊರಟಿದೆ. ಮಾತ್ರವಲ್ಲ ಪಕ್ಷದ ಹಿತಕ್ಕಾಗಿ ದೇಶವಿರೋಧಿ ಶಕ್ತಿಗಳೊಂದಿಗೆ ಕೈಜೋಡಿಸಲು ಹೇಸುವುದಿಲ್ಲ ಎಂದು ಸಾಬೀತು ಪಡಿಸಿದೆ. ಕಾಂಗ್ರೆಸ್ ಪಕ್ಷವು ಚುನಾವಣಾ ಲಾಭಕ್ಕಾಗಿ ಸೈತಾನನೊಂದಿಗೂ ಕೈ ಜೋಡಿಸಲು ಹಿಂಜರಿಯದು ಎಂದು ಹೇಳುವಂತಿದೆ. ಕಾಂಗ್ರೆಸ್ ಕೃಪಾಪೋಷಿತ ಎನ್‌ಎಲ್‌ಎಫ್‌ಟಿ, ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟಕ್ಕೆ ಮತ ನೀಡಬೇಕೆಂದು ಜನರನ್ನು ಒತ್ತಾಯಿಸಲು ಆರಂಭಿಸಿದೆ. ಕಾಂಗ್ರೆಸ್ ಪಕ್ಷವು ತ್ರಿಪುರಾ ರಾಜ್ಯವನ್ನು ನಮ್ಮ ದೇಶದಿಂದ ಪ್ರತ್ಯೇಕಿಸಲು ಹೊರಟಿರುವ ವಿಚ್ಛಿದ್ರಕಾರಿ ಸಂಘಟನೆಗಳೊಂದಿಗೆ ಕೈ ಜೋಡಿಸಲು ಹೊರಡಿರುವುದನ್ನು ನೋಡಿದರೆ ಸಂಕುಚಿತ ಚುನಾವಣಾ ಲಾಭಕ್ಕಾಗಿ ಅದು ಏನು ಬೇಕಾದರೂ ಮಾಡಲು ಸಿದ್ಧವಿದೆ ಎಂಬುದು ಮತ್ತೊಮ್ಮೆ ಸ್ಪಷ್ಟವಾಗಿದೆ.

ಬುಡಕಟ್ಟು ಬುಡಕಟ್ಟೇತರ ಜನರ ಐಕ್ಯತೆಗೆ ಧಕ್ಕೆ :

ರಾಜ್ಯದ ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ನಡುವೆ ಸಿಪಿಐ(ಎಂ) ತುಂಬಾ ಕಾಳಜಿ ವಹಿಸಿ ಬೆಸೆದುಕೊಂಡು ಬಂದ ಐಕ್ಯತೆಗೂ ಈಗ ಗಂಡಾಂತರ ಬಂದಿದೆ. ತ್ರಿಪುರಾದಲ್ಲಿ ಎಡರಂಗ ಸರ್ಕಾರ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಾಗಲೇ ಬುಡಕಟ್ಟು ಪ್ರದೇಶಗಳ ಸ್ವಾಯತ್ತ ಜಿಲ್ಲಾ ಮಂಡಳಿಗಳನ್ನು ಸ್ಥಾಪಿಸಿ ಬುಡಕಟ್ಟು ಜನತೆಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿತಗಳಿಗೆ ರಕ್ಷಣೆ ಒದಗಿಸಲಾಯಿತು. ಇಂತಹ ಒಂದು ವ್ಯವಸ್ಥೆ ದೇಶದ ಬೇರೆ ಯಾವ ಭಾಗದಲ್ಲಿಯೂ ಕಾಣಸಿಗುವುದಿಲ್ಲ. ಅಷ್ಟೇ ಅಲ್ಲ, ಬುಡಕಟ್ಟು ಜನತೆ ಮತ್ತು ಇತರ ಜನರ ನಡುವೆ ಸೌಹಾರ್ದ ಸಂಬಂಧವನ್ನು ಪ್ರೋತ್ಸಾಹಿಸಿ ಬೆಳೆಸುವುದಕ್ಕೂ ಎಡರಂಗ ಸರ್ಕಾರ ಕಾಳಜಿ ವಹಿಸಿತು.

ಆದರೆ ಚುನಾವಣೆಯಲ್ಲಿ ಮತಗಳಿಕೆಯ ಉದ್ದೇಶದಿಂದ ಕಾಂಗ್ರೆಸ್-ಐಎನ್‌ಪಿಟಿ ಮೈತ್ರಿಕೂಟವು ಕಷ್ಟಪಟ್ಟು ಕಟ್ಟಿ ಬೆಳೆಸಿದ ಈ ಐಕ್ಯತೆಯನ್ನು ಮುರಿಯಲು ಹೊರಟಿದೆ. ಒಂದು ಕಡೆ ಬುಡಕಟ್ಟು ಜನರ ಮೇಲೆ ಭಯೋತ್ಪಾದಕ ದಾಳಿಗಳನ್ನು ಮಾಡಿ, ಅವರಲ್ಲಿ ಭೀತಿ ಹುಟ್ಟಿಸಿ ತಮಗೆ ವಿಧೇಯರಾಗಿ ನಡೆದುಕೊಳ್ಳುವಂತೆ ಬಲವಂತ ಮಾಡಲಾಗುತ್ತಿದೆ. ಇನ್ನೊಂದು ಕಡೆ ಬಂಗಾಳಿ ಭಾಷಾಂಧತೆಯನ್ನು ಬೆಳೆಸಿ ಚುನಾವಣೆಯಲ್ಲಿಲಾಭ ಪಡೆಯಲು ಪ್ರಯತ್ನಪಡಲಾಗುತ್ತಿದೆ. ಇದು ರಾಜ್ಯದ ಜನಜೀವನದ ಮೇಲೆ ಗಂಭೀರ ಪರಿಣಾಮ ಬೀರಲಿದ್ದು ನಿರಂತರ ಸಂಘರ್ಷಕ್ಕೆ ಕಾರಣವಾಗಲಿದೆ.

ಒಟ್ಟು 60 ಸ್ಥಾನಗಳ ಪೈಕಿ ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟಿರುವ 20 ಸ್ಥಾನಗಳಿಗೆ ವಿಶೇಷ ರಕ್ಷಣೆ ಒದಗಿಸಬೇಕೆಂದು ಸಿಪಿಐ(ಎಂ) ಚುನಾವಣಾ ಆಯೋಗವನ್ನು ಒತ್ತಾಯಿಸಿದೆ. ಈ ಸ್ಥಾನಗಳಿಗೆ ಸಂಬಂಧಪಟ್ಟ ಮತಗಟ್ಟೆಗಳಿಗೆ ನುಗ್ಗಿ ಬುಡಕಟ್ಟು ಜನತೆ ಮತದಾನದಲ್ಲಿ ಭಾಗವಹಿಸದಂತೆ ಮಾಡಲು ಎನ್‌ಎಲ್‌ಎಫ್‌ಟಿ ಎಲ್ಲಾ ಪ್ರಯತ್ನ ಮಾಡುವ ಸಾಧ್ಯತೆ ಇರುವುದರಿಂದ ಸಿಪಿಐ(ಎಂ) ಚುನಾವಣಾ ಆಯೋಗಕ್ಕೆ ಈ ರೀತಿ ಮನವಿ ಸಲ್ಲಿಸಿದೆ.




ಸುವ ಸಮರ

ಡರಂಗದ ದೋಷರಹಿತ ದಾಖಲೆ:


ರಾಜ್ಯದ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ತ್ತಮಪಡಿಸುವ ವಿಷಯದಲ್ಲಿ ಎಡರಂಗ ರ್ಕಾರದ ಆಡಳಿತವು ಒಂದು ದೋಷವಿಲ್ಲದ ಾಖಲೆಯಾಗಿದೆ. ಕೇಂದ್ರದ ಯೋಜನೆಗಳ ಮತ್ತು ರವಿನ ಪ್ರಯೋಜನವನ್ನು ಜನರಿಗೆ ತಲುಪಿಸುವ ಿಷಯದಲ್ಲಿ ತ್ರಿಪುರಾ ಇನ್ನುಳಿದ ಎಲ್ಲಾ ಈಶಾನ್ಯ ಾಜ್ಯಗಳಿಗಿಂತ ಮುಂದಿದೆ ಎಂದು ದೆಹಲಿಯ ೊಗಸಾಲೆಗಳಲ್ಲಿಯೇ ಕೇಳಿಬರುವ ಮಾತಾಗಿದೆ. ದಕ್ಕೆ ತದ್ವಿರುದ್ಧವಾಗಿ, ಹಿಂದಿನ ಕಾಂಗ್ರೆಸ್ ಡಳಿತವು ಜನತೆಗೆ ತಲುಪಬೇಕಾದ ಂಪನ್ಮೂಲಗಳ ದುರ್ವಿನಿಯೋಗ ಮತ್ತು ೂಟಿಯ ದಾಖಲೆಯಾಗಿದೆ.

ಆದ್ದರಿಂದ ಕಾಂಗ್ರೆಸ್ ಮತ್ತು ಐಎನ್‌ಪಿಟಿ



ಎಡರಂಗದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್

ದುಷ್ಟ ಕೂಟವು ಹಿಂಸಾಚಾರವನ್ನು ತೀವ್ರಗೊಳಿಸುವ ಎಲ್ಲಾ ಸಾಧ್ಯತೆಗಳು ಇದ್ದಾಗ್ಯೂ, ತ್ರಿಪುರಾವನ್ನು ಕಲಹಗಳ ಕೂಪಕ್ಕೆ ತಳ್ಳಲು ಹವಣಿಸುತ್ತಿರುವ ಶಕ್ತಿಗಳನ್ನು ನಿರ್ಣಾಯಕವಾಗಿ ಸೋಲಿಸಲು ಜನತೆ ಹೆಚ್ಚೆಚ್ಚು ಉತ್ಸುಕರಾಗುತ್ತಿರುವುದು ಕಂಡುಬರುತ್ತಿದೆ. ದೇಶವಿರೋಧಿ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟವನ್ನು ಸೋಲಿಸಲು ಜನತೆ ದೃಢ ನಿರ್ಧಾರ ಮಾಡಿದ್ದಾರೆ ಎಂಬುದು ಇತ್ತೀಚೆಗೆ ಏರ್ಪಡಿಸಲಾದ ಯುವಜನರ ಮತ್ತು ಮಹಿಳೆಯರ ಬೃಹತ್ ರ್‍ಯಾಲಿಗಳಿಂದ ದೃಢಪಟ್ಟಿದೆ. ಘನಘೋರ ಹೋರಾಟದ ನಡುವೆ ಇರುವ ತ್ರಿಪುರಾದ ಜನತೆಗೆ ದೇಶದ ಏಕತೆ, ಸಮಗ್ರತೆ ಮತ್ತು ಸಾಮಾಜಿಕ ಸಾಮರಸ್ಯ ಬಯಸುವ ಎಲ್ಲಾ ದೇಶಬಾಂಧವರ ಸೌಹಾರ್ದ ಬೆಂಬಲ ಅತ್ಯಗತ್ಯವಾಗಿದೆ. ○



ಕಾಂಗ್ರೆಸ್ ಎತ್ತ ಸಾಗಿದೆ?

ಬಿಜೆಪಿಗೆ ತಾನೇ ಪರ್ಯಾಯವೆಂದುಕೊಳ್ಳುವ ಕಾಂಗ್ರೆಸ್ ನಿಜವಾಗಿಯೂ ಎಂತಹ ಸ್ಥಿತಿಯಲ್ಲಿದೆ? ಅದಕ್ಕೆ ದೇಶದ ಮುಂದಿರುವ ಗಂಭೀರ ಸವಾಲುಗಳ ಅರಿವಿದೆಯೇ? ಅರಿವಿದ್ದರೂ ಹೊಣೆ ಇದೆಯೇ? ಉದಾರೀಕರಣ, ಜಾಗತೀಕರಣದ ಆರ್ಥಿಕ ನೀತಿಗಳನ್ನು ತಾನು ಆಳುತ್ತಿರುವ ರಾಜ್ಯಗಳಲ್ಲಿಯೂ ಜಾರಿಗೊಳಿಸುತ್ತಾ ಜನವಿರೋಧಿ ಕ್ರಮಗಳನ್ನು ಕೈಗೊಳ್ಳುತ್ತಿದೆ. ಬಿಜೆಪಿಯೊಂದಿಗೆ ಸ್ಪರ್ಧಿಸುತ್ತಿದೆ. ತ್ರಿಪುರಾದಂತೆಡೆ ಛಿದ್ರಕಾರಿ, ದೇಶದ್ರೋಹಿ ಶಕ್ತಿಗಳೊಂದಿಗೆ ಕೈಜೋಡಿಸುತ್ತಾ, ದೇಶದೆಲ್ಲೆಡೆ ನಡೆವ ಫ್ಯಾಸಿಸ್ಟ್ ಸ್ವರೂಪದ ಆಕ್ರಮಣಗಳ ಬಗ್ಗೆ ಸೈದ್ಧಾಂತಿಕ ಅಶಕ್ತತೆ, ಚಂಚಲತೆ ತೋರುತ್ತಾ ಹೊಣೆಗೇಡಿಯಾಗಿದೆ. ಸ್ವಾರ್ಥಿ ವರ್ಗ ನಿಲುವು ಮತ್ತು ಸಂದರ್ಭಸಾಧಕತೆಯಿಂದ ಕಾಂಗ್ರೆಸ್ ಅಂತಿಮವಾಗಿ ಏನಾಗಲು ಬಯಸುತ್ತಿದೆ? ಈ ಬೆಳವಣಿಗೆಗಳ ಬಗ್ಗೆ ಸಿಪಿಐ(ಎಂ)ನ ನಿಲುವೇನು? ಎಂದು ವಿವರಿಸಿದ್ದಾರೆ ಲೇಖಕರು

ಪ್ರಕಾಶ್ ಕಾರಟ್

ತ್ರಿಪುರಾದಲ್ಲಿ ವಿಧಾನಸಭಾ ಚುನಾವಣೆಗಳ ಪ್ರಕಟಣೆಯಾಗುತ್ತಿದ್ದಂತೆ ನರಮೇಧ ಆರಂಭವಾಗಿದೆ. ಒಂದು ವಾರದ ಒಳಗೆ ಎನ್‌ಎಲ್‌ಎಫ್‌ಟಿ ಗ್ಯಾಂಗ್‌ಗಳು 10 ಜನರನ್ನು ಕೊಂದಿವೆ. ಅದರಲ್ಲಿ 7 ಮಂದಿ ಸಿಪಿಐ(ಎಂ) ಸದಸ್ಯರು ಮತ್ತು ಬೆಂಬಲಿಗರು, ಕೊಲೆಯಾದವರಲ್ಲಿ ಇಬ್ಬರು ಮಹಿಳೆಯರು, ಅದರಲ್ಲೊಬ್ಬರು ಕುರುಡರು. ಗಣಮುಕ್ತಿ ಪರಿಷತ್ತಿನ ಇಬ್ಬರನ್ನು ಅಮಾನುಷವಾಗಿ ಚಿತ್ರಹಿಂಸೆ ನೀಡಿ ನಂತರ ಗುಂಡಿಟ್ಟು ಕೊಲ್ಲಲಾಗಿದೆ. ಈ ಕೊಲೆಗಾರರು ಬೆಂಬಲಿಸುವ ಐಎನ್‌ಪಿಟಿ ಯೊಂದಿಗೆ ಕಾಂಗ್ರೆಸ್ ಚುನಾವಣಾ ಮೈತ್ರಿ ಮಾಡಿಕೊಂಡಿದೆ. ಐಎನ್‌ಪಿಟಿ ಸ್ಪರ್ಧಿಸುವ 18 ಸ್ಥಾನಗಳನ್ನು ಅದು ಪಡೆಯಲು ನೆರವಾಗಲು ಎನ್‌ಎಲ್ ಎಫ್‌ಟಿ ಈ ಹತ್ಯಾಕಾಂಡಕ್ಕೆ ಇಳಿದಿದೆ.


ಐಎನ್‌ಪಿಡಿಯೊಂದಿಗೆ ಕಾಂಗ್ರೆಸ್‌ನ ಚುನಾವಣಾ ಮೈತ್ರಿ ಮತ್ತೊಮ್ಮೆ ಕಾಂಗ್ರೆಸ್‌ನ ವರ್ಗದೃಷ್ಟಿ ಯನ್ನು ಅಂದರೆ ರಾಷ್ಟ್ರಮಟ್ಟದಲ್ಲಿ ಏನೇ ಮಾತಾಡಿದರೂ ತಳಮಟ್ಟದಲ್ಲಿ ಸಿಪಿಐ(ಎಂ) ಬಗ್ಗೆ ಸತತ ವೈಷಮ್ಯವನ್ನು ಎತ್ತಿ ತೋರಿದೆ.

ಬಿಜೆಪಿ ತನ್ನ ಪ್ರಧಾನ ಎದುರಾಳಿ ಎಂದು ಘೋಷಿಸಿದರೂ ಕಾಂಗ್ರೆಸ್‌ಗೆ ಎಡಪಕ್ಷಗಳ ವಿರುದ್ಧ ಯಾರೇ ನಿಂತಿದ್ದರೂ ಅವರೊಡನೆ ಸೇರಿಕೊಳ್ಳುವುದರಲ್ಲಿ ಯಾವುದೇ ಮುಜುಗರವಿದ್ದಂತಿಲ್ಲ. ಪಶ್ಚಿಮ ಬಂಗಾಳದಲ್ಲಿ 2001 ರ ವಿಧಾನ ಸಭಾ ಚುನಾವಣೆಗಳಲ್ಲಿ ಮಮತಾ ಬ್ಯಾನರ್ಜಿಯ ಒಂದು ಕಾಲು ಇನ್ನೊಂದು ಎನ್‌ಡಿಎಯಲ್ಲಿದ್ದಾಗಲೂ ಕೂಡ ಆಕೆಯ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿತು ಕೇರಳದಲ್ಲಿ ವಿವಿಧ ಜಾತಿವಾದಿ ಕೋಮುವಾದಿ ಶಕ್ತಿಗಳೊಂದಿಗೆ ರಂಗ ಕಟ್ಟಿಕೊಂಡಿರುವುದಲ್ಲದೆ ಕೆಲವು ಸ್ಥಾನಗಳಲ್ಲಿ ಎಲ್‌ಡಿಎಫ್‌ನ್ನು ಸೋಲಿಸಲು ಬಿಜೆಪಿಯೊಂದಿಗೆ ಅನೌಪಚಾರಿಕ ಒಪ್ಪಂದಗಳನ್ನು ನಡೆಸಲೂ ಹಿಂಜರಿಯಲಿಲ್ಲ. ಮಾರ್ಚ್ 2002 ರಲ್ಲಿ ನಡೆದ ಪಕ್ಷದ 17ನೇ ಮಹಾಧಿವೇಶನದ ರಾಜಕೀಯ ನಿರ್ಣಯ ಈ ಅಂಶವನ್ನು ಗಮನಿಸಿತ್ತು.

ಎಡಪಕ್ಷಗಳು ತಮ್ಮ ನೆಲೆಗಳಲ್ಲಿ ಕಾಂಗ್ರೆಸ್ ತಳೆಯುತ್ತಿರುವ ವೈಷಮ್ಯಮಯ ನಿಲುವಿನ ಆಧಾರದಲ್ಲಿ ಮಾತ್ರವೇ ತಮ್ಮ ಅಖಿಲ ಭಾರತ ರಾಜಕೀಯ-ನಿಲುವನ್ನು ನಿರ್ಧರಿಸುವುದಿಲ್ಲ. ಈಗಿನ ರಾಜಕೀಯ ಸನ್ನಿವೇಶದಲ್ಲಿ ಪ್ರಮುಖ ಅಪಾಯವಿರುವುದು ಬಿಜೆಪಿ - ಆರ್‌ಎಸ್‌ಎಸ್ ಕೂಟದಿಂದ. ಬಿಜೆಪಿಯನ್ನು ಹಿಂದೆಗಿಂತಲೂ ಹೆಚ್ಚು ಸಮಗ್ರವಾಗಿ ರಾಜಕೀಯವಾಗಿ, ಸೈದ್ಧಾಂತಿಕವಾಗಿ ಎದುರಿಸಬೇಕಾಗಿದೆ. ಆದರೆ ಕಾಂಗ್ರೆಸ್ ಅದನ್ನು ಮಾಡಲು ಶಕ್ತವಾಗಿಲ್ಲ. ಇದಕ್ಕೆ ಕಾರಣ ಕೋಮುವಾದಿ ಶಕ್ತಿಗಳ ಸತತ ದಾಳಿಯ ಎದುರು ಕಾಂಗ್ರೆಸ್‌ನ ಸೈದ್ಧಾಂತಿಕ ಅಶಕ್ತತೆ ಮತ್ತು ಚಂಚಲತೆ ಮಾತ್ರವಲ್ಲ, ಅದರ ಆರ್ಥಿಕ ಧೋರಣೆಗಳು ಮತ್ತು ಭಾರತವನ್ನು ಬಲಪಂಥದತ್ತ ತಳ್ಳುತ್ತಿರುವ ಸಾಮ್ರಾಜ್ಯಶಾಹಿ-ಹೇರಿರುವ ಜಾಗತೀಕರಣದ ಬಗ್ಗೆ ಅದರ ನಿಲುವು ಕೂಡಾ ಕಾರಣ.

ಕಾಂಗ್ರೆಸ್ ಸರ್ಕಾರಗಳು ನೀಡಿರುವುದೇನು?

ಹಿಂದುತ್ವದ ಸವಾಲಿನ ಬೃಹತ್ ಸ್ವರೂಪವನ್ನು ಅರಿಯಲು ಕಾಂಗ್ರೆಸ್ ಮುಖಂಡತ್ವ ಅಸಮರ್ಥವಾಗಿದೆ. ಈ ಪ್ರತಿಗಾಮಿ ಕಣ್ಣೋಟಕ್ಕೆ ಒಂದು ಆರ್ಥಿಕ ಮತ್ತು ವರ್ಗ ಆಯಾಮವೂ ಇದೆ ಎಂಬುದನ್ನು ಕೂಡಾ ಅದು ಅರಿಯಲಾರದು. ಅದು ಕೇವಲ ಚುನಾವಣಾ ಕಸರತ್ತುಗಳ ಮೂಲಕ ಮಾತ್ರ ಬಿಜೆಪಿಯೊಂದಿಗೆ ಸ್ಪರ್ಧಿಸಲು, ಅದನ್ನು ಎದುರಿಸಲು ಪ್ರಯತ್ನಿಸುತ್ತಿದೆ. ಸ್ವತಃ ತಾನು ಬೆಂಬಲಿಸುವ ಆರ್ಥಿಕ ನೀತಿಗಳಿಂದ ಉಂಟಾಗಿರುವ ಸಾಮೂಹಿಕ ಅಸಂತೃಪ್ತಿಯನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿದೆ.



ಛತ್ತೀಸ್‌ಗಡ್‌ನ ಅಜಿತ್ ಜೋಗಿಯಾಗಲೀ, ಕರ್ನಾಟಕದ ಎಸ್.ಎಂ.ಕೃಷ್ಣರಾಗಲೀ ಅಥವಾ ಕೇರಳದ ಎ.ಕೆ.ಆಂಟನಿಯಾಗಲೀ ಕಾಂಗ್ರೆಸ್‌ನ ಸರಕಾರಗಳ ಧೋರಣೆಗಳಲ್ಲಿ ಮತ್ತು ಬಿಜೆಪಿ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರಗಳ ಧೋರಣೆಗಳಲ್ಲಿ ವ್ಯತ್ಯಾಸವೇನೊಂದೂ ಕಾಣದು. ಅಜಿತ್ ಜೋಗಿ ಅಖಂಡ ಮಧ್ಯಪ್ರದೇಶದಿಂದ ಪಡೆದ ಸಾರಿಗೆ ಕಾರ್ಪೊರೇಷನನ್ನು ಕಳಚಿ ಹಾಕಿದ, ಮೊದಲ ಬಾರಿಗೆ ಒಂದು ನದಿಯ ಒಂದು ಭಾಗವನ್ನೇ ಖಾಸಗಿಯವರಿಗೆ ಮಾರಿದ (ಶಿವನಾಥನದಿ) 'ಕೀರ್ತಿ' ಪಡೆದವರು. ಎ.ಕೆ.ಆಂಟನಿ ಸರಕಾರ ಪೆರಿಯಾರ್ ಮತ್ತು ಮಲಂಪುಳ್ ನದಿಯ ನೀರನ್ನು ಖಾಸಗಿಯವರಿಗೆ ಕಾಂಟ್ರಾಕ್ಟ್ ನೀಡಬೇಕೆಂದಿದೆ. ಸಾರ್ವಜನಿಕ ಶಿಕ್ಷಣ ಮತ್ತು ರೇಷನ್ ವ್ಯವಸ್ಥೆಯಲ್ಲಿ ಕೇರಳದ ಪ್ರಮುಖ ಸಾಧನೆಗಳನ್ನು ಈ ಸರಕಾರ ತಿರುವುಮುರುವು ಮಾಡಹೊರಟಿದೆ.

ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಈಗ ಲಾಭದಲ್ಲಿರುವ ಸಾರ್ವಜನಿಕ ವಲಯದ ಘಟಕಗಳನ್ನು ಖಾಸಗೀಕರಿಸಬಾರದು ಎಂಬ ನಿಲುವು ಅಂಗೀಕರಿಸಿದರೂ, ಪಂಜಾಬ್‌ನಲ್ಲಿ ಕಾಂಗ್ರೆಸ್ ಸರ್ಕಾರ ಲಾಭ ಗಳಿಸುತ್ತಿರುವ ಪಂಜಾಬ್ ಟ್ರಾಕ್ಟರ್ಸ್ ಮಾರಾಟಕ್ಕೆ ಸಿದ್ಧವಾಗಿದೆ. ಕರ್ನಾಟಕ ಸರಕಾರವೂ ಅದನೇ ಮಾಡುತ್ತಿದೆ. ರೈತರ ಸಮಸ್ಯೆಗಳನ್ನು - ಅದು ಬೆಲೆ ಕುಸಿತವಾಗಲೀ, ಬರ ಪರಿಸ್ಥಿತಿಯಾಗಲೀ -ಕೈಗೆತ್ತಿಕೊಳ್ಳುವಲ್ಲಿ ಮಹಾರಾಷ್ಟ್ರದ ಅಥವಾ ರಾಜಸ್ತಾನದ ಸರಕಾರ ಯಾವುದೇ ಗಮನಾರ್ಹ ಪರ್ಯಾಯ ನೀತಿಗಳನ್ನು ತೋರಿಸಿಲ್ಲ. ಆರ್ಥಿಕರಂಗದಲ್ಲಿ ಕಾಂಗ್ರೆಸ್ ಸರಕಾರಗಳ ಶೋಚನೀಯ ದಾಖಲೆ ಜನಗಳ ಅಸಂತೃಪ್ತಿಗೆ ಫಲವತ್ತಾದ ನೆಲ ಒದಗಿಸಿಕೊಟ್ಟಿದೆ. ಹಲವು ಹಳ್ಳಿಗಳಲ್ಲಿ ಬಿಜೆಪಿ ಮತ್ತು ಶಿವಸೇನೆಯಂತಹ ಇತರ ಪ್ರತಿಗಾಮಿ ಶಕ್ತಿಗಳು ಇದರ ಲಾಭ ಪಡೆಯುತ್ತವೆ.

ಹಿಂದಿನ ತಪ್ಪುಗಳಿಂದ ಪಾಠ ಕಲಿತಿಲ್ಲ

ಗುಜರಾತ್ ಚುನಾವಣೆಯಲ್ಲಿನ ತಪ್ಪು ಕಾರ್ಯತಂತ್ರದ ಹಿನ್ನೆಲೆಯಲ್ಲಿ ತಾವು ಮತ್ತೆ ಮತ್ತೆ ಕೋಮುವಾದಿ ಬ್ಲಾಕ್‌ಮೇಲ್‌ನ್ನು ಎದುರಿಸುವಲ್ಲಿ ಏಕೆ ವಿಫಲಗೊಳ್ಳುತ್ತಿದ್ದೇವೆ, ಬಿಜೆಪಿಗೆ ಪರ್ಯಾಯವಾಗಿ ಏಕೆ ಕಾಣಿಸಿಕೊಳ್ಳುತ್ತಿಲ್ಲ ಎಂಬ ಗಂಭೀರ ಆತ್ಮವಿಮರ್ಶೆ ಕಾಂಗ್ರೆಸ್‌ನಲ್ಲಿ ನಡೆಯಬೇಕಿತ್ತು. ಐಎಂಎಫ್ - ವಿಶ್ವಬ್ಯಾಂಕ್ ತುರುಕುತ್ತಿರುವ ನೀತಿಗಳ ವಿನಾಶಕಾರಿ ಯೋಜನೆಯಲ್ಲಿ ಕಾಂಗ್ರೆಸ್ ಕೂಡಾ ಬಿಜೆಪಿಯ ಪಾಲುದಾರನಾಗಿರುವುದರಿಂದ ಕಾಂಗ್ರೆಸ್ ಬಿಜೆಪಿಗಿಂತ ಉತ್ತಮವೇನೂ ಅಲ್ಲ, ಬಿಜೆಪಿಯ ಚುನಾವಣಾ ತದ್ರೂಪಿ ಅಥವಾ ಕ್ಲೋನ್‌ಲಿ ಎಂದು ಕರೆಯಲಷ್ಟೇ ಅರ್ಹವಾಗಿದೆ. ಒಂದೇ ವ್ಯತ್ಯಾಸವೆಂದರೆ ಬಿಜೆಪಿಯಲ್ಲಿರುವ ಕೋಮುವಾದಿ ಗುಣಾಣುಗಳು ಅಥವಾ ಜೆನ್‌ಗಳು ಕಾಂಗ್ರೆಸ್‌ನಲ್ಲಿ ಇರಲಿಕ್ಕಿಲ್ಲ.

ಬಿಜೆಪಿ ನಾಚಿಕೆಯಿಲ್ಲದೆ ಸಾಮ್ರಾಜ್ಯಶಾಹಿ-ಪರ ವಿದೇಶಾಂಗ ನೀತಿ ಅನುಸರಿಸುತ್ತಾ ಎಲ್ಲಾ ವಿಷಯಗಳಲ್ಲೂ ಅಮೆರಿಕನ್ ಒತ್ತಡಕ್ಕೆ ತಲೆಬಾಗುತ್ತಿದ್ದರೂ ಕಾಂಗ್ರೆಸ್ ಈ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳುತ್ತಿಲ್ಲ. ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ, ಡಬ್ಲ್ಯುಟಿಓನಂತಹ ಸಂಸ್ಥೆಗಳ ಒತ್ತಾಯಗಳಿಗೆ ಕಾಂಗ್ರೆಸ್ ಕಿವಿಗೊಡುತ್ತದೆ. ವಿಮಾ ವಲಯವನ್ನು

ಪುಟ 12 ಕ್ಕೆ

ಅರಣ್ಯ ದಿನಗೂಲಿಗಳ ಬದುಕು ಅತಂತ್ರದಲ್ಲಿ

ಪರಿಸರ ಸಂರಕ್ಷಣೆ, ಪ್ರಾಕೃತಿಕ ಸಂಪತ್ತಿನ ಅಭಿವೃದ್ಧಿಗಾಗಿ ಶ್ರಮಿಸುವ ಅರಣ್ಯ ದಿನಗೂಲಿ ನೌಕರರು ಬದುಕಿಗೆ ಭದ್ರ ನೆಲೆಯಿಲ್ಲದೇ ಮುಡಿಯುತ್ತಲೇ ಇದ್ದಾರೆ. ಅವರ ಸಂಕಟ-ನೋವುಗಳು ಅರಣ್ಯ ರೋಧನವಾಗುತ್ತಿರುವಾಗ ನೆರವಿಗೆ ನಿಂತದ್ದು ಸಿಐಟಿಯು. ಅರಣ್ಯ ಬೆಳೆಸುವ ಯೋಜನೆಯನ್ನೇ ಕೈಬಿಡಲು ನಿರ್ಧರಿಸುವ ಸರ್ಕಾರದ ಕ್ರಮದಿಂದ ರಾಜ್ಯದಲ್ಲಿ ಹದಿನೈದು ಸಾವಿರಕ್ಕೂ ಅಧಿಕ ಕೆಲಸಗಾರರು ಕೆಲಸ ಕಳೆದುಕೊಂಡು ಬೀದಿಪಾಲಾಗಲಿದ್ದಾರೆ. ಇವರ ಭವಿಷ್ಯದ ಬಗ್ಗೆ ಆಳುವವರಿಗೆ ಕಿಂಚಿತ್ತು ಕಾಳಜಿಯಿಲ್ಲ. ಇಂತಹ ಸ್ಥಿತಿಯಲ್ಲಿ ಅವರು ಸಂಘಟಿತರಾಗುತ್ತಿದ್ದಾರೆ. ಈಅರಣ್ಯ ಶ್ರಮಜೀವಿಗಳ ಸ್ಥಿತಿ-ಗತಿ, ಹೋರಾಟದ ಮಹತ್ವದ ಬಗ್ಗೆ ಸಂಘದರಾಜ್ಯ ಅಧ್ಯಕ್ಷ ಸಿ.ರಘುನಾಥ್ ವಿಶ್ಲೇಷಿಸಿರುವ ಲೇಖನವಿಲ್ಲಿ.

ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಬಹುತೇಕ ನೌಕರರು ದಿನಗೂಲಿಯಾಗಿದ್ದಾರೆ. ನರ್ಸರಿಗಳಲ್ಲಿ ಕೆಲಸ ಮಾಡುವ ಮಹಿಳೆಯರು ಅಲ್ಲದೆ ಪಿ.ಸಿ.ಪಿ.ನ ಯೋಜನೆಯ ನೌಕರರು ಗಣನೀಯ. ಹೆಸರು ಏನೇ ಇದ್ದರೂ ಇವೆಲ್ಲರೂ ದಿನಗೂಲಿಗಳೇ. ಕೆಲವು ದಿನಗೂಲಿಗಳಿಗೆ ಸರ್ಕಾರಿ ಖಜಾನೆ (ಟ್ರೆಸರಿ) ಯಿಂದ ವೇತನ ನೀಡುವುದಾಗಿಯೂ ಅವರು ಖಾಯಂ ಎಂಬಂತೆ ಪಿಸಿಪಿ ಮುಖಾಂತರ ವೇತನವನ್ನು ಪಡೆಯುವರು, ಟೆಂಪರ್‌ವರಿ ಎಂಬಂತೆ, ಸಸಿ ಬೆಳೆಸುವ ನರ್ಸರಿಗಳಲ್ಲಿ ಕೆಲಸ ಮಾಡುವ ಮಹಿಳೆಯರು ಅರಣ್ಯ ಇಲಾಖೆಗೆ ಸಂಬಂಧವಿಲ್ಲವೆಂಬಂತೆ ಇರುತ್ತದೆ. ಅರಣ್ಯ ಇಲಾಖೆಯಲ್ಲಿ ಪ್ರಾದೇಶಿಕ, ಸಾಮಾಜಿಕ, ಸಂಶೋಧನೆ (ರೀಸರ್ಚ್) ಸೆಲ್ವಾ, ಸ್ಕ್ವಾಡ್, ವರ್ಕಿಂಗ್ ಪ್ಲ್ಯಾನ್, ಸರ್ವೆ ಮತ್ತು ವೈಲ್ಡ್ ಲೈಫ್ ವೆಸ್ಟ್ಸ್ ಎಂಬ ವಿಭಾಗಗಳಿವೆ. ಈ ಎಲ್ಲಾ ವಿಭಾಗಗಳಲ್ಲಿ ದಿನಗೂಲಿ ನೌಕರರು ಇದ್ದರೂ ಪ್ರಾದೇಶಿಕ ಮತ್ತು ಸಾಮಾಜಿಕ ವಿಭಾಗಗಳೇ ಸಮಪಾಲು. (ಶೇ.90) ಕರ್ನಾಟಕ ರಾಜ್ಯದಾದ್ಯಂತ ಸುಮಾರು 15 ಸಾವಿರ ದಿನಗೂಲಿ ನೌಕರರು ಈ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದು ಈ ನೌಕರರೇ ಅದರ ಬೆನ್ನೆಲುಬು, ಪ್ರತಿ ಹಳ್ಳಿಗೂ ಕನಿಷ್ಟ ಒಬ್ಬಿಬ್ಬರಾದರೂ ದಿನಗೂಲಿ ಆಧಾರದಲ್ಲಿ ಕೆಲಸ ಮಾಡುತ್ತಿರುತ್ತಾರೆ. ಖಾಯಂ ನೌಕರರ ಮತ್ತು ಅಧಿಕಾರಿಗಳ ಸಂಖ್ಯೆಗಿಂತ ಈ ನೌಕರರು ಹತ್ತಾರುಪಟ್ಟು ಹೆಚ್ಚು ಮತ್ತು ಕೆಲಸ ನಿರ್ವಹಿಸುವಲ್ಲಿ ಇವರೇ ಪ್ರಮುಖರು. ನೈಸರ್ಗಿಕ ಸಂಪತ್ತನ್ನು ಕಾಪಾಡುವಲ್ಲಿ ಪರಿಸರ ಸಂರಕ್ಷಿಸುವಲ್ಲಿ ಅರಣ್ಯ ಇಲಾಖೆ ಪಾತ್ರ ಅತೀ ಮಹತ್ವದ್ದಿದೆ. ಅರಣ್ಯ ಇಲಾಖೆಯಂತಹ ಮುಖ್ಯ ಇಲಾಖೆಯಲ್ಲಿ ಈ ನೌಕರರ ಗೋಳು ಹೇಳತೀರದು. 4-5 ತಿಂಗಳಿಗೊಮ್ಮೆ ವೇತನ ಕೆಲವೊಮ್ಮೆ ಮತ್ತು ನಿಗದಿಪಡಿಸಿದಕ್ಕಿಂತ ಬಹು ಕಡಿಮೆ. ದಬ್ಬಾಳಿಕೆ, ನೂರಾರು ಜನರನ್ನು ಕೆಲಸದಿಂದ ತೆಗೆದು ಹಾಕುವುದು ಇದೇ ಪ್ರಮುಖ ಸಮಸ್ಯೆಗಳು

ಪ್ರಮುಖ ಸಮಸ್ಯೆಗಳು

ಕರ್ನಾಟಕ ರಾಜ್ಯದಾದ್ಯಂತ ಇರುವ ನರ್ಸರಿಗಳಲ್ಲಿ ವರ್ಕ್‌ಲೋಡ್ ಕಡಿಮೆ ಮಾಡುತ್ತ ಮುಚ್ಚುತ್ತಾ ಹೋಗುವುದು. ಈ ನರ್ಸರಿಗಳಲ್ಲಿ ಬಹುತೇಕ ಮಹಿಳೆಯರೇ ಕೆಲಸ ನಿರ್ವಹಿಸುತ್ತಿದ್ದು ಇವರೆಲ್ಲರೂ ಗ್ರಾಮೀಣ ಮಹಿಳೆಯರಾಗಿದ್ದು ಇವರಿಗೆ ನೀಡುವ ವೇತನ ಅತ್ಯಲ್ಪ ರೂ.600 ರಿಂದ ಗರಿಷ್ಟ ಅಂದರೆ ರೂ 1200 ಮಾತ್ರ. ಆದರೆ ಕರ್ನಾಟಕ ಸರ್ಕಾರವು 5-6 ವರ್ಷಗಳ ಹಿಂದೆ ರೂ.1500 ವೇತನ ಕನಿಷ್ಟ ವೇತನವನ್ನಾಗಿ ನಿಗದಿಪಡಿಸಿತ್ತು. ಅರಣ್ಯ ಇಲಾಖೆಯು ಎಸ್.ಆರ್ ದರದಂತೆ ರೂ.1983-00 ಕೂಲಿ ಆಳುಗಳಿಗೆ ನೀಡಬೇಕೆಂದಿದ್ದರೂ ಈ ರೀತಿ ವೇತನ ತಾರತಮ್ಯ ನಡೆಯುತ್ತಿದೆ. ಬೀದರ್‌ದಿಂದ ಮೈಸೂರಿನವರೆಗೆ ಯಾವ ಅರಣ್ಯದಲ್ಲಿ ಹುಡುಕಿದರೂ ಈ ವೇತನ ನೀಡುತ್ತಿಲ್ಲ. ನೂರಾರು ಮಹಿಳೆಯರನ್ನು ನರ್ಸರಿಗಳಿಂದ ಕೆಲಸದಿಂದ ತೆಗೆದುಹಾಕುತ್ತಿದ್ದಾರೆ.

ಉದಾಹರಣೆಗೆ ಹೊಳಲ್ಕೆರೆ ನರ್ಸರಿಯಲ್ಲಿ ಕೆಲಸ ಮಾಡುವ ಮೂರು ಮಹಿಳೆಯರನ್ನು ಕೆಲಸದಿಂದ ನಿರಾಕರಿಸಲಾಗಿದೆ. ಇವರು ಕಳೆದ 16 ವರ್ಷಗಳಿಂದ ಕೆಲಸ ಮಾಡುತ್ತಿದ್ದು ಅವರನ್ನು ಖಾಯಂಗೊಳಿಸುವ ಬದಲಾಗಿ ಕೆಲಸದಿಂದ ತೆಗೆದು ಹಾಕುವುದು ಎಷ್ಟು ವಿಪರ್ಯಾಸ. ಎಂತಹ ಅನ್ಯಾಯ? ಬಳ್ಳಾರಿ ನರ್ಸರಿಯಲ್ಲಿ ಶಾಂತಮ್ಮ ಎನ್ನುವ ಮಹಿಳೆ ಕಳೆದ 10 ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಕೊಡುವ ವೇತನ ರೂ 800-00, ನಾಲ್ಕು ಮಕ್ಕಳು, ಗಂಡನು ಸಹ ತೀರಿಕೊಂಡಿರುತ್ತಾನೆ. ಇವರ ಜೀವನ ಇದರ ಮೇಲೆ ಅವಲಂಬಿಸಿದೆ. ಆ ಕೆಲಸದಿಂದಲೂ ಆಕೆಯನ್ನು ನಿರಾಕರಿಸಲಾಗಿದೆ. ಕುಟುಂಬ ಬೀದಿಪಾಲಾಗಿದೆ. ಇಂತಹ ಜ್ವಲಂತ ಘಟನೆಗಳು ರಾಜ್ಯದಾದ್ಯಂತ ನೂರಾರು. ಇನ್ನೊಂದು ಮುಖ್ಯ ಅಂಶವೆಂದರೆ ಈ ವರ್ಷ ನರ್ಸರಿ ಇಲ್ಲ ಎಂದರೆ ಮುಂದಿನ ವರ್ಷ ಪ್ಲಾಂಟೇಷನ್ ಇಲ್ಲ ಎಂದು ಅರ್ಥ. ಇದರಿಂದ ಸಹ ನೂರಾರು ನೌಕರರು ಕೆಲಸ ಕಳೆದುಕೊಳ್ಳುವ ಸ್ಥಿತಿ ಬಂದಿದೆ.

ವೇತನ ಬಹುಕಡಿಮೆ

ಅರಣ್ಯ ಇಲಾಖೆಯಲ್ಲಿ ಬಹುತೇಕ ನೌಕರರು ಗ್ರಾಮೀಣ ಪ್ರದೇಶದ ಜನ ಶೇ 98 ದಿನಗೂಲಿ ನೌಕರರು ಗ್ರಾಮೀಣದವರೇ ಆಗಿದ್ದಾರೆ.


ಬದುಕು ಸವೆಸಿ ಕಾಡು ಬೆಳೆಸಿದ ದಿನಗೂಲಿ ನೌಕರ

ಗ್ರಾಮೀಣಗಳಲ್ಲಿನ ಪರಿಸ್ಥಿತಿಯನ್ನೇ ದುರುಪಯೋಗ ಮಾಡಿ ಇಲ್ಲಿ ಕೊಟ್ಟಷ್ಟೇ ವೇತನ ಪಡೆದು ಕೆಲಸ ನಿರ್ವಹಿಸುತ್ತಿದ್ದಾರೆ. ಕೆಲಸವಿಲ್ಲದಿದ್ದರೆ ಅದೂ ಇಲ್ಲ ಎನ್ನುವ ಪರಿಸ್ಥಿತಿ ಅವರನ್ನು ಕಾಡುತ್ತಿದೆ. ಇವರಿಗೆ ಇಲಾಖೆ ನಿಗದಿಪಡಿಸಿದ್ದು ವೇತನ ನೀಡುವುದಿಲ್ಲ. ರೂ 1983 ನೀಡಬೇಕೆಂದು ಈ ತಿಂಗಳಿಂದ ರೂ 2300 ನೀಡಬೇಕೆಂದಿದ್ದರೂ ಅರಣ್ಯ ಇಲಾಖೆಯು ಸರ್ಕಾರ ನಿಗದಿಪಡಿಸಿದಂತೆ ಡಿ.ಎಸ್.ಆರ್ ದರಗಳಿದ್ದರೂ ನೀಡುವುದಿಲ್ಲ. ಉದಾಹರಣೆಗೆ ಜಗಳೂರಿನಲ್ಲಿ 140 ನೌಕರರಿದ್ದಾರೆ. ಇವರಿಗೆ ಇಲಾಖೆಯು ಬಳ್ಳಾರಿ ವೃತ್ತದ ಎಸ್.ಆರ್ ದರದಂತೆ ರೂ 1983 ನೀಡಬೇಕು, ಇವರಿಗೆ ಕೊಡುವುದು ರೂ 1200 ಮಾತ್ರ. ಉಳಿದಿದ್ದು ಅಧಿಕಾರಿಗಳ ಜೇಬಿಗೆ. ಕೂಡ್ಲಗಿಯಲ್ಲಿ ಕೊಡುವುದು ರೂ.900 ಮಾತ್ರ. ಉಳಿದ 1083 ರೂ ಅಧಿಕಾರಿಗಳ ಜೇಬಿಗೆ, ಗೌರಿಬಿದನೂರಿನಲ್ಲಿ ಕೊಡುವುದು ರೂ.1200, ಬಾಗಲಕೋಟೆಯಲ್ಲಿ 1500 ರೂ ಗುಲ್ಬರ್ಗಾದಲ್ಲಿ 1200 ರಿಂದ 1500 ಈ ರೀತಿ ಇರುತ್ತದೆ. ಸಂಘಟನೆ ಇದ್ದು ಹೋರಾಟ ಮಾಡಿದರೆ ಮಾತ್ರ ಒಟ್ಟು ಹಣ ಬರುತ್ತದೆ ಇಲ್ಲದಿದ್ದ ಕಡೆ ಇಷ್ಟೆ. ಈ ರೀತಿ ಬಡ ಗ್ರಾಮೀಣ ಪ್ರದೇಶದ ನೌಕರರಿಗೆ ಸಿಗುವುದು, ಲಕ್ಷಾಂತರ ರೂ ಹಣ ಅಧಿಕಾರಿಗಳ ಜೇಬಿಗೆ ಪ್ರತೀ ತಿಂಗಳು ಯತೇಚ್ಛವಾಗಿ ಹೋಗುತ್ತದೆ.

ಏಕೆ ಈ ಸಮಸ್ಯೆ

ಅರಣ್ಯ ಇಲಾಖೆಯಲ್ಲಿ ವೇತನ ತಾರತಮ್ಯ ಈ ರೀತಿ ಇರುವುದು ಮೇಲ್ನೋಟಕ್ಕೆ ಅರ್ಥವಾಗದ ಸಮಸ್ಯೆ. ಇದರ ಬುಡ ನೋಡಿದರೆ, ಆರ್.ಎಫ್.ಓ (ವಲಯ ಅರಣ್ಯ ಅಧಿಕಾರಿಗಳು) ಡಿ.ಸಿ.ಎಫ್ ಗೆ (ಉಪ ಅರಣ್ಯ ಸಂರಕ್ಷಣಾಧಿಕಾರಿಗಳು) ಒಂದು ಇಂಡೆಂಟ್ (ಹಣದ ಅಗತ್ಯದ ವಿವರ) ಕೊಡುತ್ತಾನೆ. ಮಧ್ಯಾಹ್ನದ ಒಳಗೆ ಆರ್.ಎಫ್.ಓ ಹೆಸರಿನಲ್ಲಿ ಚೆಕ್ ರೆಡಿಯಾಗುತ್ತೆ. ಇದು ಕನಿಷ್ಟ 20 ಲಕ್ಷದಿಂದ 30 ಲಕ್ಷದವರೆಗೆ ಇರುತ್ತದೆ. ಕೆಲವು ದೊಡ್ಡ ವಲಯಗಳಲ್ಲಿ ರೂ.50 ಲಕ್ಷವಾಗಿರುತ್ತದೆ. ನಂತರ ಒಂದು ತಿಂಗಳೊಳಗಾಗಿ ಲೆಕ್ಕ ಪತ್ರ ನೀಡಿದರೆ ಆಯಿತು. ಒಂದು ತಿಂಗಳ ನಂತರ ಎಫ್.ಎಂ.ಓ ಬುಕ್ಕಿನೊಂದಿಗೆ ಬಿಲ್ಲುಗಳನ್ನು ತೆಗೆದುಕೊಂಡು ಬಂದು ಹೊಸ ಫಂಡ್ ಇಂಡೆಂಟ್ ಕೊಟ್ಟರೆ ಆಯಿತು. ಮತ್ತಿಷ್ಟು ಹಣವನ್ನು ತೆಗೆದುಕೊಂಡು ಹೋಗಬಹುದು. ನಂತರ ಇದೇ ರೀತಿ 2-3 ತಿಂಗಳು ಮಾಡಬಹುದು. ನಂತರ ಕೇಳಿದವರಿಗೆ ತಮ್ಮ ಮನಸ್ಸಿಗೆ ಬಂದಷ್ಟು ಕೊಡುತ್ತಾ ಹೋಗುವುದು. ಯಾರಾದರೂ ತೀವ್ರವಾಗಿ ಒತ್ತಾಯಿಸಿದರೆ ನಾಳೆಯಿಂದ ಈ ಕೆಲಸಕ್ಕೆ ಬರಬೇಡ ಎಂದು ಹೇಳಿಬಿಡುತ್ತಾರೆ. ಹೆಚ್ಚಿಗೆ ಮಾತನಾಡಿದರೆ ಎರಡು ಒದೆ ಹಾಕಿದರೆ ಆಯಿತು ಎಂಬ ಪ್ರವೃತ್ತಿ. ಲೆಕ್ಕ ಕೊಡದೇ ವೇತನ ನೀಡದೆ ಇರುವ ಈ ವಿಧಾನವೇ ಸರಿಯಿಲ್ಲ, ಇದರ ವಿರುದ್ದ ಸಂಘಟನೆ


ಮರವಾಗುವ ಮೊದಲು ಸಸಿ-ನರ್ಸರಿಯಲ್ಲಿ.... ಇದೇ ಇಲ್ಲವೆಂದರೆ ಕಾಡೆಲ್ಲಿ? ನಾಡೆಲ್ಲಿ.

ಸಂಘಟನೆ - ಹೋರಾಟವೊಂದೇ ದಾರಿ

ಅರಣ್ಯ ಇಲಾಖೆ ದಿನಗೂಲಿ ನೌಕರರು ಸಹ ಇತರೆ ಸರಕಾರಿ ದಿನಗೂಲಿ ನೌಕರರಂತೆ ಪ್ರೊ.ಶರ್ಮಾಜಿ ಯೂನಿಯನ್‌ನಲ್ಲಿ ಪಣಕಟ್ಟಿ ಹೋರಾಟ ಮಾಡಿದವರು. ಆದರೆ ಈ ಇಲಾಖೆಯ ದಿನಗೂಲಿ ನೌಕರರ ಬೇಡಿಕೆಗಳು ಇದುವರೆಗೂ ಈಡೇರಲಿಲ್ಲ. ಈ ಸಂಘದಿಂದ ಅರಣ್ಯ ಇಲಾಖಾ ನೌಕರರಿಗೆ ಯಾವುದೇ ಪ್ರಯೋಜನವಾಗಲಿಲ್ಲ ದಬ್ಬಾಳಿಕೆ ನಿಲ್ಲಲಿಲ್ಲ. ಅವರ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆ ಇಲ್ಲ. ಏಕೆಂದರೆ ಅರಣ್ಯ ಇಲಾಖೆಯ ಮೇಲೆ ಹೋರಾಟ ನಡೆದಿದ್ದು ವಿರಳ. ಇದನ್ನು ಪ್ರಾರಂಭದಲ್ಲೇ ಅರಿತ ಬಳ್ಳಾರಿ ಜಿಲ್ಲಾ ಅರಣ್ಯ ಇಲಾಖೆ ದಿನಗೂಲಿ ನೌಕರರು ಇವರು ಪ್ರತ್ಯೇಕ ಸಂಘಟನೆಯನ್ನು ಜಿಲ್ಲಾ ಮಟ್ಟದಲ್ಲಿ ರಚಿಸಿಕೊಂಡು ಕಳೆದ 12-13 ವರ್ಷಗಳಿಂದ ಹೋರಾಟ ನಡೆಸುತ್ತಿದ್ದಾರೆ. ಸಾಕಷ್ಟು ಬೇಡಿಕೆಗಳನ್ನು ಪಡೆದಿದ್ದಾರೆ. ದಬ್ಬಾಳಿಕೆಯನ್ನು ನಿಲ್ಲಿಸಲು ಅಲ್ಪಸ್ವಲ್ಪ ಸಾಧ್ಯವಾಗಿದೆ. ಸುಮಾರು 300 ನೌಕರರನ್ನು ಒಂದೇ ಜಿಲ್ಲೆಯಲ್ಲಿ ಖಾಯಂಗೊಳಿಸಲು ಸಾಧ್ಯವಾಗಿದೆ. ಬಳ್ಳಾರಿ ಜಿಲ್ಲೆಯಲ್ಲೇ ಅಷ್ಟೋ ಇಷ್ಟೋ ಸಾಧಿಸಲು ಸಾಧ್ಯವಾಗಿದೆ. ಈಗ ರಾಜ್ಯ ಮಟ್ಟದ ಪರಿಸ್ಥಿತಿ ನೋಡುವಾಗ ಪ್ರತ್ಯೇಕ ಸಂಘಟನೆ ಮಾಡಿಕೊಂಡು ಹೋರಾಟ ಮಾಡಿದ ಕಡೆ ಪರಿಸ್ಥಿತಿ ಸ್ವಲ್ಪ ಉತ್ತಮವಾಗಿದೆ.

ಇತ್ತೀಚೆಗೆ ಬರುವ ಕಾನೂನುಗಳು ಕಾರ್ಮಿಕರಿಗೆ ವಿರೋಧವಾಗಿದ್ದು ರಾಜ್ಯಮಟ್ಟದಲ್ಲಿ ಸಂಘಟನೆಯಿಲ್ಲದೆ, ಹೋರಾಟಗಳಿಲ್ಲದೆ ಬೇಡಿಕೆಗಳನ್ನು ಪಡೆಯಲು ಸಾಧ್ಯವೇ ಇಲ್ಲ. ಸಂಘಟನೆಯ ಬೆಂಬಲದಿಂದ ಬೇಡಿಕೆಗಳನ್ನು ಪಡೆಯಬಹುದೆಂಬ ಅನುಭವವಿರುವ ಬಳ್ಳಾರಿ ನೌಕರರು ರಾಜ್ಯಮಟ್ಟದ ಸಂಘಟನೆ ಕಟ್ಟಲು ಮುಂದಾದರು.

ಡಿಸೆಂಬರ್ 22 ರಂದು ರಾಜ್ಯಮಟ್ಟದ ಸಭೆ ನಡೆಸಲು ಬಳ್ಳಾರಿ ನೌಕರರು ತೀರ್ಮಾನಿಸಿ ಸುಮಾರು 40 ಕಾರ್ಯಕರ್ತರನ್ನು ಬಳ್ಳಾರಿ ಜಿಲ್ಲೆಯಾದ್ಯಂತ ಸೇರಿ ರಾಜ್ಯ ಮಟ್ಟದ ಪ್ರವಾಸ ಮಾಡಿದರು. ಡಿಸೆಂಬರ್ 22 ರಂದು ಬಳ್ಳಾರಿಯಲ್ಲಿ ಸುಮಾರು 650 ಪ್ರತಿನಿಧಿಗಳು 14 ಜಿಲ್ಲೆಗಳಿಂದ ಹಾಜರಾಗಿ ಚರ್ಚೆ ನಡೆಸಿ ರಾಜ್ಯ ಮಟ್ಟದ ಸಂಘಟನೆ ಅಗತ್ಯತೆ ಇತ್ಯಾದಿ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ 15 ಬೇಡಿಕೆಗಳನ್ನು ರೂಪಿಸಲಾಯಿತು, 4 ತೀರ್ಮಾನಗಳನ್ನು ಕೈಗೊಳ್ಳಲಾಯಿತು, ಇಲ್ಲಿಯವರೆಗೆ ಬಳ್ಳಾರಿ ಜಿಲ್ಲೆಯ ಅಧ್ಯಕ್ಷರಾಗಿದ್ದ ಶ್ರೀ.ಸಿ.ರಘುನಾಥರವರನ್ನು ರಾಜ್ಯದ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಸಿಐಟಿಯು ಸಂಪೂರ್ಣ ಸಹಕಾರ ನೀಡಿತು. ಸಿಐಟಿಯು ರಾಜ್ಯದ ಕಾರ್ಯದರ್ಶಿಯಾದ ಎಸ್. ಪ್ರಸನ್ನಕುಮಾರ್‌ರವರು ಹಾಜರಿದ್ದು ಮಾರ್ಗದರ್ಶನ, ಬೆಂಬಲ ನೀಡಿದರು.

ಹೋರಾಡಬೇಕಾಗಿದೆ. ಸರಕಾರದಿಂದ ಇತರ ಇಲಾಖೆಗಳಲ್ಲಿ ಈ ಪರಿಸ್ಥಿತಿ ಇಲ್ಲ. ಕೆಲಸ ತೆಗೆದುಕೊಳ್ಳುವವರು ಅಟೆಂಡೆನ್ಸ್ ನೀಡಿದರೆ ಆಯಿತು, ಕಛೇರಿ ಮುಖ್ಯಸ್ಥರು ವೇತನವನ್ನು ವಿತರಿಸುವ ವಿಧಾನ ಇಲ್ಲ. ಎಲ್ಲವೂ ಅವನ, ವರ್ಕ್ಸ್‌ನಿಂದ ಹಿಡಿದು ಎಲ್ಲವುಗಳ ಪೇಮೆಂಟ್ ಇವನೇ ಮಾಡುವುದು, ಆದ್ದರಿಂದ ಫಾರೆಸ್ಟ್ ಅಕೌಂಟ್ಸ್ ಕೋಡ್, ಇತರ ಇಲಾಖೆಗಳಲ್ಲಿರುವಂತೆ ಕೋಡ್‌ಗೆ ಬದಲಾದರೆ ಇದು ಸಾಧ್ಯ.

ಯಾವ ವಿಧಾನ.?

ವರ್ಷಗಳ ಹಿಂದೆ ಭಾದಾಮಿಯಲ್ಲಿ ಗಬ್ಬರ್‌ಸಾಬ್ ಮುಲ್ಲಾ ಎನ್ನುವ ದಿನಗೂಲಿ ನೌಕರನ 10 ತಿಂಗಳ ವೇತನವನ್ನು ಶ್ರೀ ಚಲುವಾದಿ ಎಂಬ ಆರ್.ಎಫ್.ಓ ಕೊಡಲಿಲ್ಲ, ಕೊನೆಗೆ ಎಲ್ಲಿ ಕಂಡರೆ ಅಲ್ಲಿ ಕೇಳತೊಡಗಿದ ಮುಲ್ಲಾ. ನಂತರ ಕೆಲಸಕ್ಕೆ ಬರಬೇಡ ಎಂದ ಅಧಿಕಾರಿ. ಕೆಲಸ ಇಲ್ಲದಿದ್ದರೂ ಆಯಿತು. ವೇತನವನ್ನಾದರೂ ಕೊಡಿ ಎಂದು ಮನೆಗೆ ಹೋದರೆ ಕಛೇರಿಗಾಗಲೀ, ಮನೆಗಾಗಲಿ ಬಂದರೆ ಸರಿಯಿಲ್ಲ ಅಂತ ಅಂದ. ಸಂಬಳವೂ ಇಲ್ಲದೆ ಕೆಲಸವೂ ಇಲ್ಲದೆ ಕುಟುಂಬ ಉಪವಾಸದಲ್ಲಿ ಬಿದ್ದು ನರಳುವುದನ್ನು ನೋಡದೇ ತೀವ್ರ ಸಂಕಷ್ಟದಲ್ಲಿರುವ ಮುಲ್ಲಾ ಏನು ಮಾಡೋದು ಅಂತಾ ಯೊಚನೆ ಮಾಡುವಷ್ಟರಲ್ಲಿ ಆರ್.ಎಫ್.ಓ ವರ್ಗಾವಣೆಯಾಗಿಬಿಟ್ಟ. ಇನ್ನೇನು ಸಾಮಾನು ಕಟ್ಟಿಕೊಂಡು ಲಾರಿಗಾಗಿ ಕಾಯುತ್ತಿರುವಾಗ ಅಂದೇ ದಸರಾ. 'ಬನ್ನಿ' ನೀಡುವ ನೆಪದಲ್ಲಿ ಆರ್.ಎಫ್.ಓ. ಮನೆಗೆ ಹೋಗಿ 'ಬನ್ನಿ' ಕೊಡಲು ಬಂದಿದ್ದೇನೆ ಎಂದು ಹೇಳಿದನಂತೆ ಮುಲ್ಲಾ. ಬನ್ನಿ ಕೊಟ್ಟು ಚಾಕುವಿನಿಂದ ತಿವಿದು ಹಲ್ಲೆ ಸಾಯಿಸಿಬಿಟ್ಟನಂತೆ. ಈಗ ಆತನಿಗೆ 20 ವರ್ಷಗಳ ಕಾಲ ಸಜೆಯಾಗಿ ಬಿಜಾಪುರ ಜೈಲಿನಲ್ಲಿ ಅಪರಾಧಿಯಾಗಿ ಬದುಕು ಸಾಗಿಸುತ್ತಿದ್ದಾನೆ. ಇನ್ನೂ 15 ದಿನಗಳು ಕೆಲಸ ಮಾಡಿದ್ದರೆ ಅವನ ಹೆಸರನ್ನು ಪಟ್ಟಿಯಲ್ಲಿ ಸೇರಿಸಿದ್ದರೆ ಅವನು ಖಾಯಂಗೊಳ್ಳುತ್ತಿದ್ದ. ಆದರೆ ಜೈಲಿಗೆ ಹೋಗುವಾಗ ನಾನು ಜೈಲಿಗೆ ಹೋದರೂ ಪರವಾಗಿಲ್ಲ ಇರುವವರಿಗಾದರೂ ವೇತನ ಸರಿಯಾಗಿ ಸಿಗಲಿ" ಎಂದು ಹೇಳಿದ. ಆದರೆ, ಮೊನ್ನೆ ಸಭೆ ನಡೆದಾಗ ಅದೇ ಭಾದಾಮಿಯಲ್ಲಿ ಮತ್ತೆ 5 ನೌಕರರಿಗೆ ಕಳೆದ 10 ತಿಂಗಳುಗಳಿಂದ ವೇತನ ನೀಡಿಲ್ಲ ಮತ್ತೆ 20 ನೌಕರರನ್ನು ಕೆಲಸದಿಂದ ತೆಗೆದುಹಾಕಿದ್ದಾನೆ ಎಂದು ನೌಕರರು ಹೇಳಿದರು. ಒಬ್ಬ ಹೋದರೆ ಮತ್ತೊಬ್ಬ. ಆರ್.ಎಫ್.ಓ ಬಂದರೂ ಪರಿಸ್ಥಿತಿ ಬದಲಾಗಲಿಲ್ಲ. ಈ ನೌಕರರು ಗಬ್ಬರ್‌ಸಾಬ ಮುಲ್ಲಾನನ್ನು ಜ್ಞಾಪಕ ಮಾಡಿಕೊಂಡರೆ ಆಶ್ಚರ್ಯವಿಲ್ಲ. ಆದರೆ ಸಮಸ್ಯೆ ಇತ್ಯರ್ಥ ಈ ವಿಧಾನದಿಂದಲ್ಲ. ಬದಲಾಗಿ ಸಂಘಟನೆಯನ್ನು ಕಟ್ಟಿ ಹೋರಾಟ, ನಡೆಸಬೇಕು, ಸರಕಾರದ ನೀತಿ ತಪ್ಪು ವಿಮಾನಗಳ ಧೋರಣೆಗಳ ವಿರುದ್ಧ ಹೋರಾಟ ಮಾಡಿದರೆ ಬೇಡಿಕೆ ಸಾಧಿಸಲು ಸಾಧ್ಯವಿತ್ತು. ಈಗ ಬಾಗಲಕೋಟೆ ಜಿಲ್ಲಾ ಸರ್ವಸದಸ್ಯರ ಸಭೆಯಲ್ಲಿ ಒಮ್ಮತದಿಂದ ತೀರ್ಮಾನ ಮಾಡಿ ಗಬ್ಬರ್ ಸಾಬ್ ಮುಲ್ಲಾ ಇವರಿಗೆ ಸಮಾದಾನ ನೀಡಿ ಬಿಡುಗಡೆ ಮಾಡಬೇಕೆಂದು ರಾಜ್ಯಪಾಲರಿಗೆ ಮನವಿ ಸಲ್ಲಿಸಲು ಮತ್ತು ಆತನನ್ನು ಅರಣ್ಯ ಇಲಾಖೆಯಲ್ಲಿ ಪುನರ್ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಿಸಲು ನಿರ್ಧರಿಸಲಾಗಿದೆ. ಆ ಮೂಲಕ ಪುನಃ ಪರಿವರ್ತನೆಗೆ ಅವಕಾಶ ನೀಡಬೇಕೆಂದು ರಾಜ್ಯಪಾಲರಿಗೆ ಮನವಿ ಮಾಡಲಾಗಿದೆ. ವೇತನ ನೀಡಿಕೆಯಂತಹ ಬೇಡಿಕೆಯನ್ನು ಹೋರಾಟ ಮಾಡಿ ಸಾಧಿಸಬೇಕು, ಹೀಗೆ ಜೈಲಿಗೆ ಹೋಗುವುದರಿಂದ ಸಾಧಿಸಲು ಸಾಧ್ಯವಿಲ್ಲ ಈ ಸಮಸ್ಯೆ ಬಗೆಹರಿಸಲು ಚೆಕ್ಕು ಅಥವಾ ಬ್ಯಾಂಕ್ ಮುಖಾಂತರ ವೇತನ ನೀಡಬೇಕೆಂದು ಬೇಡಿಕೆ ಇಟ್ಟು ಸಾಧಿಸಿದರೆ ಈ ಸಮಸ್ಯೆಗಳು ತನ್ನಷ್ಟಕ್ಕೆ ತಾನೇ ಬಗೆಹರಿಯುತ್ತವೆ ಎಂದು ಸಂಘದ ಬೇಡಿಕೆ.

ಈ ಬೇಡಿಕೆಯ ಹಿಂದೆ ಮತ್ತೊಂದು ಪ್ರಮುಖ ಅಂಶವೆಂದರೆ ಒಬ್ಬರಿಗೆ ವೇತನ ಕೊಡುವುದು ಇನ್ನೊಬ್ಬನ ಸಹಿ ತೆಗೆದುಕೊಳ್ಳುವುದು ಹೋಗಬೇಕಾಗಿದೆ. ಹೊಸಪೇಟೆಯಲ್ಲಿ ಹೀಗೆ ಆಯಿತು. ಖಾಸಿಂಸಾಬ್ ಎನ್ನುವ ನೌಕರ ದಿನಗೂಲಿ ನೌಕರನಾಗಿ ಕೆಲಸ ಮಾಡುತ್ತಿದ್ದ ದಿನಗೂಲಿ ನೌಕರರ ಸಂಘಟನೆಯ ಹೋರಾಟದ ಫಲವಾಗಿ ಅವನನ್ನು ಖಾಯಂಗೊಳಿಸಲು ಸಾಧ್ಯವಾಯಿತು. ಆದರೆ ಇವನು ಇನ್ನೇನು ಖಾಯಂಗೊಂಡಿದ್ದೇನೆಂದು ಕಛೇರಿಗೆ ಹೋಗುವಷ್ಟರಲ್ಲೇ ಇನ್ನೊಬ್ಬ ಖಾಸಿಂ ತಯಾರಾಗಿಬಿಟ್ಟಿದ್ದ. ಅವನ ಸಹಿಯು ಕಛೇರಿ ಸಹಿಗೆ ಟ್ಯಾಲಿ ಆಗುತ್ತದೆ. ಆದರೆ ದಿನಗೂಲಿ ಖಾಸಿಂನನ್ನು ಕೆಲಸದಿಂದ ತೆಗೆದು ಹಾಕಲಾಗಿತ್ತು. ಇನ್ನೊಬ್ಬ ಖಾಸಿಂನನ್ನು ಖಾಯಂಗೊಳಿಸಲಾಯಿತು. ಸಂಘವು 3 ವರ್ಷಗಳ ನಿಷ್ಕ್ರಿಯಗೊಂಡಾಗ ಆತ ಪ್ರೋ.ಶರ್ಮಾಜಿ ಸುತ್ತ ನೂರಾರು ಸುತ್ತಿದರೂ ಏನೂ ಸಾಧಿಸಲಾಗಲಿಲ್ಲ. ಆದರೆ ಕರ್ನಾಟಕ ರಾಜ್ಯ ಅರಣ್ಯ ಇಲಾಖೆ ದಿನಗೂಲಿ ನೌಕರರ ಸಂಘ(ರಿ) ಬಳ್ಳಾರಿ ಸಂಘಟನೆಯಿಂದಲೇ ಒಂದೇ ಹೋರಾಟದಲ್ಲಿ ಅವನನ್ನು ದಿನಗೂಲಿಯಲ್ಲಾದರೂ ಮುಂದುವರೆಸಲು ಸಾಧ್ಯವಾಯಿತು. ಇನ್ನೊಬ್ಬನ ಆದೇಶ ಕ್ಯಾನ್ಸಲ್ ಮಾಡಲು ಸಾಧ್ಯವಾಯಿತು. ಹೀಗೆ ವಿಚಾರಣೆಗೆ ಆದೇಶಿಸಿ ನ್ಯಾಯವಾಗಿ ಯಾರು ಕೆಲಸ ಮಾಡಿದ್ದಾರೆಂದು ಅವರನ್ನು ಖಾಯಂಗೊಳಿಸಲು ಪ್ರಯತ್ನಗಳು ನಡೆಯುತ್ತಿವೆ. ಇಂತಹ ಉದಾಹರಣೆಗಳು ಅನೇಕ.

ಪ್ರತಿ ಮಾರ್ಚ್ ಗಂಡಾಂತರ ಮಾಸ:-

ಅರಣ್ಯ ಇಲಾಖಾ ದಿನಗೂಲಿ ನೌಕರರು ಮಾರ್ಚ್ ಎಂದರೆ ಭಯ ಭಯ. ಏಕೆಂದರೆ ಕೆಲಸಕ್ಕೆ ಬರಬಾರದು ಎನ್ನುವುದು ಈ ತಿಂಗಳಲ್ಲೇ, ಏಕೆ ಅಂದರೆ, ಇಲಾಖೆ ಮತ್ತು ಸರಕಾರದ ನೀತಿಯಿಂದ ಪ್ರತಿ ಸಸಿ ನೆಟ್ಟನಂತರ ಮೂರು ವರ್ಷ ಮಾತ್ರ ನೋಡಿಕೊಂಡರೆ ಆಯಿತು ಅಂತ ಕಾನೂನು, ಹುಣಸೇ ತೋಪಿಗೆ ಹೆಕ್ಟೇರಿಗೆ ಒಬ್ಬ ಇದ್ದರೆ ಆಯಿತು. 3 ವರ್ಷಗಳ ನಂತರ ಯಾರೂ ಇಲ್ಲ, ಅವರಿಗೆ ಕೆಲಸ ಇಲ್ಲ. ಯಾರಾದರೂ ಗಿಡ ಕಡಿದುಕೊಂಡು ಹೋದರೆ ಕೇಳುವವರಿಲ್ಲ, ಉದಾಹರಣೆಗೆ ಗುಡೆ ಕೋಟೆ ಎನ್ನುವ ಊರಿನ ಪಕ್ಕದಲ್ಲಿ ಸೀಜೆ ಹಳ್ಳಿ ಎನ್ನುವುದು ಕುಗ್ರಾಮ, ಇಲ್ಲಿ ಜೆಬಿಐಸಿ (ಜಪಾನ್ ಬ್ಯಾಂಕ್ ಫಾರ್ ಇಂಟರ್ ನ್ಯಾಷನಲ್ ಕೋ ಆಪರೇಷನ್) ಸಹಕಾರದಿಂದ ನೂರಾರು ಹೆಕ್ಟೇರಿನಲ್ಲಿ ಎಬಿಸಿ ಎಂದು ಹುಣಸೇ ತೋಪು ಬಂದಿದೆ, ರಾಜ್ಯದಲ್ಲೇ ಉತ್ತಮವಾಗಿದೆ. ಜಪಾನ್‌ನಿಂದ ಒಂದು ಟೀಮ್ 60 ಕಾರುಗಳಲ್ಲಿ ಬಂದು ಅವಾರ್ಡ್ ನೀಡಿ ಹೋಗಿದ್ದಾರೆ. ಈ ಮಾರ್ಚ್‌ಗೆ ಈ ಸ್ಕೀಂ ಆಗಿ 5 ವರ್ಷಗಳಾಯಿತು. ಇನ್ನೂ ಮುಂದೆ ಅಲ್ಲಿ 60 ನೌಕರರಿಗೆ ಕೆಲಸವಿಲ್ಲ. ಅವರೆಲ್ಲರೂ ಒಂದೇ ಊರಿನವರು, ಎಲ್ಲರೂ ಅಣ್ಣತಮ್ಮಂದಿರಿಗಿಂತ ಹೆಚ್ಚಾಗಿ ಇದ್ದಾರೆ. ಈ ಸೀಜೆ ಹಳ್ಳಿ ಗ್ರಾಮದ ಆರ್ಥಿಕ ಪರಿಸ್ಥಿತಿ ಈ ನೌಕರರ ಮೇಲೆ ಆಧಾರವಾಗಿದೆ. ಈ ಊರಿನ ಪ್ರತೀ ಮನೆಯಲ್ಲೂ ಸ್ತ್ರೀಯರಿಂದ ಹಿಡಿದು ಮಕ್ಕಳವರೆಗೆ ಮಾರ್ಚ್ ಬಂತು ಎಂದರೆ ಚಿಂತೆ, ನಂತರ ಏನು ಎನ್ನುವುದು ಗಂಭೀರದ ವಿಷಯ. ಹೀಗಾದರೆ ಹಳ್ಳಿಯೇ ನಿರ್ನಾಮವಾಗುತ್ತದೆ. ಅದಕ್ಕಾಗಿ ನಮ್ಮ ಸಂಘಟನೆಯು ಒಂದು ಸ್ಕೀಂ ಮುಗಿದರೆ ಮತ್ತೊಂದು ಸ್ಕೀಂ ಪ್ರಾರಂಭಿಸಿ ಆ ನೌಕರರಿಗೆ ಕೆಲಸದಲ್ಲಿ ಮುಂದುವರೆಸಿ ಉತ್ತಮ ನಡುತೋಪುಗಳು ಬರಲಿ ಪರಿಸರ ಉಳಿಯಲಿ ಎನ್ನುವುದು. ಇಲ್ಲಿಯವರೆಗೆ ಮಕ್ಕಳಂತೆ ನೋಡಿಕೊಂಡ ಈ ಗಿಡಗಳ ಪರಿಸ್ಥಿತಿ ಮಾರ್ಚ್ ನಂತರ ಕಡಿದುಕೊಂಡು ಹೋದರೆ ಕೇಳುವವರಿಲ್ಲ. ಆದ್ದರಿಂದ ಈ ನೀತಿಯಲ್ಲಿ ಬದಲಾಗಬೇಕು. ಮೊದಲು 25 ಹೆಕ್ಟೇರಿಗೆ ಒಬ್ಬನಿದ್ದರೆ 5 ವರ್ಷಗಳ ನಂತರ ಕನಿಷ್ಟ ನೂರು ಹೆಕ್ಟೇರಿಗೊಬ್ಬನು, ಉಳಿದ ಮೂವರನ್ನು ಹೊಸ ಸ್ಕೀಂ ಪ್ರಾರಂಭಿಸಿ ಹೊಸ ನಡುತೋಪುಗಳ ಬಂದು ಪರಿಸರ ಸಮತೋಲನವಾಗಲಿ ಎಂದು ಸಂಘದ ಬೇಡಿಕೆ. ಗಿಡಗಳನ್ನು ಕಡಿದುಕೊಂಡು ಹೋಗಲು ಏಕೆ ನಡುತೋಪುಗಳು ಮಾಡಬೇಕು, ಏಕೆ ಬೆಳೆಸಬೇಕು ಆ ಮೂಲಕ ಗ್ರಾಮೀಣ ಬಡ ಕಾರ್ಮಿಕರ ಜೀವನ ನಡೆಸಲು ಸರಕಾರ ಅವಕಾಶ ಮಾಡಿಕೊಡಬೇಕೆನ್ನುವುದು ಅಷ್ಟೇ ನಮ್ಮ ಸಂಘದ ಬೇಡಿಕೆ ಮತ್ತು ಹೋರಾಟ. ಇಂತಹ ಎಲ್ಲಾ ವಿಷಯಗಳ ಮೇಲೆ ಈಗ ರಾಜ್ಯಮಟ್ಟದ ಸಂಘಟನೆಯಾಗಿದ್ದು, ಈಗಾಗಲೇ 16 ಜಿಲ್ಲೆಗಳಲ್ಲಿ ವಿಸ್ತರಿಸಲಾಗಿದೆ. 8 ಜಿಲ್ಲೆಗಳಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಸಮಿತಿಗಳು ರಚನೆಯಾಗಿದ್ದು, ಈ 30ರ ಹೋರಾಟಕ್ಕೆ ಮತ್ತು 3-4 ಜಿಲ್ಲೆಗಳಿಂದ ನೌಕರರು ಬರುವವರಿದ್ದಾರೆ. ಅನೇಕರು ಸಂಘಟನೆಯೊಂದಿಗೆ ಸಂಪರ್ಕದಲ್ಲಿದ್ದಾರೆ. ಆ ಜಿಲ್ಲೆಗಳಲ್ಲೂ ಸಹ ಜನವರಿ 30ರ ನಂತರ, ಜಿಲ್ಲಾ ಸಮಿತಿಗಳು, ತಾಲ್ಲೂಕು ಸಮಿತಿಗಳು ರಚನೆಯಾಗಲು ಸಭೆಗಳು ನಡೆಯುವ ಸಾಧ್ಯತೆಗಳು ಇವೆ.

ಈ ಎಲ್ಲಾ ನೌಕರರು 30 ರಂದು ಅರಣ್ಯಭವನ ಚಲೋ ಕಾರ್ಯಕ್ರಮಕ್ಕೆ ಬರಲು ಸನ್ನದ್ದರಾಗಿದ್ದಾರೆ. 30 ರ ಕಾರ್ಯಕ್ರಮ ಅರಣ್ಯ ಇಲಾಖಾ ನೌಕರರ ಒಂದು ಮೈಲಿಗಲ್ಲಾಗಲಿ, ಇಷ್ಟೇ ಅಲ್ಲದೆ ಮಮುಂದೆ ಇಂತಹ ಕಾರ್ಯಕ್ರಮಗಳು, ಹೋರಾಟಗಳು ಸಾಕಷ್ಟು ನಡೆಯಲಿದ್ದು, ರಾಜ್ಯದ ಸಿಐಟಿಯು ಮತ್ತು ಸಿಪಿಐ(ಎಂ) ಪಕ್ಷಗಳು ಉತ್ತಮವಾಗಿ ಸಹಕರಿಸಿ ಮತ್ತು ಹೋರಾಟಗಳಿಗೆ ಬೆನ್ನೆಲುಬಾಗಿ ನಿಂತು ಬೆಂಬಲಿಸುತ್ತಿವೆ. ಈ ನೌಕರರ ಬೇಡಿಕೆಗಳು, ಸಮಸ್ಯೆಗಳು ಈಡೇರುವಲ್ಲಿ ಯಾವುದೇ ಅನುಮಾನವಿಲ್ಲ ಎಂಬುದು ನೌಕರರ ಅಭಿಪ್ರಾಯ.



ಸಸಿ ಬೆಳೆಸುವ ನರ್ಸರಿಯಲ್ಲಿ ಮಹಿಳೆಯರೂ ಮಕ್ಕಳೂ....

ಇದು ಜಪಾನಿ ಪ್ರಾಜೆಕ್ಟ್

ಇಂದು ಅರಣ್ಯ ಅಭಿವೃದ್ಧಿ-ಸಂರಕ್ಷಣೆಯು ಬಹುತೇಕ ವಿದೇಶದಿಂದ ಬರುವ ಹಣದ ಮೇಲೆಯೇ ಹೊಂದಿಕೊಂಡುಬಿಟ್ಟಿದೆ. ಮುಖ್ಯವಾಗಿ ಕರ್ನಾಟಕದಲ್ಲಿ ಅರಣ್ಯ ಅಭಿವೃದ್ಧಿಗೆಂದು ಜಪಾನಿನ 'ಜಪಾನ್ ಬ್ಯಾಂಕ್ ಫಾರ್ ಇಂಟರ್‌ನ್ಯಾಷನಲ್ ಕೋಪರೇಷನ್' ಸಂಸ್ಥೆಯು ಸರಿಸುಮಾರು ವರ್ಷವೊಂದಕ್ಕೆ 800 ಕೋಟಿ ರೂಪಾಯಿಯನ್ನು ನೀಡುತ್ತದೆ. ಈ ಹಣವನ್ನು ನೀಡುವಾಗಲೇ ಅದರದ್ದೊಂದು ಶರತ್ತಿದೆ. ಜಪಾನಿನಲ್ಲಿ ಅರಣ್ಯ ಬೆಳೆಸಲು ಅಗತ್ಯವಾದ ಭೂಮಿ, ಪರಿಸರ ಇಲ್ಲದಿರುವುದರಿಂದ ನಮ್ಮ ಭಾರತದಲ್ಲಿ ಕಾಡು ಬೆಳೆಸಿ, ಅದರ ಕಟ್ಟಿಗೆಯನ್ನು ಅವರಿಗೆ ಕೊಡಬೇಕು. ಅವರು ನೀಡುವ ಹಣಕ್ಕೆ ಅತೀ ಕಡಿಮೆ ಬಡ್ಡಿ ನೀಡುವ, ಕೆಲವೊಂದು ಮೊತ್ತಕ್ಕೆ ಬಡ್ಡಿಯೇ ಇಲ್ಲದ ಸಂದರ್ಭಗಳೂ ಇವೆ. ಮುಖ್ಯವಾಗಿ ಹುಣಸೆ, ಬೇವು ಮುಂತಾಗಿ ಬೆಳೆಸಲಾಗುತ್ತದೆ.

ಆದರೀಗ ಜಪಾನ್‌ನ ಈ ಸಂಸ್ಥೆ ಈ ವರುಷದಿಂದ ತನ್ನ ನೆರವನ್ನು ನಿಲ್ಲಿಸಲಿದೆ. ಈ ಯೋಜನೆಗೆ ಹೊಂದಿಕೊಂಡ ಗಿಡದ ಸಸಿ ಬೆಳೆಸುವ ನರ್ಸರಿ, ಅದರ ಪೋಷಣೆ ಸಂರಕ್ಷಣೆ, ಮುಂತಾದ ಕೆಲಸಗಳಲ್ಲಿರುವ ದಿನಗೂಲಿ ನೌಕರರು ಕೆಲಸ ಕಳೆದುಕೊಳ್ಳುತ್ತಾರೆ, ಬೀದಿಪಾಲಾಗುತ್ತಾರೆ.

ಈ ಕೆಲಸವನ್ನು 'ಗ್ರಾಮೀಣ ಅರಣ್ಯ ಸಮಿತಿ'ಗಳನ್ನು ರಚಿಸಿ ಅದಕ್ಕೆ ಒಪ್ಪಿಸಿಬಿಡಿ ಎನ್ನುತ್ತಿದೆ ವಿಶ್ವಬ್ಯಾಂಕ್ ಬಳಗ. ಊರಿನ ಯಾರೋ ಕೆಲವರಿಗೆ ಇದನ್ನು ನೀಡಬೇಕಂತೆ. ಅವರಿಗೆ ಹಣ ಒಂದಿಷ್ಟು ನೀಡಲಾಗುವುದಂತೆ. ಅಂದರೆ ಈಗಿರುವ ಕೆಲವರ ಉದ್ಯೋಗದ ಖಾತರಿ ಖಾಯಂ ಹೋಗಿಬಿಡುತ್ತದೆ. ಹೋಗಬೇಕು ಎಂದು ಸರ್ಕಾರದ ಮೇಲ ಒತ್ತಡವಿದೆ. ಜನ ಸತ್ತರೂ ಚಿಂತೆಯಿಲ್ಲ. ಆದರೆ ಹಣ ಉಳಿಸಬೇಕು, ವಿಶ್ವಬ್ಯಾಂಕ್ ಹೊಟ್ಟೆಗೆ ಹಾಕಬೇಕು ಅಷ್ಟೆ. ಸರ್ಕಾರವೂ ಹೂಂಗುಡುತ್ತಿದೆ.

ಇಂತಹ ಸ್ಥಿತಿಯಲ್ಲಿ ಸರ್ಕಾರವು ನಿಜವಾಗಿಯೂ ಅರಣ್ಯ ಬೆಳೆಸಿ - ಉಳಿಸಿಕೊಳ್ಳಬೇಕಾದರೆ ಹೆಚ್ಚು ಹಣ-ಗಮನ ಅತ್ಯಗತ್ಯವಿದೆ. ಅಲ್ಲದೇ ಪರ್ಯಾಯ ಹೊಸ ಕೆಲಸಗಳನ್ನು ಯೋಜೆಗಳನ್ನೂ ರೂಪಿಸಿ, ಜಾರಿಗೊಳಿಸಬೇಕು.

ಪೊಲೀಸು ರಾಜ್ಯವಲ್ಲೋ...

ಪುಟ 5 ರಿಂದ

ತಿಂದಿದ್ದ. ಬೇರೆ ಪೊಲೀಸರು ನನ್ನನ್ನು ತಳ್ಳಲು ಮುಂದೆ ಬರಲಿಲ್ಲ. ಆದರೆ ಸ್ವತಃ ಇನ್ಸ್‌ಪೆಕ್ಟರ್ ನನ್ನ ರಟ್ಟೆ ಹಿಡಿದು ತಳ್ಳಿದ. ಆಗ ಮತ್ತೆ ಶುರುವಾಯಿತು ವಿರುಪಾಕ್ಷಪ್ಪನ ಮೇಲೆ ಧಾಳಿ. ಲಾಠಿ ಎತ್ತಿದ ಎಸ್.ಐ.ಗೆ ಹೇಳ್ದೆ "ಏಯ್ ತಾಖತ್ತಿದ್ರೆ ಹೊಡೆದು ನೋಡು" ನನ್ನೊಳಗಿನ ಆಕ್ರೋಶ ಭುಸುಗುಡುತ್ತಿತ್ತು. ಪೊಲೀಸರ ಲಾಠಿಗೆ ಲಯ ತಪ್ಪಿತೇನೋ ವಿರುಪಾಕ್ಷಪ್ಪನ ತಲೆಗೆ ಏಟು ಬಿತ್ತು. ತಲೆ ಒಡೆದು ರಕ್ತ ಸುರಿಯತೊಡಗಿತು. ಇತ್ತ ಸಬ್ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಧಾಳಿ. ಅತ್ತ ಸ್ವತಃ ಎ.ಎಸ್.ಪಿ. ಧಾಳಿ. ಯಾವ ತಪ್ಪಿಗೆ ಎಂದು ನಮಗೆ ಗೊತ್ತಾಗಲಿಲ್ಲ.

ಎ.ಎಸ್.ಪಿ. ಧ್ವನಿ ಕರ್ಕಶವಾಗಿ ಕಿವಿಗೆ ಅಪ್ಪಳಿಸುತ್ತಿತ್ತು. "ಇವ್ರಿಗೆಲ್ಲ 333, 332 ಕೇಸ್‌ನಲ್ಲಿ ಒಳಗೆ ಹಾಕ್ರಿ..." ನನಗೆ ಖಾತ್ರಿಯಾಯಿತು. ಇದು ಪೂರ್ವಯೋಜಿತ. ಇಲ್ಲಾಂದ್ರೆ ಇಂಡಿಯನ್ ಪೀನಲ್ ಕೋಡ್‌ಗಳನ್ನೆಲ್ಲ ಘಟನೆ ಘಟಿಸುವಾಗಲೇ ಹೇಳಲು ಹೇಗೆ ಸಾಧ್ಯವಾಗುತ್ತಿತ್ತು? ಇವರಿಗೇನು ದ್ವೇಷ? ನಮ್ಮ ಹೋರಾಟವೇನಿದ್ರೂ ಸರಕಾರದೊಂದಿಗೆ. ನಾವು ಪೊಲೀಸರೊಂದಿಗೆ ಅನಾವಶ್ಯಕ ತಕರಾರಿಗೆ ಇಳಿದವರೇ ಅಲ್ಲ. ನಾವು ಹಿಂದುಳಿದ ಯುವಕನ ಕೊಲೆ ಮಾಡಿದ ಕಾಂಗ್ರೆ ಮುಖಂಡನನ್ನು ಬಂಧಿಸಲು ಒತ್ತಾಯಿಸುತ್ತಿದ್ದೆವು. ಯಾವುದೇ ಜನಪ್ರತಿನಿಧಿ ಪ್ರಜೆಯ ಹತ್ಯೆ ಮಾಡಿದರೆ ಅಂತವನ ಮೇಲೂ ಕಾನೂನು ಕ್ರಮ ಕೈಗೊಳ್ಳಲು ಒತ್ತಾಯಿಸುವುದು ಪ್ರಜ್ಞಾವಂತರ ಕರ್ತವ್ಯವಾಗಿದೆ. ಅಂಥ ಗೂಂಡಾ ರಾಜಕಾರಣಿಗೆ ಪೊಲೀಸ್ ಇಲಾಖೆಯ ಒಳಗಡೆಯಿಂದಲೇ ತಪ್ಪಿಸಿಕೊಳ್ಳಲು ಸಹಾಯ ಸಿಗುತ್ತಿದೆ ಎಂದು ನಾವು ಆರೋಪಿಸಿದ್ದೇ ಕುಂಬಳಕಾಯಿ ಕಳ್ಳ ಅಂದ್ರೆ, ಪೊಲೀಸ್ ಇಲಾಖೆ ಹೆಗಲು ಮುಟ್ಟಿಕೊಂಡು ನೋಡಿಕೊಳ್ಳುವಂತಾಗಿತ್ತು.

ಸರಕಾರವು ಪೊಲೀಸರ ಮೂಲಕ ಚಳುವಳಿ ಹತ್ತಿಕ್ಕುವ ತಂತ್ರ ಮಾಡಿದ್ದು ನಮಗೆ ನಿನ್ನೆಯೇ ಗೊತ್ತಾಗಿದೆ. ಚಿತ್ತಾಪುರ ತಾಲ್ಲೂಕಿನ ಮಾಡಬೂಳ ಕ್ರಾಸಿನಲ್ಲಿ ರೈತರು, ಯುವಕರು, ಮಹಿಳೆಯರು ಹೀಗೆ ನಾನೂರಕ್ಕೂ ಹೆಚ್ಚು ಜನ ರಸ್ತೆ ತಡೆ ಚಳುವಳಿ ನಡೆಸುತ್ತಿದ್ದರು. ಸಾಮಾನ್ಯವಾಗಿ ತಹಸೀಲ್ದಾರ್ ಅಥವಾ ಸಂಬಂಧಪಟ್ಟ ಅಧಿಕಾರಿಗಳು ಮನವಿ ಪತ್ರ ತೆಗೆದುಕೊಳ್ಳುವುದು ರೂಢಿ. ಆದರೆ ಚಳುವಳಿಕಾರರ ಮನವಿ ತಗೊಳ್ಳಲು ಬಂದವರು ಅಲ್ಲಿನ ಸಬ್ ಇನ್ಸ್‌ಪೆಕ್ಟರ್. ಚಳುವಳಿಕಾರರು ಹೇಳಿದರು "ಸಂಬಂಧಪಟ್ಟ ಅಧಿಕಾರಿಗಳು ಬರಲಿ. ನಾವು ಅವರಲ್ಲಿ ನಮ್ಮ ಕಷ್ಟ ಹೇಳಿಕೊಳ್ತೇವೆ" ಆದರೆ ಪೊಲೀಸ್ ಮನಸ್ಸಿಗೆ ಸಹನೆ, ತಾಳ್ಮೆ ನಾಗರೀಕ ವರ್ತನೆ ಎಲ್ಲಿ ಗೊತ್ತಿದೆ? ಬೀಸಲಿಕ್ಕಾಗಿ ಕೈಯಲ್ಲಿ ಲಾಠಿ ಇದೆ. ಅವಾಚ್ಯವಾಗಿ ಬಯ್ಯಲಿಕ್ಕೆ ಬಾಯಿ ಇದೆ. ಎರಡೂ ಶುರುವಾಯಿತು. ಹಾರಾಡುವ ಕೈಗಳಿಗೆ, ತೂರಾಡುವ ಲಾಠಿಗಳಿಗೆ ಚಳುವಳಿಕಾರರು ಬಲಿಯಾಗತೊಡಗಿದರು. ಮಕ್ಕಳು, ಹೆಂಗಸರೆನ್ನದೆ ಪೊಲೀಸ್ ಲಾಠಿ ನುಗ್ಗಿತ್ತು. ಚಳುವಳಿ ವೀಕ್ಷಿಸುವ ಜನ ಸಾಮಾನ್ಯರ ಮೇಲೂ ಲಾಠಿ ತಟ್ಟಿತು. ಚಳುವಳಿಕಾರರನ್ನು ಬಂಧಿಸಿದರು. ಅವರಲ್ಲಿ 11 ಜನ ಸಣ್ಣ ಮಕ್ಕಳು. ಚಳುವಳಿಗೆ ಬಂದಿದ್ದ ನೂರಾರು ಮಹಿಳೆಯರು ಪೊಲೀಸ್ ಜೀಪನ್ನು ಅಡ್ಡಗಟ್ಟಿದರು. "ನಮ್ಮ ಗಂಡಸರು ಮಕ್ಕಳನ್ನು ಅರೆಸ್ಟ್ ಮಾಡಿದ ಮ್ಯಾಲ ನಮಗ್ಯಾಕ ಬಿಡ್ತೀರಿ. ನಮಗೂ ಅರೆಸ್ಟ್ ಮಾಡ್ರೀ.. ಇಲ್ಲಾಂದ್ರ ನಿಮ್ಮ ಜೀಪ್ ಬಿಡುವುದಿಲ್ಲ" ಎಂದು ಹಠ ಹಿಡಿದರು. ಸಂಘಟನೆಯ ಬಾವುಟ ಮಾತ್ರ ಕೈಯಲ್ಲಿ ಹಿಡಿದ ಆ ಹೆಣ್ಣು ಮಕ್ಕಳ ಧೈರ್ಯಕ್ಕೆ ಪೊಲೀಸರಿಗೆ ನಡುಕಬಂದಿರಬಹುದು.

ಅನಂತರ ಪೊಲೀಸ್ ವ್ಯಾನ್‌ಗಳು ಶಹಾಬಾದ ಪೊಲೀಸ್ ಠಾಣೆಗೆ ಬಂದವು. ಪೊಲೀಸ್ ಅಧಿಕಾರಿಗಳು ಈಗ ಇನ್ನಷ್ಟು ಕ್ರೂರಿಗಳಾದರು. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಬಂದೋಬಸ್ತ್ ಕೆಲಸ ಮಾಡಿ ಹೈರಾಣಾಗಿದ್ದರು. ಸರಕಾರದ ಮೇಲೆ ತಿರುಗಿ ಬಿದ್ದರೆ ಮನೆಗೆ ಕಳಿಸುತ್ತಾರೆ. ಯಾರ ಮೇಲೆ ಸಿಟ್ಟು ತೀರಿಸಿಕೊಳ್ಳುವುದು? ಅಮಾಯಕರ ಮೇಲೆ ಆ ಪೊಲೀಸ್ ಅಧಿಕಾರಿಗಳು ಮಾಡಿದ್ದೂ ಅದೇ ಕೆಲಸ.

"ಏನಲೇ, ಬಿಜೆಪಿ ಕಾಂಗ್ರೆಸ್ ಸರಕಾರಕ್ಕೆ ಬೈದು ಬಾಷಣ ಮಾಡ್ತೀರೆನ್ರಲೇ.. ಈಗ ಮಾಡ್ರೋ ಭೋ.. ಮಕ್ಕಳಾ ಭಾಷಣ. ಚರ್ಮ ಸುಲಿತೀವಿ. ಸ್ಟ್ರೈಕ್ ಮಾಡ್ತಾರಂತೆ ಸ್ಟ್ರೈಕ್.. ನನ್ ಮಕ್ಕಳಾ ಒಬ್ಬೊಬ್ಬರ ಹಲ್ಲು ಎಣಿಸೆಣಿಸಿ ತಗಿತೀನಿ..." ವ್ಯಾನಿನಿಂದ ಇಳಿವಾಗ ಒದೆತ ಮತ್ತು ಬೈಗುಳಗಳೊಂದಿಗೆ ಚಳುವಳಿಕಾರರನ್ನು ಹಣ್ಣುಗಾಯಿ ಮಾಡಿದರು. ಸಣ್ಣ ಮಕ್ಕಳಿಗೂ ಒದೆ ಬಿದ್ದವು.

ಎಲ್ಲರ ಮೇಲೂ ಕೇಸ್ ಹಾಕಿ ಎಫ್.ಐ.ಆರ್. ಹರಿದರು. 10 ಜನ ಮಕ್ಕಳನ್ನು ಸ್ಟೇಷನ್‌ನಿಂದ ಹೊರ ಹಾಕಿದರು. ರಾತ್ರಿ 1 ಗಂಟೆಗೆ ನ್ಯಾಯಾದೀಶರ ಮನೆಯಲ್ಲಿ ಹಾಜರುಪಡಿಸಲು ಸಿದ್ದತೆ ನಡೆಯಿತು. "ಅರೆಸ್ಟ್ ಮಾಡಿದಿರಿ. ನಾವೇನು ಕೊಲೆ ಮಾಡಿ ಬಂದಿಲ್ಲ ಇಲ್ಲಿ. ಊಟ ಹಾಕಿ ಕೋರ್ಟಿಗೆ ಕರಕೊಂಡು ಹೋಗ್ರಿ" ಎಂದು ಹಠ ಹಿಡಿದರು. ಕಡೆಗೂ ಮಲಗಿದ ನ್ಯಾಯಾಧೀಶರನ್ನು ಎಬ್ಬಿಸಿ ಬರೆದಿರುವುದರ ಮೇಲೆ ಸಹಿ ತಗೊಂಡು ಬಂದರು. ಇವರನ್ನೆಲ್ಲ ಕರಕೊಂಡು ಹೋದಲ್ಲಿ ಲಾಠಿ ಬೀಸಿದ್ದು ಹೇಳುತ್ತಾರೆಂಬ ಅನುಮಾನ. ಮಧ್ಯರಾತ್ರಿ, "ನಡ್ರೀ ಕೋರ್ಟಿಗೆ" ಅಂದು ಕರೆದುಕೊಂಡು ಬಂದಿದ್ದು ಗುಲಬರ್ಗಾದ ಕೇಂದ್ರ ಕಾರಾಗೃಹಕ್ಕೆ.

ಅಂದರೆ ಶಾಂತ ರೀತಿಯಲ್ಲಿ ಪ್ರಜಾಪ್ರಭುತ್ವ ಮಾದರಿಯಲ್ಲಿ ಚಳುವಳಿ ಮಾಡುವವರ ಮೇಲೆ ಲಾಠಿ ಚಾರ್ಜ್ ಮಾಡಿಸಿದ್ದು ನೋಡಿದರೆ ಸರಕಾರವೇ ಚಳುವಳಿಯನ್ನು ಹತ್ತಿಕ್ಕಲು ತಂತ್ರ ಮಾಡುತ್ತಿದೆ ಎನ್ನುವುದು ಯಾರಿಗಾದರೂ ಅರಿವಿಗೆ ಬರುತ್ತದೆ.

ಮಾನಪಡೆ, ವಿರುಪಾಕ್ಷಪ್ಪ, ಗಂಗಮ್ಮ ಮತ್ತು ನನಗೆ ಅರೆಸ್ಟ್ ಮಾಡಿದರು. ಆ ಸಂದರ್ಭದಲ್ಲಿ ಇಡೀ ದವಾಖಾನೆಯ ಆವರಣ ತಲ್ಲಣಿಸಿ ಹೋಗಿತ್ತು. ಎಲ್ಲೆಂದರಲ್ಲಿ ಬರಿ ಖಾಕೀ ಬಟ್ಟೆ, ಲಾಠಿಯ ಹೊರತು ಇನ್ನೇನೂ ಕಾಣಿಸುತ್ತಿರಲಿಲ್ಲ. ನನಗೆ, "ಮಾತನಾಡಿದರೆ ಜೈಲು, ಜೈಲಾಗೆ ಗುಂಡೇಟು ಪ್ರಜಾರಾಜ್ಯವೆಂತಾಯಿತೋ ಪಾಪಣ್ಣ ಪೊಲೀಸು ರಾಜ್ಯವಣ್ಣೋ.. ಇದೆಂಥ ರಾಜ್ಯವಣ್ಣಾ, ಇದು ಪೊಲೀಸ್ ರಾಜ್ಯವಣ್ಣಾ... " ಹಾಡು ಥಟ್ಟಂತ ನೆನಪಿಗೆ ಬಂತು. ನಾನು ಎ.ಎಸ್.ಪಿ.ಗೆ ಹೇಳ್ದೆ "ನೀವು ಕವಿಯಲ್ಲ ಜನದ್ರೋಹಿ" ಆತ ಮುಖದ ಬೆವರು ಒರೆಯಿಸಿಕೊಳ್ಳುತ್ತಿದ್ದ. ನಮ್ಮನ್ನು ಹೊತ್ತ ವ್ಯಾನ್ ಬ್ರಹ್ಮಪುರ ಪೊಲೀಸ್ ಠಾಣೆಗೆ ಬಂತು. ಮತ್ತೆ ಕೂಡಲೇ ಪೊಲೀಸ್ ಹೆಡ್ ಕ್ವಾರ್ಟರ್ಸ್ ಕಡೆ ಚಲಿಸಿತು. ಅರೆಸ್ಟ್ ಮಾಡುವುದು, ಲಾಠಿ ಬೀಸುವುದು ಸರಳವಾಗಿತ್ತು. ಆದರೆ ಈಗ ನಮ್ಮನ್ನು ಹೊತ್ತುಕೊಂಡು ನಿಭಾಯಿಸುವುದು ಕಷ್ಟವಾಗತೊಡಗಿತು ಪೊಲೀಸರಿಗೆ.

ನಮಗೆ ನೇರವಾಗಿ ಕಚೇರಿಗೆ ಕರೆದೊಯ್ದರು. ಅನೇಕ ಜನ, ಪೊಲೀಸ್ ಡಿ.ಎಸ್.ಪಿ.ಯವರೆಲ್ಲ ಬಂದು ಮಾತಾಡಿಸಿ ಹೋದರು. ಇಂದೇ ನಮಗೆ ಕೋರ್ಟಿಗೆ ಹಾಜರುಪಡಿಸಲಿಕ್ಕಿಲ್ಲ ಅನಿಸಿತು ನನಗೆ. ವಿರುಪಾಕ್ಷಪ್ಪನ ತಲೆ ಒಡೆದ ಕಾರಣ ಆತನಿಗೆ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದರು.

ಕಾಂಗ್ರೆಸ್ ಎತ್ತ ಸಾಗಿದೆ?

ಪುಟ 7 ರಿಂದ

ಖಾಸಗಿಯವರಿಗೆ ತೆರೆಯಲು, ಪೇಟೆಂಟ್ ವ್ಯವಸ್ಥೆಯಲ್ಲಿ ಪ್ರತಿಗಾಮಿ ಬದಲಾವಣೆ ತರಲು ಸಂಸತ್ತಿನಲ್ಲಿ ತನ್ನ ನಿಲುವಿನ ಮೂಲಕ ಕಾಂಗ್ರೆಸ್ ಅನುಕೂಲ ಮಾಡಿಕೊಟ್ಟಿತು ಎಂಬುದನ್ನು ಮರೆಯಲಾಗದು. ನಮ್ಮ ದೇಶದಲ್ಲಿ, ಸಮಾಜದಲ್ಲಿ ಅಮೆರಿಕಾದ ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಪ್ರಭಾವ ಹೆಚ್ಚುತ್ತಿರುವುದರಿಂದಲೇ ನಮ್ಮ ಸ್ವತಂತ್ರ ವಿದೇಶಾಂಗ ನೀತಿಯ ಆಧಾರ ಕುಸಿಯುತ್ತಿದೆ. ಇಲ್ಲಿಯೂ ಕಾಂಗ್ರೆಸ್‌ನ ನಿಲುವು ಇದಕ್ಕೆ ಅನುಕೂಲಮಾಡಿಕೊಟ್ಟಿತು. ಬಾಯಲ್ಲಿ ಮಾತ್ರ ಅದು ಅಲಿಪ್ತ ವಿದೇಶಾಂಗ ನೀತಿಯ ಮಾತಾಡುತ್ತಿದೆ.

ಪ್ರಧಾನ ಪ್ರತಿಪಕ್ಷವಾಗಿ ಕಾಂಗ್ರೆಸ್ ಬಿಜೆಪಿಯನ್ನು ದೂರ ಸರಿಸುವ, ಅದರ ಮಿತ್ರಕೂಟವನ್ನು ನಿಷ್ಕ್ರಿಯಗೊಳಿಸುವ ಕಾರ್ಯತಂತ್ರಗಳನ್ನು ವಿಕಾಸಗೊಳಿಸುತ್ತದೆ ಎಂಬುದು ಸಹಜ ನಿರೀಕ್ಷೆ. ಆದರೆ ಅದು ತನ್ನ ಹಿಂದಿನ ತಪ್ಪುಗಳಿಂದ ಏನೂ ಪಾಠ ಕಲಿತಿಲ್ಲ ಎಂದು ಉತ್ತರ ಪ್ರದೇಶದ ಬೆಳವಣಿಗೆಗಳು ತೋರಿಸುತ್ತವೆ. ಅಲ್ಲಿನ ಬಿಎಸ್‌ಪಿ-ಬಿಜೆಪಿ ಸಮಯಸಾಧಕ ಕೂಟ ಅಲ್ಪಮತದಲ್ಲಿದೆ ಎಂಬುದನ್ನು ತೋರಿಸಿಕೊಡುವ ಅವಕಾಶವಿದ್ದಾಗ ಕಾಂಗ್ರೆಸ್ ಒಂದು ಧರ್ಮನಿರಪೇಕ್ಷ ಪ್ರತಿಪಕ್ಷದ

ಪುಟ 12 ಕ್ಕೆ

ದೃಷ್ಟಿಕೋನದ ಪ್ರಶ್ನೆ

ಕಾವೇರಿ ನದಿ ನೀರಿನ ವಿವಾದದ ಒಟ್ಟು ವಿದ್ಯಮಾನಗಳಲ್ಲಿ ಸಿಪಿಐ ಪಕ್ಷದ ಕರ್ನಾಟಕ ರಾಜ್ಯ ಘಟಕವು ತಾಳಿದ ನಿಲುವು ಕುರಿತಂತೆ ನಮ್ಮ ಅಭಿಪ್ರಾಯದ ಬಗ್ಗೆ ದೀರ್ಘ ಟೀಕೆಯನ್ನು ಪಕ್ಷದ ಕಾರ್ಯದರ್ಶಿ ಕಾಂ। ಸಿದ್ದನಗೌಡರು ಬರೆದಿದ್ದರು. ಅದಕ್ಕೆ ವಿವರಣಾತ್ಮಕ ಉತ್ತರವನ್ನು ಐಕ್ಯರಂಗದಲ್ಲಿ ನೀಡಲಾಗಿತ್ತು. ಅವರು ಬಯಸಿದ್ದ ವಿಶ್ಲೇಷಣೆ ಬಳಿಕವೂ ಮತ್ತೆ ಮೈಯೆಲ್ಲಾ ಪರಚಿಕೊಂಡು ತುರಿಕೆ ಇದ್ದದ್ದು ಎಲ್ಲಿ ಎಂದೂ (ತಿಂಡಿ - ತುರಿಕೆ ಶಬ್ದಗಳು ಗೌಡರು ಬಳಸಿದ್ದು) ಕೇಳಿದ್ದಾರೆ. ನಾವು ಸುಳ್ಳೇ ಹೇಳುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಈಗಾಗಲೇ ಹಿಂದೆ ಬರೆದುದಕ್ಕಿಂತ ಹೆಚ್ಚಿಗೆ ಹೇಳುವ ಅಗತ್ಯ ಕಾಣುತ್ತಿಲ್ಲ. "ನಿಮ್ಮ ಲೇಖನ ನೀವೇ ಪುನಃ ಓದಿ, ರಾಷ್ಟ್ರದ ನಾಯಕತ್ವದ, ತಮಿಳುನಾಡು ಘಟಕ ನಿಲುವಿಗೂ ನಿಮ್ಮ ನಿಲುವಿಗೂ ಏನು ವ್ಯತ್ಯಾಸವಿದೆಯೆಂದು ಪರಿಶೀಲಿಸಿ, ಅಗತ್ಯವೆನಿಸಿದರೆ ಮತ್ತೆ ನಮ್ಮ ವಿಶ್ಲೇಷಣೆ ಓದಿ". ಇಲ್ಲಿ ಬೇಕಿರುವುದು ದಪ್ಪ ಕನ್ನಡಕ ಹಾಕಿ ಹುಡುಕುವುದಲ್ಲ. ಬದಲಾಗಿ ಸತ್ಯ ಸಂಧಿಸುವ ಪ್ರಾಮಾಣಿಕ ಚಿಕಿತ್ಸಕ ದೃಷ್ಟಿ. ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ನದಿನೀರಿನ ಹಂಚಿಕೆಯ ವಿವಾದದಂತಹ ಪ್ರಶ್ನೆಗಳಲ್ಲಿ ಕರ್ನಾಟಕ ಪರಿಸ್ಥಿತಿಗೆ ಅನ್ವಯಿಸಿ ನೋಡುವ ವೈಜ್ಞಾನಿಕ ವಿಧಾನವಷ್ಟೇ.

ವಿವಿಧ ಭಾಷೆ ಸಂಸ್ಕೃತಿಯ ಜನಾಂಗಗಳನ್ನು, ರಾಷ್ಟ್ರೀಯತೆಗಳೆಂದು ಗುರುತಿಸುವುದು ಹಾಗೂ ಭಾರತವನ್ನು ಬಹುರಾಷ್ಟ್ರೀಯತೆಗಳನ್ನೊಳಗೊಂಡ ಪ್ರಭುತ್ವ ಎಂದು ಗುರುತಿಸುವ ಮಾರ್ಕ್ಸ್‌ವಾದಿ ದೃಷ್ಟಿಕೋನ ಕಾಂ। ಸಿದ್ದನಗೌಡರಿಗೆ ಅಪರಿಚಿತವಲ್ಲವೆಂದು ಭಾವಿಸುತ್ತೇವೆ.

ಹೀಗಾಗಿ ಎರಡೂ ರಾಜ್ಯಗಳ ನಡುವಿನ ನೀರು ಹಂಚಿಕೆಯ ಪ್ರಶ್ನೆ ಮಾರ್ಕ್ಸ್‌ವಾದದ ದೃಷ್ಟಿಯಲ್ಲಿ ಅಂತರಾಷ್ಟ್ರೀಯ ಸೌಹಾರ್ದತೆಯ ಹಾಗೂ ದುಡಿಯುವ ಜನರ ಐಕ್ಯತೆಯ ವಿಶ್ಲೇಷಣೆ ಹಾಗೂ ಅನ್ವಯ ಹೇಗೆ ಎಂಬ ಈ ಪ್ರಶ್ನೆಗೆ ಕಾಂ। ಗೌಡರು ಮುಖಾಮುಖಿಯಾಗುವುದನ್ನು ಬಿಟ್ಟು ಸಿಪಿಐ - ಸಿಪಿಐ(ಎಂ)ನ ಇಂದಿನ ಕಾರ್ಯಕ್ರಮ ಇತಿಹಾಸ, ಅಂತರಾಷ್ಟ್ರೀಯತೆಗಳ ಬಗ್ಗೆ ಚರ್ಚೆ ಮಾಡಲು ಬಯಸುತ್ತಾರೆಂದರೆ ತಿಂಡಿ ಇರುವ ಜಾಗ ಬಿಟ್ಟು ಮೈ ಪರಚಿಕೊಳ್ಳ ಬಯಸುವವರಾರು? ಇನ್ನು "ನಾವು ಆ ರೀತಿ ಎಲ್ಲಿ ಹೇಳಿದ್ದೇವೆ ಹೇಳಿ" ಎಂಬ ಪ್ರಶ್ನೆ ಆಗಸ್ಟ್ 25 ರಿಂದ ಆರಂಭವಾಗಿ ನಡೆದ ಐದು ಸರ್ವಪಕ್ಷಗಳ ಸಭೆಗಳಲ್ಲಿ ಕಾಂ। ಸಿದ್ದನಗೌಡರು ಹಾಜರಾದದ್ದು ಕೇವಲ ಒಂದು ಸಭೆಗೆ ಎಂಬುದನ್ನು ಅವರು ಮರೆತಿರಬೇಕು. ಈ ಐದು ಸಭೆಗಳಲ್ಲಿ ನಾನು ಸ್ವತಃ ಮೂರಕ್ಕೆ ಹಾಜರಾಗಿದ್ದೇನೆ. ಈ ಸಭೆಗಳಲ್ಲಿ ಅವರ ಪಕ್ಷದ ಪ್ರತಿನಿಧಿಗಳು "ನೀರು ಬಿಡಬೇಡಿ" ಎಂಬ ನಿಲುವು ನಿರಂತರ ಪ್ರತಿಪಾದಿಸಿದ್ದಾರೆ. ಒಂದು ತೊಟ್ಟು ನೀರು ಬಿಡುವುದಿಲ್ಲ ಎಂದು ಹೇಳಬೇಡಿ ಎಂಬ ಮಾತು ಕೂಡ ಅವರಿಂದ ಹೊರಬರಲಿಲ್ಲ ಎಂಬುದನ್ನು ಗಮನಿಸದ್ದೇವೆ. ನೀರು ಬಿಡುವುದಿಲ್ಲ ಎಂದ ಎಸ್.ಎಂ. ಕೃಷ್ಣರವರನ್ನು 'ನೀವು ಐತಿಹಾಸಿಕ ಪುರಷರಾಗುತ್ತೀರಿ' ಎಂದು ಹೊಗಳಿದ್ದ ಬಗ್ಗೆ ಈಗಾಗಲೇ ಐಕ್ಯರಂಗದಲ್ಲಿ ಬಯಲಾಗಿದೆ. "ರಕ್ತ ಬೇಕಾದರೂ ಕೊಟ್ಟೇವು ನೀರು ಕೊಡುವುದಿಲ್ಲ" ಎಂದ ಕೆಲವು ಭಾಷಾಂಧ ಸಂಘಟನೆಗಳು. ನೀಡಿದ ಬಂದ್ ಕರೆಗೆ ಬೆಂಬಲ ನೀಡಿದ್ದು ಮತ್ತಿನ್ನೇನು? ನಾವೆಲ್ಲಿ ಹೇಳಿದ್ದೇವೆ ತೋರಿಸಿ ಎನ್ನುವುದಕ್ಕೆ ಇಷ್ಟು ಸಾಕ್ಷಿಗಳು ಸಾಕು.

ದೇಶದ ಇಂದಿನ ಪರಿಸ್ಥಿತಿಯಲ್ಲಿ ಉಭಯ ಕಮ್ಯುನಿಸ್ಟ್ ಪಕ್ಷಗಳು ಹೆಚ್ಚು ಹೆಚ್ಚು ಕ್ರಿಯಾಶೀಲವಾಗುತ್ತಾ, ಐಕ್ಯತೆಯಿಂದ ಕಾರ್ಯಾಚರಣೆಗೆ ಇಳಿಯಬೇಕಿದೆ. ಮಾರ್ಕ್ಸ್‌ವಾದ ಲೆನಿನ್‌ವಾದವನ್ನು ಭಾರತದ ಸ್ಥಿತಿಗೆ ಅನ್ವಯಿಸುವಲ್ಲಿ ಎರಡೂ ಪಕ್ಷಗಳ ನಡುವೆ ಮೂಲಭೂತವಾದ ಕೆಲವು ಭಿನ್ನ ಅಭಿಪ್ರಾಯಗಳಿವೆ. ಅವುಗಳ ಬಗ್ಗೆ ಚರ್ಚೆ ಸಂವಾದ ಅಗತ್ಯವಾಗಿರುವಾಗಲೇ ಜಂಟಿ ಕಾರ್ಯಾಚರಣೆಗೆ ಅದೇನೂ ಅಡ್ಡಿಯಿಲ್ಲ. ಅಂತಹವುಗಳನ್ನೂ ಕಾಂ. ಸಿದ್ದನಗೌಡರು ಕರೆ ನೀಡಿದಂತೆ ಆ ಕಡೆ ಈ ಕಡೆ ಒಂದಿಷ್ಟು ಕಾರ್ಯಕರ್ತರನ್ನು ಕೂಡಿಸಿ, ಮುಕ್ತ ಸಂವಾದದ ಚರ್ಚಾ ಸ್ಪರ್ಧೆ ಏರ್ಪಡಿಸುವ ಮೂಲಕವೂ ಅಲ್ಲ. ಆ ಪ್ರಶ್ನೆಗಳು ಮುಖ್ಯವಾಗಿ ಅಖಿಲ ಭಾರತ ಮಟ್ಟದ್ದವು ಆಗಿವೆ. ಕೇಂದ್ರ ಸಮಿತಿಗಳ ಮಟ್ಟದಲ್ಲಿಯೇ ಅವು ಇತ್ಯರ್ಥವಾಗಬೇಕಿದೆ. ಅದು ಅವರಿಗೂ ಗೊತ್ತಿದೆ. ಇನ್ನು ರಾಜ್ಯದ ಪ್ರಶ್ನೆಗಳು, ಚಳುವಳಿ ಕುರಿತು ಚರ್ಚಿಸಲು ಯಾವಾಗಲೂ ಮುಕ್ತ ಅವಕಾಶಗಳಿವೆ. ಇದಕ್ಕೆ ಅವರೇ ದಿನಾಂಕ ನಿಗದಿಪಡಿಸಿದರೂ ಆದೀತು.

- ಎಸ್.ವೈ. ಗುರುಶಾಂತ್


ಅಮೆರಿಕಾದ ಯುದ್ಧ ಹೇರುವ ವಿರುದ್ಧ ಜನರ ಭಾರೀ ರ್‍ಯಾಲಿ

ಅಮೆರಿಕಾಕ್ಕೆ ಸವಾಲು ಹಾಕಿದ ಉತ್ತರ ಕೊರಿಯಾ

ಅಮರೀಕದ ಮಿಲಿಟರಿ ಬಲಕ್ಕೆ ಬೆದರಿ, ದೊಡ್ಡ ದೊಡ್ಡ ದೇಶಗಳೇ ತಮ್ಮ ನೀತಿಗಳನ್ನು ಅಮೇರಿಕಕ್ಕೆ ಪ್ರಿಯವಾದ ರೀತಿಯಲ್ಲಿ ಬದಲಾಯಿಸಿಕೊಳ್ಳುತ್ತಿವೆ. ಅಂತಹದರಲ್ಲಿ ಉತ್ತರ ಕೋರಿಯಾದಂತಹ ಚಿಕ್ಕ ದೇಶ ಅಮೇರಿಕಕ್ಕೆ ಸವಾಲು ಹಾಕಿದೆ. ಅಮೇರಿಕ 1994ರಲ್ಲಿ ಮಾಡಿಕೊಂಡ ಒಪ್ಪಂದವನ್ನು ಮುರಿದಿದೆ. ಅಲ್ಲದೆ 'ದುಷ್ಟ ದೇಶ'ಗಳ ಕೂಟಕ್ಕೆ ಸೇರಿಸಿ, ಮಿಲಿಟರಿ ಮಧ್ಯಪ್ರವೇಶಕ್ಕೆ ಹವಣಿಸಿದೆ ಎಂದು ಉತ್ತರ ಕೋರಿಯಾ ಅಮೇರಿಕವನ್ನು ಆಪಾದಿಸಿದೆ. ಇದನ್ನು ಪ್ರತಿಭಟಿಸಿ 1994ರ ಒಪ್ಪಂದದ ಅಂಶಗಳನ್ನು ಮನ್ನಿಸದಿರಲು ಉತ್ತರ ಕೋರಿಯಾ ನಿರ್ಧರಿಸಿದೆ. ಅಣ್ವಸ್ತ್ರ ಪ್ರಸಾರಣ ಮತ್ತು ಕ್ಷಿಪಣಿ ನಿಷೇಧ ಈ ಅಂಶ ಸೇರಿದೆ. ಉತ್ತರ ಕೋರಿಯಾದ ಈ ನಿರ್ಧಾರ ಆ ಪ್ರದೇಶದಲ್ಲಿ ಸಣ್ಣ ಬಿಕ್ಕಟ್ಟನ್ನೇ ಸೃಷ್ಟಿಸಿದೆ. ದಕ್ಷಿಣ ಕೋರಿಯಾ, ಚೀನಾ, ಜಪಾನ್, ರಷ್ಯಾ ಈ ಬಿಕ್ಕಟ್ಟಿಗೆ ರಾಜತಾಂತ್ರಿಕ ಪರಿಹಾರಕ್ಕೆ ಪ್ರಯತ್ನಿಸುತ್ತಿವೆ. ಈ ಒತ್ತಡಕ್ಕೆ ಮಣಿದು ಅಮೇರಿಕ ತನ್ನ ಉತ್ತರಕೋರಿಯಾ ವಿರೋಧಿ ನೀತಿ ಬದಲಾಯಿಸಿಕೊಳ್ಳಬೇಕಾಗಿ ಬಂದಿದೆ. ದೇಶದ ಸಾರ್ವಭೌಮತ್ವದ ಹಕ್ಕು ಸಾಧಿಸುವ ಈ ಕ್ರಮ ಶುಭ ಬೆಳವಣಿಗೆ.

ಸಮಾಜವಾದಿ ಉತ್ತರಕೋರಿಯಾ ತನ್ನ ವಿರುದ್ಧ ಅಮೇರಿಕಾ ಇತ್ತೀಚೆಗೆ ಆರಂಭಿಸಿದ್ದ ಸುಳ್ಳು ಆಪಾದನೆಗಳ ಅಪಪ್ರಚಾರವನ್ನು ಪ್ರತಿಭಟಿಸಿ ಕ್ರಮ ಕೈಗೊಂಡಿದೆ. 1994 ರ ಒಪ್ಪಂದವನ್ನು ಮನ್ನಿಸದಿರಲು ನಿರ್ಧರಿಸಿದೆ. ಸಾರ್ವಭೌಮ ದೇಶವಾಗಿ ಅಮೇರಿಕದಿಂದ ದಾಳಿ ಅಪಾಯ ತಡೆಗಟ್ಟಲು ಅಣ್ವಸ್ತ್ರ, ಕ್ಷಿಪಣಿಗಳ ಬೆಳವಣಿಗೆಯ ತನ್ನ ಹಕ್ಕನ್ನು ಪುನಃ ಸಾಧಿಸಲು ನಿರ್ಧರಿಸಿದೆ. ಇದು ಅಮೇರಿಕಕ್ಕೆ 'ಶಾಕ್' ಕೊಟ್ಟಿದೆ. ಉತ್ತರ ಕೋರಿಯಾದ ನೆರೆ ಹೊರೆಯ ದೇಶಗಳಲ್ಲಿ ಆತಂಕ ಉಂಟುಮಾಡಿದೆ. ಅವು ಅಮೇರಿಕದ 'ಆಕ್ರಾಮಕ' ನೀತಿಗೆ ಕಡಿವಾಣ ಹಾಕುವಂತೆ ಒತ್ತಡ ಹಾಕುತ್ತಿದ್ದಾರೆ. ಅದರಲ್ಲಿ ಬಹಳಷ್ಟು ಸಫಲರೂ ಆಗಿದ್ದಾರೆ. ಸಮಾಜವಾದಿ ಉತ್ತರಕೋರಿಯಾ ಒಂದು ರೀತಿಯಲ್ಲಿ ವಿಜಯ ಸಾಧಿಸಿದೆ ಎನ್ನಬಹುದು.


ಅಮೇರಿಕದ ಪ್ರಚೋದನೆಗಳು

ಉತ್ತರಕೋರಿಯಾದ ಈ ನಿರ್ಧಾರಕ್ಕೆ ಕಾರಣ, ಅಮೇರಿಕಾದಿಂದ ಕಳೆದ ಕೆಲವು ವರ್ಷಗಳಿಂದ, ಸತತವಾಗಿ ಬರುತ್ತಿರುವ ಪ್ರಚೋಧನೆ ಕೃತ್ಯಗಳು ಅಮೇರಿಕ 'ದುಷ್ಟದೇಶ'ಗಳ ಪಟ್ಟಿಯಲ್ಲಿ ಇರಾಕ್, ಇರಾನ್ ಜೊತೆ ಉತ್ತರಕೋರಿಯಾವನ್ನೂ ಸೇರಿಸಿದೆ. ಸೆಪ್ಟೆಂಬರ್-11 ರ ನಂತರದ 'ಭಯೋತ್ಪಾದನೆ ಮೇಲೆ ಯುದ್ಧ'ದ ಹೆಸರಲ್ಲಿ ಈ ಎಲ್ಲಾ ದೇಶಗಳ ಮೇಲೆ ಯುದ್ಧ ಹೇರುವ ಹಕ್ಕಿನ ಬಗ್ಗೆ ಅಮೇರಿಕ ಪದೇ ಪದೇ ಹೇಳುತ್ತಿದೆ. ಇನ್ನೊಂದು ಕಡೆ ಕೋರಿಯಾ, 1994ರಲ್ಲಿ ಆದ ಒಪ್ಪಂದದ ಪ್ರಕಾರ ಅಣ್ವಸ್ತ್ರ ಮತ್ತು ಕ್ಷಿಪಣಿ ಬೆಳವಣಿಗೆ ಮತ್ತು ಪ್ರಸರಣ ನಿಷೇಧ ನೀತಿಯನ್ನು ಚಾಚೂ ಪಾಲಿಸುತ್ತಿದೆ. ಆದರೆ ಉತ್ತರ ಕೋರಿಯಾ ಅದನ್ನು ಉಲ್ಲಂಘಿಸಿ ಅಣ್ವಸ್ತ್ರ, ಕ್ಷಿಪಣಿ ಬೆಳವಣಿಗೆ ಮತ್ತು ಪ್ರಸರಣದಲ್ಲಿ ತೊಡಗಿದೆ ಎಂದು ಅಮೇರಿಕ ಆಪಾದಿಸುತ್ತಿದೆ. ಪದೇ ಪದೇ ಯಾವುದೋ ಸಾಕ್ಷ್ಯ-ಆಧಾರಗಳು ಇಲ್ಲದೆ ಇವೆಲ್ಲ ಉತ್ತರ ಕೋರಿಯಾದಲ್ಲಿ ಮಿಲಿಟರಿ ಮಧ್ಯಪ್ರವೇಶ ನಡೆಸಲು ನೆಪಗಳು ಎಂದು ಉತ್ತರಕೋರಿಯಾದ ಆಪಾದನೆ. ಇದಲ್ಲದೆ 1994ರಲ್ಲಿ ಉತ್ತರ ಕೋರಿಯಾ ಅಮೇರಿಕಗಳ ನಡುವೆ ಆದ ಒಪ್ಪಂದವನ್ನು ಅಮೇರಿಕ ಪೂರ್ಣವಾಗಿ ಉಲ್ಲಂಘಿಸಿದೆ ಎಂದು ಆಪಾದಿಸಿದೆ.

1994 ರ ಒಪ್ಪಂದದ ನಾಲ್ಕು ಉಲ್ಲಂಘನೆ

1994ರಲ್ಲಿ ಎರಡು ದೇಶಗಳ ನಡುವೆ ಆದ ಒಪ್ಪಂದದಲ್ಲಿ ಪ್ರಮುಖವಾಗಿ ನಾಲ್ಕು ಅಂಶಗಳಿದ್ದವು. ಇದರ ಆಧಾರದ ಮೇಲೆ ಉತ್ತರ ಕೋರಿಯಾ ಅಣ್ವಸ್ತ್ರ ಮತ್ತು ಕ್ಷಿಪಣಿ ಬೆಳವಣಿಗೆ ಮತ್ತು ಪ್ರಸರಣದ ಸಾರ್ವಭೌಮ ಅಧಿಕಾರವನ್ನು ಬಿಟ್ಟುಕೊಟ್ಟಿತ್ತು.

ಮೊದಲ ಅಂಶವೆಂದರೆ ಉತ್ತರಕೋರಿಯಾ ಗ್ರಾಫೈಟ್-ಆಧಾರಿತ ಅಣು ರಿಯಾಕ್ಟರುಗಳನ್ನು ಬಿಟ್ಟುಕೊಟ್ಟರೆ, ಅಮೇರಿಕ ಉತ್ತರಕೋರಿಯಾಕ್ಕೆ ಲಘು-ಜಲ ಆಧಾರಿತ ರಿಯಾಕ್ಟರು ಗಳನ್ನು ಸರಬರಾಜು ಮಾಡುವುದು ಎಂದು ಎಂಟು ವರ್ಷಗಳು ಕಳೆದರೂ ಅಮೇರಿಕ ಏನೂ ಮಾಡಿಲ್ಲ. ಈ ಅಣು ರಿಯಾಕ್ಟರು ಗಳು ಅಣುಶಕ್ತಿ ಯಿಂದ ವಿದ್ಯುತ್ ತಯಾರಿಸಲು ಅಮೇರಿಕದಿಂದ ಈ ಶರತ್ತಿನ ಉಲ್ಲಂಘನೆ ಯಿಂದಾಗಿ ಉತ್ತರ ಕೋರಿಯಾದ ವಿದ್ಯುತ್ ಶಕ್ತಿಯ ಬಗೆಗಿನ ಯೋಜನೆ ಏರುಪೇರಾಗಿದೆ. 2003 ರ ಹೊತ್ತಿಗೆ 1000 ಮೆಗಾವಾಟ್ ಮತ್ತು ಮುಂದಿನ ವರ್ಷ 2000 ಮೆಗಾವಾಟ್ ವಿದ್ಯುತ್ ಶಕ್ತಿ ಉತ್ಪಾದಿಸಲು ಅಣುಶಕ್ತಿ ಮೇಲೆ ಅವಲಂಬಿಸಿತ್ತು. ಇತ್ತೀಚಿಗೆ ಉತ್ತರ ಕೋರಿಯಾ ನೆರೆ, ಬರ ಎರಡೂ ಪ್ರಾಕೃತಿಕ ಪ್ರಕೋಪಗಳಿಗೆ ತುತ್ತಾಗಿದೆ. ಉಳಲು ಯೋಗ್ಯಭೂಮಿ ಅತಿ ಕಡಿಮೆ (ಶೇಕಡಾ 15) ಇರುವ ದೇಶ. ಅತ್ಯಂತ ಉತ್ತರದಲ್ಲಿದ್ದ ಭಾರಿ ಚಳಿ ಇರುವ ದೇಶ ಇಂತಹ ಸಂದರ್ಭದಲ್ಲಿ ತನ್ನ ವಿದ್ಯುತ್ ಶಕ್ತಿ ಯೋಜನೆ ಏರುಪೇರಾಗುವುದನ್ನು ಕೈಕಟ್ಟಿಕೊಂಡು ಕೂಡಲಾಗದು ಎಂದಿದೆ ಉತ್ತರ ಕೋರಿಯಾ ಸರ್ಕಾರ.



ದುಷ್ಟ ದೇಶಗಳ ಪಟ್ಟಿಯಲ್ಲಿ

ಎರಡು ದೇಶಗಳ ನಡುವೆ ರಾಜಕೀಯ ಮತ್ತು ಆರ್ಥಿಕ ಸಂಬಂಧಗಳನ್ನು ಸಾಮಾನ್ಯಗೊಳಿಸುವುದು ಒಪ್ಪಂದದ ಎರಡನೇ ಅಂಶವಾಗಿತ್ತು. ಅದರ ಬದಲು ಅಮೇರಿಕ ಸಮಾಜವಾದಿ ಕೋರಿಯಾ ವನ್ನು 'ದುಷ್ಟ ದೇಶ'ಗಳ ಪಟ್ಟಿಗೆ ಸೇರಿಸಿದೆ. ಆ ಮೂಲಕ ವಿಶ್ವಸಂಸ್ಥೆಯ ನಿಯಮಗಳನ್ನು ಮುರಿದಿದೆ. ತೈಲ, ಆಹಾರ ಮುಂತಾದ ಅಗತ್ಯ ವಸ್ತುಗಳ ರಫ್ತು ಮೇಲೆ ಏಕಪಕ್ಷೀಯ ದಿಗ್ಬಂದನ ಹೇರಿದೆ. ಜಪಾನಿ ಮತ್ತು ದಕ್ಷಿಣ ಕೋರಿಯಾಗಳ ಪಡೆಗಳ ಜತೆ ಅಮೇರಿಕ ಸೈನಿಕ-ಕವಾಯಿತು ನಡೆಸಿದೆ. ಈ ಕವಾಯಿತುಗಳು ಉತ್ತರ-ಕೋರಿಯಾದ ಮೇಲೆ ಆಕ್ರಮಣಕ್ಕೆ ತಯಾರಿ. ಕಡಲಲ್ಲಿ ಉತ್ತರಕೋರಿಯಾದ ಹಡಗುಗಳ ಮೇಲೆ ಆಕ್ರಮಣವೂ ನಡೆದಿದೆ. ಇತ್ತೀಚೆಗೆ ಉತ್ತರ ಕೋರಿಯಾ ಯೆಮೆನ್‌ಗೆ ಸರಬ ರಾಜು ಮಾಡಿದ್ದ ಶಸ್ತ್ರಾಸ್ತ್ರಗಳಿದ್ದ (ಅಂತರಾಷ್ಟ್ರೀಯ ಕಾನೂನುಗಳನ್ನು ಪಾಲಿಸಿರುವ) ಸ್ಪಾನಿಶ್ ಹಡಗನ್ನು ಕಸಿದು ಕೊಂಡಿದೆ. ಈ ಶಸ್ತ್ರಾಸ್ತ್ರಗಳು ಇರಾಕ್‌ಗೆ ಹೋಗು ವಂತಹವು ಎಂಬ ಸುಳ್ಳು ಆರೋಪದ ಮೇಲೆ, ಯೆಮೆನ್ ಅಧ್ಯಕ್ಷರು ಇದು ನಿಜವಲ್ಲ ಎಂದು ಸಾರ್ವಜನಿಕ ಹೇಳಿಕೆ ಕೊಟ್ಟ ಮೇಲೆ, ಇದು ತಪ್ಪು ಎಂದು ಅಮೇರಿಕ ಒಪ್ಪಿಕೊಳ್ಳಬೇಕಾಗಿ ಬಂದಿತ್ತು.

ಅಣ್ವಸ್ತ್ರದ ಬೆದರಿಕೆ

ಒಪ್ಪಂದದ ಮೂರನೇ ಅಂಶದ ಪ್ರಕಾರ ಅಮೇರಿಕ ಅಣ್ವಸ್ತ್ರ ದಾಳಿ ನಡೆಸುವುದಿಲ್ಲ ಎಂದು ಉತ್ತರ ಕೋರಿಯಾಕ್ಕೆ ವಿಧಿವತ್ತಾಗಿ ಭರವಸೆ ಕೊಡ ಬೇಕಾಗಿತ್ತು. ಅದರ ಬದಲು ಏಕಪಕ್ಷೀಯವಾಗಿ ಅಮೇರಿಕದ ಅಣ್ವಸ್ತ್ರ ದಾಳಿಗೆ ಗುರಿಯಾದ

ಒತ್ತಡಕ್ಕೆ ಮಣಿದ ಅಮೆರಿಕಾ

ಬಹುದಾದ ದೇಶಗಳ ಪಟ್ಟಿಯಲ್ಲಿ ಉತ್ತರ ಕೋರಿಯಾ ಸೇರಿದೆ.

ಅಮೇರಿಕ ಲಘು-ಜಲ ರಿಯಾಕ್ಟರುಗಳ ಸರಬರಾಜು ನಂತರವೇ ಉತ್ತರಕೋರಿಯಾ ತನ್ನ ಅಣುಶಕ್ತಿ-ಸಂಬಂಧಿತ ಸ್ಥಾವರ ಗಳನ್ನು ಅಂತರಾಷ್ಟ್ರೀಯ ಪರೀಕ್ಷಣೆಗೆ ಒಳಪಡಿಸುವುದು ಎಂಬುದು ನಾಲ್ಕನೇ ಅಂಶ. ಉತ್ತರಕೋರಿಯಾ ಈ ಅಂಶದ ಸಾರವನ್ನು ಆಗಲೇ ಮನ್ನಿಸಿದೆ. ಅಣ್ವಸ್ತ್ರ ಪ್ರಸರಣ, ಕ್ಷಿಪಣಿ ನಿಷೇಧ ಒಪ್ಪಂಧಗಳಿಗೆ ಸಹಿ ಹಾಕಿದೆ. ದಕ್ಷಿಣ ಕೋರಿಯಾದ ಜತೆ ಕೋರಿಯಾ ಉತ್ಸದ್ವೀಪವನ್ನು 'ಅಣ್ವಸ್ತ್ರ - ಮುಕ್ತ' ಪ್ರದೇಶ ವಾಗಿಸುವ ಬಗ್ಗೆ ಒಪ್ಪಂದ ಮಾಡಿಕೊಂಡಿದೆ. ಅಮೇರಿಕ ಲಘು-ಜಲ ರಿಯಾಕ್ಟರುಗಳ ಸರಬರಾಜಿಗೆ ಯಾವುದೇ ಕ್ರಮ ತೆಗೆದುಕೊಳ್ಳದೆ, ಉತ್ತರ ಕೋರಿಯಾ ಅಂತರಾಷ್ಟ್ರೀಯ ಪರೀಕ್ಷಣೆಗೆ ಅವಕಾಶ ಕೊಡಬೇಕಾಗಿಲ್ಲ: (1994 ರ ಒಪ್ಪಂದ ಪ್ರಕಾರ)

ಅಮೇರಿಕದ ಮೇಲೆ ರಾಜತಾಂತ್ರಿಕ ಒತ್ತಡ

ಹೀಗೆ ಒಪ್ಪಂದದ ನಾಲ್ಕು ಅಂಶಗಳನ್ನು ಅಮೇರಿಕ ಉಲ್ಲಂಘಿಸಿದೆ. ಆದ್ದರಿಂದ ಉತ್ತರ ಕೋರಿಯಾ ಸಹ ಈ ಒಪ್ಪಂದದ ಅಂಶಗಳನ್ನು ಇನ್ನೂ ಮುಂದೆ ಮಾನ್ಯ ಮಾಡುವುದಿಲ್ಲ. ಈ ಒಪ್ಪಂದದ ಪ್ರಕಾರ ಬಿಟ್ಟುಕೊಟ್ಟಿದ್ದ ಅಣ್ವಸ್ತ್ರ, ಕ್ಷಿಪಣಿ ಬೆಳವಣಿಗೆ ನಡೆಸುವ ಸಾರ್ವಭೌಮ ಹಕ್ಕನ್ನು ಮತ್ತೆ ವಾಪಸು ಪಡೆಯಲಾಗಿದೆ ಎಂದಿದೆ. ಉತ್ತರ ಕೋರಿಯಾಕ್ಕೆ ಅಮೇರಿಕದ ಅಣ್ವಸ್ತ್ರ ದಾಳಿಯ ಬೆದರಿಕೆ ಮೊದಲೇ ಈ ಪ್ರದೇಶದಲ್ಲಿ ಯುದ್ಧದ ಭೀತಿ ಸೃಷ್ಟಿಸಿತ್ತು. ಈಗ ಉತ್ತರ ಕೋರಿಯಾದ ಪ್ರತಿ-ಬೆದರಿಕೆ ಇದನ್ನು ಹೆಚ್ಚಿಸಿದೆ. ಇದರ ಪರಿಣಾಮವಾಗಿ ಜಪಾನ್, ರಷ್ಯಾ, ದಕ್ಷಿಣ ಕೋರಿಯಾ, ಚೀನಾಗಳು ಅಮೇರಿಕದ ಮೇಲೆ ರಾಜತಾಂತ್ರಿಕ ಒತ್ತಡ ಹಾಕಿ, ಸಮಸ್ಯೆಯನ್ನು ಮಾತುಕತೆ ಮೂಲಕ ಪರಿಹರಿಸಿಕೊಳ್ಳುವಂತೆ ಸೂಚಿಸಿವೆ. ಒಪ್ಪಂದ ಮುರಿದು ಬೀಳದಂತೆ ಅಮೇರಿಕ ತನ್ನ ಭಾದ್ಯತೆಗಳನ್ನು ಪೂರೈಸಬೇಕೆಂದು ಒತ್ತಾಯ ಹೇರಿವೆ. ಇದಕ್ಕೆ ಅಮೇರಿಕ ಮಣಿಯುವಂತೆ ಕಾಣುತ್ತಿದೆ.

ದಕ್ಷಿಣ ಕೋರಿಯಾದಲ್ಲಿ ಅಮೇರಿಕ ಒಲ್ಲದ ಅಧ್ಯಕ್ಷ

ಹಿಂದೆ ದಕ್ಷಿಣ ಕೋರಿಯಾ ಸರ್ಕಾರ ಅಮೇರಿಕದ ಕೈಗೊಂಬೆ. ಆದರೆ ಇತ್ತೀಚಿನ ಚುನಾವಣೆಗಳಲ್ಲಿ ದಕ್ಷಿಣಕೋರಿಯಾದ ಜನ ಹೆಚ್ಚು ಸ್ವತಂತ್ರ ಅಧ್ಯಕ್ಷನನ್ನು ಆರಿಸಿದೆ. ಇತ್ತೀಚಿಗೆ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲೂ ಅಮೇರಿಕ ಬೆಂಬಲಿತ ಅಭ್ಯರ್ಥಿ ಸೋತು, ಅವರಿಗೆ ಒಲ್ಲದ ಅಭ್ಯರ್ಥಿ ಆಯ್ಕೆಯಾಗಿದ್ದಾನೆ. ಬಡ ಕೋಳಿ ಸಾಕಣೆ ಮಾಡುವ ರೈತನ ಮಗ ರೋಹ್‌ನ ಆಯ್ಕೆ ದಕ್ಷಿಣ ಕೋರಿಯಾದ ಜನರ ಅಮೇರಿಕಾ -ವಿರೋಧಿ ತೀರ್ಪು ಎಂದು ಹೇಳಲಾಗಿದೆ. ಚುನಾವಣೆ ಸೋತ ಅಭ್ಯರ್ಥಿ ಪ್ರಬಲ ಹ್ಯುಡಾಯ್ ಕೈಗಾರಿಕಾ ಕಂಪನಿಯ ಮೂಲಕ ಸ್ವಾಭಾವಿಕವಾಗಿಯೇ ಆತನಿಗೆ ಅಮೇರಿಕದ ಬೆಂಬಲವೂ ಇತ್ತು. ದಕ್ಷಿಣ ಕೋರಿಯಾದಲ್ಲಿ ಬಿರುಸಾದ ಯುದ್ಧ- ವಿರೋಧಿ ಪ್ರದರ್ಶನಗಳೂ ಆಗಿವೆ. ಕೋರಿಯಾದ ಐಕ್ಯತೆಯತ್ತ ಸಾಗುವುದನ್ನು ತಡೆಗಟ್ಟಲು ಅಮೇರಿಕ ಪ್ರಯತ್ನಿಸುತ್ತಿದೆ ಎಂದೂ ಪ್ರದರ್ಶನಕಾರರು ಆಪಾದಿಸಿದ್ದಾರೆ. ಕೋರಿಯಾದಲ್ಲಿ ಯುದ್ಧ ಆಗದಿರಬೇಕಾದರೆ, ಅಮೇರಿಕ ಈ ಒಪ್ಪಂದದ ಅಂಶಗಳನ್ನು ಪಾಲಿಸಬೇಕು. ದಕ್ಷಿಣ ಕೋರಿಯಾದ ಆತಂಕ ವಿಷಯಗಳಲ್ಲಿ ಮೂಗು ತೂರಿಸುವುದನ್ನು ನಿಲ್ಲಿಸಬೇಕು. ಕೋರಿಯಾ 'ಅಣು ಮುಕ್ತ' ಪ್ರದೇಶ ವಾಗಬೇಕು. ಇದಕ್ಕಾಗಿ ದಕ್ಷಿಣ ಕೋರಿಯಾದಲ್ಲಿ ಅಮೇರಿಕದ ಸೈನ್ಯ (ಇದು ಅಣ್ವಸ್ತ್ರ ಸಜ್ಜಿತ ಎನ್ನಲಾಗಿದೆ) ಕಾಲ್ತೆಗೆಯಬೇಕು. ಈ ಬಗ್ಗೆ ಒತ್ತಾಯ ದಕ್ಷಿಣ ಕೋರಿಯಾದಲ್ಲಿ ಪ್ರಬಲವಾಗುತ್ತಿದೆ. ಎರಡೂ ಕೋರಿಯಾಗಳಲ್ಲೂ ಇತ್ತೀಚಿನ ವಿದ್ಯಮಾನಗಳಿಂದ ಅಮೇರಿಕ ಈ ಪ್ರದೇಶದಲ್ಲಿ ಹಿಂದೆಂದೂ ಆಗದಂತೆ ಒಂಟಿಯಾಗಿದೆ. ಇದು ಉತ್ತಮ ಅಂತರಾಷ್ಟ್ರೀಯ ಬೆಳವಣಿಗೆ. ○

ಅಮೇರಿಕವನ್ನು ಸೋಲಿಸಿದ ಮೊದಲ ದೇಶ ಕೋರಿಯಾ


ಉತ್ತರ ಕೋರಿಯಾದ ಇತ್ತೀಚಿನ ಕ್ರಮಗಳಿಗೆ ಅಮೇರಿಕ ಮಣಿಯಲಾರಂಭಿಸಿದ್ದು ಬಹಳ ಜನರಿಗೆ ಆಶ್ಚರ್ಯ ತಂದಿದೆ. ಇದಕ್ಕೆ ದೊಡ್ಡ ಚರಿತ್ರೆಯಿದೆ. ಎರಡನೇ ಮಹಾಯುದ್ಧದ ನಂತರ ಕೋರಿಯಾವನ್ನು 30-40 ವರ್ಷಗಳ ಕಾಲ ತನ್ನ ಮೇಲ್ವಿಚಾರಣೆಗೆ ಕೊಡಬೇಕು ಎಂದು ಅಮೇರಿಕ ಒತ್ತಾಯಿಸಿತ್ತು. ಆದರೆ ಜಪಾನಿ ಸರ್ವಾಧಿಕಾರತ್ವದ ವಿರುದ್ಧ ವಿಮೋಚನಾ ಸಮರ ಹೂಡಿ ಗೆದ್ದಿದ್ದ ಕೋರಿಯಾದ ಮೇಲೆ ಆಕ್ರಮಣ ಹೂಡಿತು. ದಕ್ಷಿಣ ಭಾಗವನ್ನು ಹಿಂದಿನ ಜಪಾನಿ ಫ್ಯಾಸಿಸ್ಟ್ ಅಧಿಕಾರಿಗಳನ್ನು ಬಳಸಿ ಆಕ್ರಮಿಸಿಕೊಂಡಿತು. ಅಲ್ಲಿ ತನ್ನ ಕೈಗೊಂಬೆ ಸರ್ಕಾರ ಸ್ಥಾಪಿಸಿ ಉತ್ತರ ಕೋರಿಯಾದ ಮೇಲೆ ಯುದ್ಧ ಹೂಡಿತು. ಅತ್ಯಂತ ಕ್ರೂರ ಯುದ್ಧವಾಗಿದ್ದ ಈ ಯುದ್ಧ ಕೊನೆಗೂ ಅಮೇರಿಕದ ಸೋಲಿನಲ್ಲಿ (1953ರಲ್ಲಿ) ಕೊನೆಗೊಂಡಿತು. ಕೋರಿಯಾ ಯುದ್ಧದಲ್ಲಿ ಅಮೇರಿಕದ ಸೈನ್ಯದ ಕ್ರೌರ್ಯ, ಹಿಂಸಾಚಾರ ಕುಖ್ಯಾತವಾಗಿದೆ. ಎರಡನೇ ಮಹಾಯುದ್ಧದ ಸಮಯ ಜಪಾನಿ ಫ್ಯಾಸಿಸ್ಟರು ಕೋರಿಯಾ ನಡೆಸಿದ ಕ್ರೌರ್ಯ, ಹಿಂಸಾಚಾರಕ್ಕೆ ಇತ್ತೀಚಿಗೆ ಅಲ್ಲಿ ಭೇಟಿ ನೀಡಿದ ಜಪಾನಿ ಪ್ರಧಾನಿ ಕ್ಷಮೆ ಕೇಳಿದ್ದರು. ಅಮೇರಿಕದ ಅಧ್ಯಕ್ಷರು ಅಂತಹ ಕ್ಷಮೆ ಕೇಳುವುದೆ? ಉತ್ತರ ಕೋರಿಯಾದ ಜನತೆಯಲ್ಲಿ ಅದನ್ನು ಸಾಧ್ಯ ಮಾಡುವ ತಾಕತ್ತಿದೆ. ಅಮೇರಿಕದ ಮೇಲೆ ಹೀನಾಯ ಸೋಲು ಹೊರಿಸಿದ ಮೊದಲ ದೇಶ ಕೋರಿಯಾ ಎಂದು ಎಲ್ಲರೂ ನೆನಪಿಸಿ ಕೊಳ್ಳಬೇಕು. ವಿಯೆಟ್ನಾಮ್ ಅಮೇರಿಕದ ಮೇಲೆ ಹೊರಿಸಿದ ಸೋಲು ಎರಡನೆಯದು. ಇದರಿಂದಾಗಿ ಕೋರಿಯಾ ಎಂದರೆ ಅಮೇರಿಕ ನಡುಗುತ್ತದೆ. ಅಮೇರಿಕ ಇಲ್ಲಿ ನಾಲ್ಕು ಲಕ್ಷ ಸೈನಿಕರನ್ನು ಯುದ್ಧದಲ್ಲಿ ಕಳೆದುಕೊಂಡಿತ್ತು.

ಪುಸ್ತಕ ಪರಿಚಯ

ಚಿಕಿತ್ಸಕ ಕಣ್ಣುಗಳು ಇಣುಕಿದ ಅಮೆರಿಕಾ

ಅಮೇರಿಕಾಕ್ಕೆ ಹೋದವರು ಬರೆದ ಪ್ರವಾಸ ಕಥನಗಳನ್ನು ನೋಡಿದರೆ ಅವರೆಲ್ಲ ನಿಬ್ಬೆರಗಾಗಿ ಮೂಗಿನ ಮೇಲೆ ಕೈಯಿಟ್ಟು ಕೊಂಡಿರುವುದು ಕಾಣಿಸುತ್ತದೆ. ಇಷ್ಟೊಂದು ತೀವ್ರ ಬೆರಗಿನಲ್ಲಿ ಮುಳುಗಿಹೋಗಿರುವವರು ಅಮೇರಿಕದ ಬಗ್ಗೆ ಬರೆದಾಗ ಇದು ವಸ್ತುನಿಷ್ಠವೇ ಅಲ್ಲವೋ ಖಂಡಿತ ಹೇಳಲು ಸಾಧ್ಯವಿಲ್ಲ. ಬೆರಗಿನ ಹೊರೆ ಹೊತ್ತ ಓದುಗನಿಗೆ ಅಮೇರಿಕಾ ವಸ್ತುನಿಷ್ಠವಾಗಿಯಂತೂ ಕಾಣುವುದು ಸಾಧ್ಯವಿಲ್ಲವಲ್ಲ.

ಈ ಸಮಸ್ಯೆಯನ್ನು ಇನಿತೂ ಹುಟ್ಟಿಸದೆ ಜನ ಸಾಮಾನ್ಯರಿಗೆ ಕಾಣಬಹುದಾದ ಅಮೇರಿಕಾ ವನ್ನು ವಸ್ತುನಿಷ್ಠವಾಗಿ ತೆರೆದಿಡುತ್ತದೆ. 'ಅಮೇರಿಕದಲ್ಲೊಂದು ಇಣುಕು' ಎನ್.ಕೆ. ವಸಂತರಾಜರ ಸಾಫ್ಟ್‌ವೇರ್ ಕಣ್ಣುಗಳು ನಮ್ಮದೇ ಚಿಕಿತ್ಸಕ ಕಣ್ಣುಗಳಂತೆ / ಮನಸ್ಸಿನಂತೆ ಪುಸ್ತಕದುದ್ದಕ್ಕೂ ಕೆಲಸ ಮಾಡಿದೆ.



ವಿಶಿಷ್ಟ ಪ್ರವಾಸ ಕಥನ

ಅಮೇರಿಕಾಕ್ಕೆ ಹೋಗಲು ಬೇಕಾದ ವೀಸಾ ಸಂಪಾದನೆಯಿಂದ ಹಿಡಿದು ಅಲ್ಲಿನ ಪಯಣಗಳವರೆಗೆ ವಿವರ ನೀಡಿರುವ ಪುಸ್ತಕ ತೀರ ನಿಕಟ ವ್ಯಕ್ತಿಯೊಬ್ಬರು ನಮಗೆ ಹೇಳಿದ ಕಥನದಂತೇ ಭಾವನೆ ಹುಟ್ಟಿಸುತ್ತದೆ.

ಬಹಳ ಸರಳವಾಗಿರುವಾಗಲೂ ಹಲವೆಡೆ ಅಮೇರಿಕಾದ ಬಗೆಗಿನ ರಾಜಕೀಯ ಅರ್ಥಶಾಸ್ತ್ರ ವಿಮರ್ಶೆಯಂತೆ ತೆರೆದುಕೊಳ್ಳುವ ಈ ಪುಸ್ತಕ ಅಂತಹ ಯಾವುದೇ ದೋರಣೆ / ನಿಲುವುಗಳನ್ನು ಹೇರದಂತೆಯೇ ಎಚ್ಚರವಹಿಸಿದೆ.

ಅಮೇರಿಕದ ರಾಜಕೀಯದಲ್ಲಿನ ದಿವಾಳಿತನವನ್ನು ಸಾಮಾನ್ಯವಾಗಿ ಯಾವ ಪ್ರವಾಸಕಥನಗಳೂ ವಿವರಿಸ ಹೋಗುವುದಿಲ್ಲ. ಬೆರಗಿನ ಸಿನಿಕಥನದಲ್ಲಿ ಲೇಖಕರೇ ಕೊಚ್ಚಿಕೊಂಡು ಹೋಗಿರುತ್ತಾರೆ. ಹಾಗಿರುವಾಗ ಅವರು ನೆಲಕಚ್ಚಿ ನಿಂತು ಬರೆವ ಮಾತೆಲ್ಲಿ? ವಸಂತರಾಜ್ ಈ ಕೊರತೆಯನ್ನು ತುಂಬಿ ಸಮರ್ಥವಾಗಿ ಈ ಪುಸ್ತಕದಲ್ಲಿ ನೀಗಿಸಿದ್ದಾರೆ.

ಲೇಬರ್ ಡೇ ದಂದು ಕೆನಡಿ ಸ್ಮರಣೆ ಕತ್ತೆ ಆನೆ ರಾಜಕೀಯದಂತಹ ಅಧ್ಯಾಯಗಳು ಅಲ್ಲಿನ ರಾಜಕೀಯವನ್ನು ನಗ್ನವಾಗಿ ತೆರೆದು ತೋರಿಸುವಲ್ಲಿ ಸಫಲವಾಗಿದೆ.

ಹಾಗೆಯೇ ಈ ಪುಸ್ತಕ ವಿವಿಧ ಜೀವನದ ಬಹುಮುಖ್ಯ ಕ್ಷೇತ್ರಗಳನ್ನು ತೆರೆದಿಡುತ್ತದೆ. ,ಕ್ಲಾಸ್ ಸಂತೆಯಲ್ಲೊಂದು ದಿನ, ನಮ್ಮ ಗಿರಾಕಿಗಳ ದಿವಾಳಿಯೇ ನಮ್ಮ ವ್ಯಾಪಾರ ಇಂಟರ್‌ನೆಟ್‌ನ ಜಾಲದಲ್ಲಿ ಅಂತಹ ಅಧ್ಯಾಯಗಳು ಈ ಕ್ಷೇತ್ರ ನೋಟ ನೀಡುವ ಅಧ್ಯಾಯಗಳು.

ಜಗತ್ತಿಗೇ ಸಮಾನತೆಯ ಪ್ರಜಾಪ್ರಭುತ್ವದ ಪಾಠ ಹೇಳುವ ಅಮೇರಿಕಾದಲ್ಲಿನ ವರ್ಣಭೇದ, ಅದರ ಇತಿಹಾಸ, ಅಮಾನುಷತೆಗಳನ್ನು ವಿವರವಾಗಿ ಉದಾಹರಣೆಗಳ ಸಹಿತವಾಗಿ ನೀಡಿರುವುದರಿಂದ ಅಮೇರಿಕಾ ಎಂದರೆ ಭೂಮಿಯ ಮೇಲಿನ ಸ್ವರ್ಗ ಎಂದುಕೊಂಡವರಿಗೆ ಈ ಸ್ವರ್ಗದೊಳಗೆ ಎಂತಹ ನರಕ ಇದೆ ಎಂಬುದನ್ನು ಮುಲಾಜಿಲ್ಲದೆ ಹೇಳುತ್ತದೆ. ಈ ಪುಸ್ತಕ. ಎಮ್ಮೆಟಿಲ್ ಎಂಬ 14 ವರ್ಷದ ಕರಿಯ ಹುಡುಗನ ಕೊಲೆ ಪ್ರಕರಣ ಅಮೇರಿಕಾ ದೇಶದಲ್ಲಿನ ತೀವ್ರ ವರ್ಣದ್ವೇಷದ ಉದಾಹರಣೆ.

ಸಾಮಾನ್ಯ ಜನರ ಹಲವು ಕುತೂಹಲಗಳಾದ ಅಲ್ಲಿನ ತಂತ್ರಜ್ಞಾನ, ಮನೋರಂಜನೆ, ಮಾರುಕಟ್ಟೆಗಳ ಬಗ್ಗೆ ಗಂಭೀರ ವಿಶ್ಲೇಷಣೆಯನ್ನು ಪುಸ್ತಕ ನೀಡುತ್ತದೆ.

ಅಮೇರಿಕಾ ಎಂಬ ದೇಶ ಹೇಗಾಯಿತು, ಇಂದಿನ ಅದರ ಸ್ಥಾನಮಾನಕ್ಕೆ ಕಾರಣಗಳೇನು ಎಂಬ ವಿವರ ವಿಶ್ಲೇಷಣೆಗಳನ್ನು ನೀಡುವ ಈ ಪುಸ್ತಕ ಅಮೇರಿಕದ ಬಗೆಗಿನ ಭ್ರಮೆಗಳನ್ನು ಕಳೆದು ವಸ್ತುನಿಷ್ಠವಾಗಿ ನೋಡಲು ಓದುಗನನ್ನು ಹಚ್ಚುತ್ತದೆ.

ತಮ್ಮ ಪತ್ನಿಗೆ ವಸಂತರಾಜರು ಬರೆದ ಪತ್ರಗಳ ರೂಪದಲ್ಲಿರುವ ಪುಸ್ತಕ ಆ ಕಾರಣದಿಂದಾಗಿಯೇ ಆತ್ಮೀಯರೊಬ್ಬರು ಅಮೇರಿಕದ ಬಗೆಗೆ ನೀಡಿದ ವಿವರಣೆಯಂತೆಯೇ ಮೂಡಿಬಂದಿದೆ. ಸರಳ ಭಾಷೆ ಇಂಗ್ಲೀಷ್‌ನ ಶಬ್ದಗಳ ಯಥಾವತ್ ಬಳಕೆ ಹೆಚ್ಚು ಸಹಜತೆ ತಂದುಕೊಟ್ಟಿದೆ.

ಕೆಲವು ಕಡೆ ವಿಷಯಗಳ ಪುನರಾವರ್ತನೆ ಕಂಡರೂ ಪುಸ್ತಕದಲ್ಲಿನ ವಿಷಯಗಳ ಹರಹು ಗಂಭೀರ ಮತ್ತು ಸರಳ ವಿಶ್ಲೇಷಣೆ ಓದುಗನ ಓದನ್ನೂ ಕುತೂಹಲಕಾರಿಯಾಗಿಯೇ ಕಾಯ್ದುಕೊಂಡು ಹೋಗುತ್ತದೆ.

ಹಲವು ದೊಡ್ಡ ಸಾಹಿತಿಗಳ ಅಮೇರಿಕ ಪ್ರವಾಸ ಕಥನಗಳು ನಮಗೆ ಲಭ್ಯವಿದೆ. ಆದರೆ ಈ ಪುಸ್ತಕಗಳಾವೂ ಸಾಮಾನ್ಯ ಬದುಕಿನ ಸ್ಥರಗಳಿಗೆ ಇಳಿದು ಅಮೇರಿಕದ ಜನಜೀವನದ ಭಾಗವಾಗಿದ್ದುಕೊಂಡೇ ಅವುಗಳ ಆಳ ವಿಶ್ಲೇಷಣೆ ಮಾಡುವ ಪ್ರಯತ್ನಗಳನ್ನು ಮಾಡುವುದಿಲ್ಲ ವಾದ್ದರಿಂದ ಬಹುತೇಕ ಅಮೇರಿಕದಲ್ಲಿ ನೆಲೆಸಿರುವ ಭಾರತೀಯರ ಅತಿಥಿಗಳ ದೃಷ್ಟಿಕೋನಗಳಾಗೇ ಉಳಿದಿವೆ. ಈ ದೃಷ್ಟಿಯಿಂದೇ ಎನ್.ಕೆ.ವಸಂತರಾಜರ ಪುಸ್ತಕ ಹೊಸತನವನ್ನು ತೋರುವುದು.

ಅದು ಅಮೇರಿಕಾದಲ್ಲಿಳಿದ ಸಾಮಾನ್ಯ ಭಾರತೀಯನೊಬ್ಬನ ನೋಟಗಳನ್ನು ನೀಡುವ ಮೂಲಕವೇ ಅಮೇರಿಕದ ಒಟ್ಟಾರೆ ರಾಜಕೀಯ ಆರ್ಥಿಕತೆಗಳ ಬಗ್ಗೆ ಹಲವು ಒಳನೋಟಗಳನ್ನು ತೀರ ಆತ್ಮೀಯ ಭಾಷೆಯಲ್ಲಿ ನೀಡುತ್ತದೆ. ಒಂದು ಇಣುಕು ಇದಕ್ಕಿಂತ ಹೆಚ್ಚೇನು ನೀಡಬೇಕು?

ಅಮೇರಿಕಾದ ಕುರುಡು ಅಭಿಮಾನಿಗಳಿಗಂತೂ ಇದು ಸಿಹಿಯಾಗದ ಪುಸ್ತಕ.

. - ಜಿ.ಎಸ್.ಮಣಿ

> **ಅಮೇರಿಕದೊಳಗೊಂದು ಇಣುಕು**
> ಲೇ. ಎನ್.ಕೆ.ವಸಂತರಾಜ
> ಪ್ರಕಾಶನ
> **ಅಧ್ಯಯನ**
> ಪಂಡಿತ ಸಾರ್ವಜನಿಕ ಗ್ರಂಥಾಲಯ, ಶಿರಸಿ, ಉ.ಕ.
> ಬೆಲೆ ರೂ. 90

ಕಾಂಗ್ರೆಸ್ ಎತ್ತ ಸಾಗಿದೆ?

ಪುಟ 10 ರಿಂದ

ಪಾತ್ರವನ್ನು ಕೂಡಾ ವಹಿಸಲು ನಿರಾಕರಿಸಿತು. ಕಾಂಗ್ರೆಸ್‌ನ ಶಾಸಕರು ರಾಜ್ಯಪಾಲರ ಬಳಿಗೆಹೋಗಲು ನಿರಾಕರಿಸಿದ್ದರೆ ರಾಜ್ಯಪಾಲರು ವಿಧಾನಸಭೆಯ ಅಧಿವೇಶನವನ್ನು ಕರೆಯಲೇಬೇಕಾಗಿ ಬರುತ್ತಿತ್ತು. ಅಷ್ಟೇ ಅಲ್ಲ ಕಾಂಗ್ರೆಸ್‌ನ 23 ಶಾಸಕರ ಗೈರು ಹಾಜರಿಯಿಂದಾಗಿ ಬಹುಮತವಿಲ್ಲದಿದ್ದರೂ ಆಳುವ ಕೂಟದ ಅಭ್ಯರ್ಥಿ ವಿಧಾನಪರಿಷತ್ತಿಗೆ ಆರಿಸಿ ಹೋಗುವಂತಾಯಿತು.

ಕಾಂಗ್ರೆಸ್‌ನ ಸಾಮೂಹಿಕ ನೆಲೆ ಮತ್ತು ಅಖಿಲ ಭಾರತ ಶಕ್ತಿಯಿಂದಾಗಿ ಅದು ಪ್ರತಿಗಾಮಿ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಒಂದು ಪ್ರಮುಖ ಪಾತ್ರವಹಿಸಲು ಸಾಧ್ಯ. ಆದರೆ ಕಾಂಗ್ರೆಸ್ ಮುಖಂಡರ ಈ ಬೇಜವಾಬ್ದಾರಿಯ ಅರಿವಿದೆಯೆಂಬ ಬಗ್ಗೆಯಾಗಲೀ, ಈ ಜವಾಬ್ದಾರಿಯನ್ನು ನಿಭಾಯಿಸಿ ಪ್ರಜಾಪ್ರಭುತ್ವ ಹಾಗೂ ಧರ್ಮನಿರಪೇಕ್ಷತೆಯ ರಕ್ಷಣೆಗೆ ಅವರು ನೆರವಾಗುತ್ತಾರೆ ಎಂಬ ಬಗ್ಗೆಯಾಗಲೀ ಇದುವರೆಗೆ ಏನೂ ಲಕ್ಷಣಗಳಿಲ್ಲ.

ಸಿಪಿಐ(ಎಂ) ನಿಲುವು

ಕಾಂಗ್ರೆಸ್‌ನ ಮಂದದೃಷ್ಟಿಯ ನಿಲುವಿಗೆ ಪ್ರತಿಯಾಗಿ ಸಿಪಿಐ(ಎಂ) ಮುಯ್ಯಿಗೆ - ಮುಯ್ಯಿ ಎಂಬ ನಿಲುವನ್ನೇನೂ ತಳೆಯುವುದಿಲ್ಲ. ತ್ರಿಪುರಾದಲ್ಲಿ ಕಾಂಗ್ರೆಸ್ ಮತ್ತು ಅದರ ದುಷ್ಟ ಮಿತ್ರರ ವಿರುದ್ಧ ದೃಢ ಹೋರಾಟ ನಡೆಸುತ್ತಲೇ ಸಿಪಿಐ(ಎಂ) ಅಖಿಲ ಭಾರತ ಮಟ್ಟದಲ್ಲಿ ಮುಖ್ಯ ಅಪಾಯ ಇರುವುದು ಬಿಜೆಪಿಯಿಂದ ಎಂಬ ತನ್ನ ನಿಲುವನ್ನು ಮುಂದುವರೆಸುತ್ತದೆ; ಇತರ ಎಡಪಕ್ಷಗಳಾದ ಆರ್‌ಎಸ್‌ಪಿ, ಫಾರ್ವರ್ಡ್‌ಬ್ಲಾಕ್‌ನಂತೆ ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ 'ಸಮಾನ ದೂರ' ದ ನಿಲುವು ತಳೆಯುವುದಿಲ್ಲ. ಇವೆರಡೂ ಒಂದೇ ರೀತಿಯ ಅಪಾಯಗಳಲ್ಲ. ಸಂಘ ಕೂಟದ ನಗ್ನ ಹಾಗೂ ಬೆದರಿಕೆಯ ಕುತಂತ್ರದೆದುರು ಕಾಂಗ್ರೆಸ್‌ನ ಚಂಚಲ, ನಿಷ್ಫಲ ನಿಲುವಿನಿಂದಾಗಿ ಜನ-ವಿರೋಧಿ, ದೇಶ-ವಿರೋಧಿ ಆರ್ಥಿಕ ಕಾರ್ಯಕ್ರಮದಲ್ಲಿ ಅದು ಕೂಡಾ ಪೂರ್ಣವಾಗಿ ಭಾಗಿಯಾಗಿರುವುದರಿಂದಾಗಿ ಹಾಗೂ ಅದರ ಶಾಶ್ವತ ಭ್ರಷ್ಟ ಆಡಳಿತ ವೈಖರಿಯಿಂದಾಗಿ ಸಿಪಿಐ(ಎಂ) ಒಂದು ಸ್ವತಂತ್ರ ನಿಲುವನ್ನು ತಳೆಯಲೇಬೇಕಾಗುತ್ತದೆ. ಸಿಪಿಐ(ಎಂ) ತಾನಾಗಿ ಅಥವಾ ಇತರ ಕಾಂಗ್ರೆಸ್ಸೇತರ ಶಕ್ತಿಗಳೊಂದಿಗೆ ಒಂದು ಸಮರ್ಥ ಪರ್ಯಾಯವನ್ನು ಕೊಡಲು ಸಾಧ್ಯವಾಗದ ರಾಜ್ಯಗಳಲ್ಲಿ ತನ್ನ ರಾಜಕೀಯ ಪ್ರಚಾರವನ್ನು ಬಿಜೆಪಿ ವಿರುದ್ಧ ಕೇಂದ್ರೀಕರಿಸುತ್ತ ಮತ್ತು ಅದನ್ನು ಸೋಲಿಸಲು ನೆರವಾಗು ಚುನಾವಣಾ ಕಾರ್ಯತಂತ್ರಗಳನ್ನ ಅನುಸರಿಸುತ್ತದೆ. ಆದರೆ ಕಾಂಗ್ರೆಸ್‌ನೊಂದಿಗೆ ಮೈತ್ರಿ ಸಾಧ್ಯವಿಲ್ಲ. ಹಿಮಾಚಲ ಪ್ರದೇಶ ಚುನಾವಣೆಗಳಲ್ಲಿ ಸಿಪಿಐ(ಎಂ) ಈ ನಿಲುವನ್ನು ತಳೆಯುತ್ತದೆ.

ಭಾರತೀಯ ಸಮಾಜವನ್ನು ಮತ ರಾಜಕೀಯವನ್ನು ಕೋಮುಗ್ರಸ್ತಗೊಳಿಸುವ ಪ್ರಯತ್ನಗಳು ಅಥವಾ ಸರ್ವಾಧಿಕಾರಶಾಹಿಯ ಮುನ್ನಡೆಯಂತಹ ವಿಷಯದಲ್ಲಿ ಸಿಪಿಐ(ಎಂ) ಮತ್ತು ಎಡ ಪಕ್ಷಗಳು ಈಗಾಗಲೇ ಎಲ್ಲ ಧರ್ಮನಿರಪೇಕ್ಷ ಪಕ್ಷಗಳೊಂದಿಗೆ ಕಾಂಗ್ರೆಸ್‌ನೊಂದಿಗೆ ಕೂಡಾ, ವಿಶೇಷವಾಗಿ ಸಂಸತ್ತಿನೊಳಗೆ ಜಂಟಿ ಪ್ರಯತ್ನಗಳನ್ನು ಈಗಾಗಲೇ ನಡೆಸಿದೆ. ಆದರೆ ಕಾಂಗ್ರೆಸ್ ಜನ ಸಾಮಾನ್ಯರನ್ನು ಉದಾರೀಕರಣದ ಮತ್ತು ಸಾಮ್ರಾಜ್ಯಶಾಹಿ-ಪ್ರೇರಿತ ಜಾಗತೀಕರಣದ ಧಾಳಿಗಳಿಂದ ರಕ್ಷಿಸುವ ಆಂದೋಲನಗಳಲ್ಲಿ ತನ್ನ ಗಮನಾರ್ಹ ಸಾಮೂಹಿಕ ನೆಲೆಯನ್ನು ಅಣಿನೆರೆಸಲು ಉದ್ದೇಶಪೂರ್ವಕವಾಗಿ ನಿರಾಕರಿಸುತ್ತಿದೆ. ಇಂತಹ ಸನ್ನಿವೇಶದಲ್ಲಿ ಕಾಂಗ್ರೆಸ್‌ನೊಂದಿಗೆ ಮೈತ್ರಿಗೆ ಹೋದರೆ ಅದು ಎಡಪಕ್ಷಗಳನ್ನು ದುರ್ಬಲಗೊಳಿಸಿ ನವ ಉದಾರವಾದೀ ನೀತಿಗಳ ಸುತ್ತ ಆಳುವವರ್ಗದ ಒಮ್ಮತವನ್ನು ಇನ್ನಷ್ಟು ಬಲಪಡಿಸುತ್ತದಷ್ಟೆ.

ತ್ರಿಪುರಾ ಚುನಾವಣೆಗಳಲ್ಲಿ ಕಾಂಗ್ರೆಸ್ ಅನುಸರಿಸುವ ಕಾರ್ಯತಂತ್ರ ಅಖಿಲಭಾರತ ರಾಜಕೀಯದ ಮಟ್ಟಿಗೆ ಒಂದು ಸಣ್ಣ ಘಟನೆಯಾಗಿ ಕಾಣಬಹುದು. ಆದರೆ ಬಿಜೆಪಿ ಮತ್ತು ಅದರ ಪ್ರತಿಗಾಮಿ ಬಂಟರು ಒಡ್ಡಿರುವ ಅಪಾಯದ ವಿರುದ್ಧ ಮುಂಬರುವ ದಿನಗಳಲ್ಲಿ ಪರಿಣಾಮಕಾರಿಯಾಗಿ ಹೋರಾಡಲು ಸಿದ್ಧಗೊಳ್ಳುವಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಸರಿಯಾದ ಕಾರ್ಯತಂತ್ರಗಳನ್ನ ಅಂಗೀಕರಿಸಬೇಕಾಗುತ್ತದೆ; ಕಾಂಗ್ರೆಸ್‌ನ ಸ್ವಾರ್ಥಿ ವರ್ಗನಿಲುವು ಮತ್ತು ಅದರ ಮಾರಕ ಸಮಯಸಾಧಕತನಕ್ಕೆ ಯಾವುದೇ ಅವಕಾಶ ನೀಡದೇ ಪ್ರಧಾನ ಬೆದರಿಕೆಯನ್ನು ಎದುರಿಸಲು ಮತ್ತು ಅದನ್ನು ಒಂಟಿಯಾಗಿಸಲು ಎಷ್ಟು ಸಾಧ್ಯವೋ ಅಷ್ಟು ವ್ಯಾಪಕವಾದ ಶಕ್ತಿಗಳನ್ನು ಅಣಿನೆರೆಸುವ ಕಾರ್ಯತಂತ್ರಗಳನ್ನ ಅನುಸರಿಸಬೇಕಾಗುತ್ತದೆ.



ಅಮೆರಿಕೆಯ ಯುದ್ಧ ನೀತಿಯ ವಿರುದ್ಧ ಮೈಸೂರಿನಲ್ಲಿ ನಡೆದ ಯುದ್ಧವಿರೋಧಿ ಸಮಾವೇಶದ ಮೆರವಣಿಗೆ. ಇದರಲ್ಲಿ ಪ್ರೊ. ಕೆ.ರಾಮದಾಸ್, ಲಿಂಗದೇವರು ಹಳೆಮನೆ,ದೇವನೂರ.ಮಹಾದೇವ, ಸಿಪಿಐ(ಎಂ)ನ ಜಿ.ಎನ್.ನಾಗರಾಜ್ ಇನ್ನಿತರ ಪ್ರಮುಖರು ಭಾಗವಹಿಸಿದ್ದರು.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH